
# ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ

ಎನ್. ಹುಚ್ಚಪ್ಪ ಮಾಸ್ತರ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ

ಎನ್. ಹುಚ್ಚಪ್ಪ ಮಾಸ್ತರ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

CHANDRAGUTTI RENUKAMBE JAATHRE - A Writeup on the Car Festival of goddess Renukambe by Sri. N. Hucchappa Mastara, published by Karnataka Janapada and Yakshagana Academy, Bangalore.

First Edition : 1997

Copies : 1000

Price : Rs. 15/-

*Printed at :*
**ILA PRINTERS**
153, 4th Main Road, 8th Cross
Chamarajpet, Bangalore - 560 018
Phone : 623159

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನಮ್ಮ ಅವಿನಾಶಿಯಾದ ಹಾಗೂ ಬಹುಮಟ್ಟಿಗೆ ಸಂತತ ಪ್ರಸ್ತುತವಾದ ನಮ್ಮ ಮೂಲ ಸಂಸ್ಕೃತಿಯನ್ನು ಕುರಿತು ಸಂಶೋಧನೆ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣಾ ಕಾರ್ಯವನ್ನು ನಡೆಸುತ್ತಿದೆ. ನಮ್ಮ ಸಂಸ್ಕೃತಿಯಲ್ಲಿ ಅದರ ಹಲವು ಅರ್ಥಗಳಲ್ಲಿ ಗರ್ಭೀಕರಿಸಿಕೊಂಡಿರುವ ಜಾತ್ರೆಗಳು ಈ ದೃಷ್ಟಿಯಿಂದ ಪರಿಶೀಲನೆಯ ಹಾಗೂ ವಿಶ್ಲೇಷಣೆಗೆ ಅರ್ಹವಾಗಿವೆ. ಈ ಕಾರಣದಿಂದ ನಮ್ಮ ಜಾತ್ರೆಗಳನ್ನು ಕುರಿತಾದ ಪುಸ್ತಕ ಮಾಲೆಯೊಂದನ್ನು ಅಕಾಡೆಮಿ ಆರಂಭಿಸಿ ಈಗಾಗಲೇ ಹಲವು ಕೃತಿಗಳನ್ನು ಹೊರತಂದಿದೆ.

ಕನ್ನಡ ನಾಡು ಗ್ರಾಮೀಣರ ತವರುಭೂಮಿ, ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ಗ್ರಾಮದೇವತೆಯ ದೇವಾಲಯವಿದ್ದು ಅದು ಆ ಹಳ್ಳಿಯ ಜನರ ಬದುಕಿನ ಬಹುಭಾಗವನ್ನು ನಿಯಂತ್ರಿಸುವ ಮತ್ತು ರೂಪಿಸುವ ಒಂದು ವಿಶಿಷ್ಟ ಶಕ್ತಿಯ ಕೇಂದ್ರವಾಗಿದೆ. ಈ ಗ್ರಾಮದೇವತೆಗಳಲ್ಲಿ ಅನಂತ ವೈವಿಧ್ಯವಿದೆ. ಪ್ರತಿಯೊಂದು ದೇವತೆಯೂ ತನ್ನದೆ ಆದ ಹುಟ್ಟಿನ ಬೆಳವಣಿಗೆಯ ಪ್ರಭಾವದ ರೋಚಕ ಇತಿಹಾಸವನ್ನು ಹೊಂದಿರುವುದಲ್ಲದೆ ತನ್ನ ಪ್ರಭಾವಳಿಯ ಸುತ್ತಮುತ್ತ ಹಲವು ಸಂಪ್ರದಾಯಗಳನ್ನು ಆಚರಣೆಗಳನ್ನು ವಿಧಿನಿಷೇಧಗಳನ್ನು ಹಾಗೂ ಕಲೆ ಮತ್ತು ಸಾಹಿತ್ಯವನ್ನು ವಿಶಿಷ್ಟ ರೀತಿಯಲ್ಲಿ ಹುಟ್ಟುಹಾಕಿದೆ. ಹಳ್ಳಿಗರ ಬದುಕಿಗೆ ಸಂತೋಷ ಸಂಭ್ರಮಗಳನ್ನು ತರುವ ಉಲ್ಲಾಸವನ್ನು ವಿಸ್ತರಿಸುವ ಮತ್ತು ಶಾಂತಿ ನೆಮ್ಮದಿಗಳನ್ನು ದೊರಕಿಸುವ ಹಲವು ಹಬ್ಬಗಳು ಮತ್ತು ಜಾತ್ರೆಗಳು ಈ ಗ್ರಾಮದೇವತೆಗೆ ಸಂಬಂಧಿಸಿ ನಡೆಯುತ್ತವೆ. ಈ ಹಬ್ಬ ಮತ್ತು ಜಾತ್ರೆಗಳಲ್ಲಿ ನಡೆಯುವ ವಿವಿಧ ರೀತಿಯ ಸಂಪ್ರದಾಯಗಳು, ಉತ್ಸವಗಳು, ಹರಕೆ-ಹಾಡುಗಳು ನಮ್ಮ ಗ್ರಾಮೀಣ ಜನಜೀವವಾದ ಒಂದು ಅಮೂಲ್ಯ ಭಾಗವಾಗಿ ಪರಿಣಮಿಸಿವೆ. ಅಕ್ಷರ ನಾಗರೀಕತೆಯ ಮತ್ತು ವಿಚಾರವಂತಿಕೆಯ ಈ ಯುಗದಲ್ಲೂ ಈ ಹಬ್ಬ ಜಾತ್ರೆಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಳ್ಳದೆ ಉಳಿದು ಬೆಳೆದು ವೈವಿಧ್ಯತೆಯನ್ನು ಪಡೆಯುತ್ತ ಬಂದಿರುವುದನ್ನು ಗಮನಿಸಿದರೆ ಅವು ಜೀವನದಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿವೆ ಎಂಬುದು ಸಾಬೀತಾಗುತ್ತದೆ. ಈ ಸಂದರ್ಭದ ಅಧ್ಯಯನ ನಮ್ಮ ಪುರಾತನ ಇತಿಹಾಸ, ಮಾನವ ಶಾಸ್ತ್ರ, ಮಾನಸ ಶಾಸ್ತ್ರ ಹಾಗೂ ಸಂಸ್ಕೃತಿಗಳ ಬಗ್ಗೆ ಹೊಸ ಹೊಸ ಬೆಳಕನ್ನು ಚೆಲ್ಲುತ್ತದೆ. ಆದ್ದರಿಂದ ನಮ್ಮ ಅಕಾಡೆಮಿ ಗ್ರಾಮೀಣ ಸಂಸ್ಕೃತಿಯ ಕೇಂದ್ರ ಬಿಂದುವಾದ ಗ್ರಾಮ ದೇವತೆಗಳ ಮತ್ತು ಅವುಗಳ ಮಹಿಮ

ಪ್ರಕಾಶನದ ವಿಶಿಷ್ಟ ಸಂದರ್ಭವಾದ ಜಾತ್ರೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸಿದೆ ಮತ್ತು ಪ್ರಕಟಿಸುತ್ತಿದೆ.

ಈ ಮಾಲೆಯಲ್ಲಿ ಶ್ರೀ ಹುಚ್ಚಪ್ಪ ಮಾಸ್ತರ ಅವರು ಬರೆದಿರುವ "ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ" ಎಂಬ ಕೃತಿ ವಿಶಿಷ್ಟವಾದುದಾಗಿದೆ.

ಜಾನಪದ ಸಂಸ್ಕೃತಿಯಲ್ಲಿ ಶಕ್ತಿದೇವತೆಗಳು ವಹಿಸುವ ಪಾತ್ರ ಅತ್ಯಂತ ಪ್ರಮುಖವೂ ಮತ್ತು ವ್ಯಾಪಕವೂ ಆದದ್ದು. ಜನಪದರ ಬಾಳು ಬದುಕಿನ ಮೇಲೆ ಈ ದೇವತೆಗಳ ಪ್ರಭಾವ ಮತ್ತು ಪರಿಣಾಮಗಳು ಇಂದೂ ಕೂಡ ದಟ್ಟವಾಗಿಯೇ ಇವೆ. ಆಧುನಿಕ ಶಿಕ್ಷಣ ಮತ್ತು ನಾಗರೀಕತೆಗಳು ತೀವ್ರ ವೇಗದಲ್ಲಿ ಜನಜೀವನವನ್ನು ವ್ಯಾಪಿಸುತ್ತಿರುವ ಈ ಕಾಲದಲ್ಲೂ ಸಹ ಈ ದೇವತೆಗಳ ಆರಾಧನೆ ಮತ್ತು ಅವುಗಳಿಗೆ ಸಂಬಂಧಪಟ್ಟ ಆಚರಣೆಗಳು ಅದೃಶ್ಯವಾಗದೆ ಮುಂದುವರಿದೇ ಇವೆ. ನಮ್ಮ ಆಧುನಿಕರ ಮೆದುಳು ಮಾತ್ರ ನಾಗರೀಕತೆಯ ಕಡೆ ವಾಲಿದ್ದು ಮನಸ್ಸು ಬಹುಮಟ್ಟಿಗೆ ಸಂಪ್ರದಾಯಸ್ಥವಾಗಿರುವುದೇ ಇದಕ್ಕೆ ಮುಖ್ಯ ಕಾರಣವಿಹುದು. ಇಂತಹ ಶಕ್ತಿದೇವತೆಗಳಲ್ಲಿ ಚಂದ್ರಗುತ್ತಿ ರೇಣುಕಾಂಬೆಯೂ ಒಂದು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಚಂದ್ರಗುತ್ತಿಯಲ್ಲಿರುವ ರೇಣುಕಾಂಬೆ ಅಪಾರ ಸಂಖ್ಯೆಯ ಭಕ್ತರ ಗಮನ ಗೌರವಗಳಿಗೆ ಪಾತ್ರವಾದ ಅತ್ಯಂತ ವಿಶಿಷ್ಟ ದೇವತೆ. ಈ ದೇವತೆಯನ್ನು ಕುರಿತು ಕೇವಲ ಬೆರಳೆಣಿಕೆಯಷ್ಟು ಮಾತ್ರ ಚಿಕ್ಕ ಚಿಕ್ಕ ಕೃತಿಗಳು ಪ್ರಕಟವಾಗಿವೆ. ಆದರೆ ಶ್ರೀ ರೇಣುಕಾಂಬೆಯ ಪೌರಾಣಿಕ ಹಿನ್ನೆಲೆ, ಅದರ ಆರಾಧನೆ ಹುಟ್ಟಿ ಹಂತಹಂತವಾಗಿ ವಿಸ್ತರಿಸಿ ಕನ್ನಡ ನಾಡಿನ ಭಕ್ತಸ್ತೋಮವನ್ನು ಆಕರ್ಷಿಸಿದ ಮತ್ತು ಪ್ರಭಾವಿಸಿದ ಬಗೆಯನ್ನು, ರೇಣುಕಾಂಬೆಯ ವಿವಿಧ ನೆಲೆಗಳ ಪರಿಚಯವನ್ನು ಮತ್ತು ಅದರ ಸಾಂಸ್ಕೃತಿಕ ವಿವರಗಳನ್ನು ಬಿಂಬಿಸುವ ಕೃತಿಗಳು ರಚನೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಶ್ರೀ ಹುಚ್ಚಪ್ಪ ಮಾಸ್ತರ ಅವರು ರಚಿಸಿರುವ ಈ ಕೃತಿ ಈ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳುವವರಿಗೆ ಒಂದು ಉತ್ತಮ ಪ್ರವೇಶಿಕೆಯಾಗಿದೆ. ಶ್ರೀ ಹುಚ್ಚಪ್ಪ ಮಾಸ್ತರ ಅವರು ನಮ್ಮಲ್ಲಿನ ಪ್ರಮುಖ ಜಾನಪದ ಕಲಾವಿದರು. ನಾಟಕಗಳ ನಿರ್ದೇಶಕರಾಗಿ, ಪಾತ್ರಧಾರಿಗಳಾಗಿ ಮುಖ್ಯ ಗಾಯಕರಾಗಿ ಹಾಗೂ ಗಿರಿಜನ ಕೇಂದ್ರದ ಮುಖ್ಯರಾಗಿ ತುಂಬ ಜನಪ್ರಿಯರಾಗಿದ್ದಾರೆ. ಇದೇ ಪ್ರದೇಶಕ್ಕೆ ಸೇರಿದ ಈ ಲೇಖಕರು ತಮ್ಮ ಈ ರಚನೆಯಲ್ಲಿ ತಮ್ಮ ಪರಿಶ್ರಮ ಅಭ್ಯಾಸಪೂರ್ಣತೆ ಹಾಗೂ ಶೋಧನಾ ದೃಷ್ಟಿಯನ್ನು ಗಮನಾರ್ಹ ಪ್ರಮಾಣದಲ್ಲಿ ಬಿಂಬಿಸಿದ್ದಾರೆ. ಇಂಥದೊಂದು ಕೃತಿಯನ್ನು ರಚಿಸಿಕೊಟ್ಟ ಶ್ರೀ ಎನ್. ಹುಚ್ಚಪ್ಪ ಮಾಸ್ತರ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಹಾಗೆಯೇ ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಇಳಾ ಪ್ರಿಂಟರ್ಸ್‌ನ ಕಾರ್ಮಿಕ ವರ್ಗಕ್ಕೆ ನಮ್ಮ ಕೃತಜ್ಞತೆಯ ನಮನಗಳು.

ಡಾ. ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು

# ಕೃತಜ್ಞತೆಗಳು

ಈ ಕೃತಿಯನ್ನು ರಚಿಸಲು ಕಾರಣರಾದ ಕರ್ನಾಟಕ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಡಾ. ಹೆಚ್: ಜೆ. ಲಕ್ಕಪ್ಪಗೌಡರಿಗೆ ಮತ್ತು ಅಕಾಡೆಮಿಯ ರಿಜಿಸ್ಟ್ರಾರ್ ಹಾಗೂ ಸದಸ್ಯರುಗಳಿಗೆ.

ಕ್ಷೇತ್ರ ಕಾರ್ಯದಲ್ಲಿ ಸಹಕಾರ ನೀಡಿದ ಮಿತ್ರರಾದ ಶ್ರೀ ಸರ್ಫ್ರಾಜ್, ಮಿರ್ಜಿ ಗಣಪತಿ ಮತ್ತು ಶ್ರೀಮತಿ ರೇಣುಕಮ್ಮ ಶಿವಪ್ಪ ಮಾಸ್ತರ್, ರೇಣುಕಾಂಬ ದೇವಾಲಯದ ಪ್ರಧಾನ ಅರ್ಚಕರಾದ ಶ್ರೀ ದತ್ತಾತ್ರೇಯ ಭಟ್, ಕಾರ್ಯ ನಿರ್ವಹಣಾ ಅಧಿಕಾರಿಗಳಾದ ಶ್ರೀ ಟಿ. ಎಸ್. ಸಿದ್ಧಪ್ಪ ಹಾಗೂ ಚಂದ್ರಗುತ್ತಿ ಮತ್ತು ಚಿಕ್ಕಮಾಕೊಪ್ಪ ಗ್ರಾಮಗಳ ಗದ್ದೇಮನೆ ಗುತ್ಯಪ್ಪ, ಯಾಲಕ್ಕಿ ರಾಮಪ್ಪ, ಬಡಗಿ ಪಕ್ಕೀರಪ್ಪ, ಇವರುಗಳಿಗೆ.

ದಿನಾಂಕ ೮-೬-೯೬

ಎನ್. ಹುಚ್ಚಪ್ಪ ಮಾಸ್ತರ
ಹಿರೇಮನೆ
ಸಾಗರ - ಶಿವಮೊಗ್ಗ

# ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ

ಕರ್ನಾಟಕ ರಾಜ್ಯದಲ್ಲಿಯೇ ಶಿವಮೊಗ್ಗ ಜಿಲ್ಲೆ ವೈವಿಧ್ಯಮಯ ಸಂಸ್ಕೃತಿಯ ಬೀಡು. ಮಲೆನಾಡು, ಅರೆಮಲೆನಾಡು, ಬಯಲು ಪ್ರದೇಶ. ಹೀಗೆ ವಿವಿಧ ಪ್ರಾಕೃತಿಕ ವಲಯಗಳಿಂದ ಕೂಡಿದ ಈ ಜಿಲ್ಲೆ ಜನಸಂಖ್ಯೆಯಲ್ಲಿ ರಾಜ್ಯದಲ್ಲಿ ಹನ್ನೆರಡನೇ ಸ್ಥಾನ ಹೊಂದಿದ್ದು, ವಿಸ್ತೀರ್ಣದಲ್ಲಿ ಒಂಬತ್ತನೇ ಸ್ಥಾನವನ್ನು ಪಡೆದಿದೆ.

ವಿಪುಲವಾದ ಅರಣ್ಯ ಸಂಪತ್ತಿನಿಂದ ಕೂಡಿದ್ದು, ಕೆಲವು ತಾಲ್ಲೂಕುಗಳು ಶ್ರೀಗಂಧದ ಒಡಲಾಗಿವೆ. ಶರಾವತಿ ವಿದ್ಯುದಾಗಾರ ಜಿಲ್ಲೆಯ ಮುಖ್ಯ ಕೊಡುಗೆ. ಕನ್ನಡದ ಪ್ರಸಿದ್ಧ ಕವಿಗಳು ಮತ್ತು ಸಾಹಿತಿಗಳು ಜಿಲ್ಲೆಯಲ್ಲಿ ಹುಟ್ಟಿ ಜಿಲ್ಲೆಯ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೆಸರು ತಂದಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿ ಆರನೇ ಸ್ಥಾನವನ್ನು ಹೊಂದಿದ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಮತ್ತು ರೈತ ಚಳುವಳಿಗಳು ಜನ್ಮ ತಾಳಿವೆ ಎಂಬುದು ಹೆಮ್ಮೆಯ ವಿಚಾರ.

ಶಿವಮೊಗ್ಗ ಜಿಲ್ಲೆಯ ಒಂಬತ್ತು ತಾಲ್ಲೂಕುಗಳಲ್ಲಿ ಜಿಲ್ಲೆಯ ಪಶ್ಚಿಮ ದಿಕ್ಕಿಗಿರುವ ಸೊರಬ ತಾಲ್ಲೂಕು ಮಲೆನಾಡಿನ ಸೌಂದರ್ಯ ಮತ್ತು ಶ್ರೀಮಂತಿಕೆಯನ್ನು ಹೊಂದಿದ ಪ್ರದೇಶ. ಈ ತಾಲ್ಲೂಕಿನ ಪೂರ್ವಕ್ಕೆ ಶಿಕಾರಿಪುರ, ದಕ್ಷಿಣಕ್ಕೆ ಸಾಗರ, ಪಶ್ಚಿಮಕ್ಕೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಶಿರಸಿ, ಉತ್ತರದಲ್ಲಿ ಧಾರವಾಡ ಜಿಲ್ಲೆಯ ಹಿರೇಕೆರೂರು, ಹಾನಗಲ್ಲು ತಾಲ್ಲೂಕುಗಳಿವೆ. ಸೊರಬ ತಾಲ್ಲೂಕನ್ನು ಆರು ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. ಸೊರಬ, ಚಂದ್ರಗುತ್ತಿ, ಕುಪ್ಪಗಡ್ಡೆ, ಜಡೆ, ಉಳಾವಿ ಹಾಗೂ ಆನವಟ್ಟಿ ಹೋಬಳಿಗಳು.

ಸಹ್ಯಾದ್ರಿ ಬೆಟ್ಟಗಳ ಸಾಲು ಸೊರಬ ತಾಲ್ಲೂಕಿನಿಂದ ತೀರ್ಥಹಳ್ಳಿ ತಾಲ್ಲೂಕಿನವರೆಗೆ ಗೋಡೆಯಂತೆ ಹಬ್ಬಿ ನಿಂತಿರುವುದರಿಂದ ಇಲ್ಲಿ ಕಾಡು ಹೆಚ್ಚಾಗಿದೆ. ಸೊರಬದ ಅರಣ್ಯ ಒಂದು ಕಾಲದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದ್ದವು. ಇಂದಿಗೂ ನೇರಳೆ, ಶಿವನೇ, ನಂದಿ, ಹೊನ್ನೆ, ಮತ್ತಿ, ಹುನಾಲು, ದಿಂಡಿಗ, ಶ್ರೀಗಂಧ, ಬೀಟೆ, ತೇಗ ಮುಂತಾದ ಬೆಲೆ ಬಾಳುವ ಮರಗಳು ಬೆಳೆಯುತ್ತವೆ.

ಸೊರಬ ಹಿಂದಿನಿಂದಲೂ ಶ್ರೀಗಂಧಕ್ಕೆ ಪ್ರಸಿದ್ಧವಾದುದು, ಶ್ರೀಗಂಧದ ಪರಿಮಳವನ್ನು ಬೀರುವ ಈ ಪ್ರದೇಶವನ್ನು ಸುರಭೀಪುರ ಎಂದು ಕರೆಯಲಾಗುತ್ತಿತ್ತು. ಸುರಭಿ ಎಂದರೆ ಸುಂದರ, ಸುಗಂಧ, ಸುವಾಸನೆ, ಕಾಮಧೇನು, ವಸಂತಋತು ಮುಂತಾದ ಅರ್ಥಗಳಿವೆ.

## ಚಂದ್ರಗುತ್ತಿ

ಚಂದ್ರಗುತ್ತಿ ಸೊರಬಕ್ಕೆ ಹದಿನೇಳು ಕಿಲೋಮೀಟರು ದೂರದಲ್ಲಿ ವಾಯುವ್ಯದ ಮೂಲೆಯಲ್ಲಿರುವ ಹೋಬಳಿ ಕೇಂದ್ರ. ಕರ್ನಾಟಕದ ಪ್ರಸಿದ್ಧ ಐತಿಹಾಸಿಕ, ಪ್ರೇಕ್ಷಣೀಯ ಸ್ಥಳವಾಗಿರುವುದಲ್ಲದೆ, ಸುಂದರವಾದ ನಿಸರ್ಗ ತಾಣವೂ ಆಗಿದೆ. ಪ್ರವಾಸಿ ಬುಕಾನನ್ ಚಂದ್ರಗುತ್ತಿಯ ಎತ್ತರವಾದ ಬೆಟ್ಟ, ಬೆಟ್ಟದ ಮೇಲಿನ ಭಾರಿ ವನ ಸಂಪತ್ತು, ಅಲ್ಲಿಂದ ಕಾಣುವ ದೃಶ್ಯ ನಯನ ಮನೋಹರ - ಎಂದು ತನ್ನ ಪ್ರವಾಸ ಗ್ರಂಥದಲ್ಲಿ ವರ್ಣಿಸಿದ್ದಾನೆ.

ಸುಮಾರು ೮೫೦ ಮೀಟರು ಎತ್ತರದ ಕಲ್ಲುಬೆಟ್ಟದ ತಪ್ಪಲಲ್ಲಿ ವರದಾ ನದಿಯ ದಂಡೆಯ ಮೇಲಿದೆ. ಸುಮಾರು ೧,೫೦೦ರಿಂದ ೨,೦೦೦ ಜನಸಂಖ್ಯೆ ಹೊಂದಿರುವ ಚಂದ್ರಗುತ್ತಿಯಲ್ಲಿ ಬೋವಿ, ಆಗಸ, ಮುಸಲ್ಮಾನ, ಬ್ರಾಹ್ಮಣ, ಅಕ್ಕಸಾಲಿಗ, ದೀವರು, ಗೌಡಸಾರಸ್ವತ, ಲಿಂಗಾಯಿತ, ಆದಿಕರ್ನಾಟಕ, ದೇವಾಂಗ ಹಾಗೂ ವಿಶ್ವಕರ್ಮ ಜನಾಂಗ ದವರು ವಾಸವಾಗಿದ್ದಾರೆ. ಭೌಗೋಲಿಕವಾಗಿ ಇದು ಭಾಗಶಃ ಜ್ವಾಲಾಮುಖಿ ಯಿಂದುಂಟಾಗಿರಬೇಕು. ಇದು ಸಮುದ್ರ ಮಟ್ಟದಿಂದ ೨೮೩೬ ಅಡಿ ಎತ್ತರದಲ್ಲಿದೆ. ಚಂದ್ರಗುತ್ತಿಯ ಭೂಮಿ ಫಲವತ್ತಾದುದು, ಊರಿನ ಪಕ್ಕದಲ್ಲಿ ಅದುರಿನ ನಿಕ್ಷೇಪಗಳಿದ್ದು ಇಲ್ಲಿಯ ಶಿಲೆ ಶ್ರೇಷ್ಠವಾದುದು.

ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿ ಬೌದ್ಧ ಬಿಕ್ಷುಗಳು ಇಲ್ಲಿಗೆ ಬಂದಿದ್ದರೆಂದು ಬೌದ್ಧ ಗ್ರಂಥಗಳಲ್ಲಿ ಉಲ್ಲೇಖವಿದೆ. ಚಂದ್ರಗುತ್ತಿ ಶಾಕ್ತ ಸಂಪ್ರದಾಯದ ಪ್ರಮುಖ ಕೇಂದ್ರವಾಗಿತ್ತೆಂದು ಹೇಳುತ್ತಾರೆ. ಗುಡ್ಡದ ಮೇಲಿರುವ ದೇವಾಲಯದಲ್ಲಿ ಇಲ್ಲಿಯ ಆರಾಧ್ಯದೇವತೆ ರೇಣುಕೆ ನೆಲೆಸಿದ್ದಾಳೆಂದು ನಂಬಿಕೆ. ಅವಳನ್ನು ಇಲ್ಲಿ ಗುತ್ಯಮ್ಮ, ಗುಹಾಂಬ ಮತ್ತು ಗುತ್ತಿಕನ್ನಮ್ಮ ಎಂದೂ ಕರೆಯುತ್ತಾರೆ.

ಚಂದ್ರಗುತ್ತಿ ಬೆಟ್ಟವು ಚಂದ್ರನ ಚಲನೆಗೆ ಅಡ್ಡ ಬಂದಿದ್ದರಿಂದ ಮತ್ತು ಕೃಷ್ಣ ಜರಾಸಂಧರು ಇಲ್ಲಿ ಯುದ್ಧ ಮಾಡುತ್ತಿದ್ದಾಗ ಕೃಷ್ಣ ಬೆಟ್ಟದ ಗುಹೆಯಲ್ಲಿ ಅವಿತು ಕುಳಿತುಕೊಂಡನೆಂದೂ ಜರಾಸಂಧನಿಗೆ ಅವನನ್ನು ಹುಡುಕಲಾಗದೆ ಇಡೀ ಗುಡ್ಡವನ್ನೇ ಎತ್ತಿದ್ದನ್ನು ಕಂಡು ಚಂದ್ರ ನಕ್ಕಿದ್ದರಿಂದ ಈ ಊರಿಗೆ ಚಂದ್ರಗುತ್ತಿ ಎಂಬ ಹೆಸರು ಬಂದಿದೆ ಎಂದು ಸ್ಥಳ ಪುರಾಣದಿಂದ ತಿಳಿಯುತ್ತದೆ.

## ಚಂದ್ರಗುತ್ತಿ - ಐತಿಹಾಸಿಕ ಹಿನ್ನೆಲೆ

ಚಂದ್ರಗುತ್ತಿಯನ್ನು ಹಿಂದೆ ಜನರು ಚಂದ್ರಗುಪ್ತಪುರ, ಚಂದ್ರಗುತ್ತಿಪುರ, ಚಂದ್ರಗುತ್ತಿ ಪೇಟೆ ಎಂದು ಕರೆಯುತ್ತಿದ್ದುದಕ್ಕೆ ಶಾಸನಗಳು ಇವೆಯಾದರೂ ಮಲೆನಾಡಿನ ಜನಪದ ಗೀತೆಗಳಲ್ಲಿ ಗುತ್ತಿ ಎಂದೇ ಪ್ರಸಿದ್ಧವಾಗಿದೆ.

ಚಂದ್ರಗುತ್ತಿ ಹಿಂದೆ ಬನವಾಸಿಯನ್ನಾಳುತ್ತಿದ್ದ ಕದಂಬರ ವಶದಲ್ಲಿತ್ತು. ವಿಜಯನಗರದ ಅರಸ ಎರಡನೇ ಹರಿಹರ ಬಚ್ಚಣ್ಣ ಚಂದ್ರಗುತ್ತಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಆಡಳಿತ ನಡೆಸಿದ. ನಂತರ ಇದು ಕೆಳದಿ ನಾಯಕರ ವಶವಾಯಿತು. ಕೆಳದಿ ನಾಯಕರು ವಿಜಯನಗರದಿಂದ ಪಡೆದ ಎಂಟು ಮಾಗಣೆಗಳಲ್ಲಿ ಚಂದ್ರಗುತ್ತಿಯೂ ಒಂದು. ಹೈದರಾಲಿಯ ಕಾಲದಲ್ಲಿ ಬಿಳಿಗಿಯ ಪಾಳೇಗಾರರ ನಂತರ ಮರಾಠರ ಸೇನಾಪತಿಗಳಾದ ಪರಶುರಾಮ ಭಾವು ಹಾಗೂ ದೊಂಡಿಯಾ ವಾಘ್ ಚಂದ್ರಗುತ್ತಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಕದಂಬ ದೊರೆ ಚಂದ್ರಗುಪ್ತವರ್ಮ ಅಥವಾ ಪುರಂಧರವರ್ಮ ಈ ಸಂತತಿಯ ಪ್ರಸಿದ್ಧ ದೊರೆ. ಈತ ಪ್ರಸಿದ್ಧ ಮಯೂರವರ್ಮನ ತಂದೆ. ಮಯೂರವರ್ಮನ ತರುವಾಯ ಈತನ ಮಗ ಕ್ಷೇತ್ರವರ್ಮ ಚಂದ್ರಗುತ್ತಿ ಪ್ರಾಂತ್ಯವನ್ನಾಳಿದನೆಂದು ಹೇಳಲಾಗಿದೆ.

ಹತ್ತನೇ ಶತಮಾನದ ತರುವಾಯ ಬನವಾಸಿ ರಾಜ್ಯವನ್ನಾಳಿದ ದೊರೆ ಲೋಕಾದಿತ್ಯನು ಐವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದ. ಈತನ ಸಮಕಾಲೀನ ಹಾಗೂ ಹೊಯ್ಸಳರ ಪ್ರಸಿದ್ಧ ದೊರೆ ವಿಷ್ಣುವರ್ಧನ ಕೈಗೊಂಡ ದಂಡಯಾತ್ರೆಯಲ್ಲಿ ಚಂದ್ರಗುತ್ತಿಯೂ ಸೇರಿದಂತೆ ಬನವಾಸಿ ರಾಜ್ಯ ಅವನ ಧಾಳಿಗೆ ತುತ್ತಾಗಬೇಕಾಯ್ತು. ಹದಿನಾಲ್ಕನೇ ಶತಮಾನದ ಮಧ್ಯಭಾಗದಲ್ಲಿ ಮಲ್ಲಪ್ಪ ಎಂಬಾತ ಚಂದ್ರಗುತ್ತಿಯ ಕೇಂದ್ರ ಸ್ಥಳದಲ್ಲಿ ಇಲ್ಲಿಯ ಪ್ರಾಂತ್ಯಾಡಳಿತ ನೋಡಿಕೊಳ್ಳುತ್ತಿದ್ದ. ಈತ ವಿಜಯನಗರದ ಅರಸ ಹರಿಹರನ ಸಹೋದರ ಎಂದು ಹೇಳಲಾಗಿದೆ.

ವಿಷ್ಣುವರ್ಧನನ ನಂತರ ಮತ್ತೊಮ್ಮೆ ಮಲ್ಲಿಕಾಫರನ ದಂಡಯಾತ್ರೆಗೆ ತುತ್ತಾದ ಚಂದ್ರಗುತ್ತಿ ಇತ್ತೀಚೆಗೆ ಒಂದು ಗ್ರಾಮವಾಗಿ ಹಿಂದಿನ ಚಾರಿತ್ರಿಕ ಅವಶೇಷವಾಗಿ ಮಾತ್ರ ಉಳಿದುಕೊಂಡಿದೆ. ಕಾಫರನ ಆಕ್ರಮಣದ ಕುರುಹಾಗಿ ಅವರು ತಮ್ಮ ಯುದ್ಧಕಾಲದಲ್ಲಿ ಉಪಯೋಗಿಸುತ್ತಿದ್ದ ಫಿರಂಗಿಯನ್ನು ಕೋಟೆಯ ಮೇಲೆ ಈಗಲೂ ಕಾಣಬಹುದು.

ಚಂದ್ರಗುತ್ತಿ ಒಂದು ಪ್ರತ್ಯೇಕ ರಾಜ್ಯವಾಗಿ ಆಳಲ್ಪಟ್ಟಿರಲಿಲ್ಲ. ವೈಜಯಂತಿಪುರ ಅಥವಾ ಬನವಾಸಿ ರಾಜ್ಯಕ್ಕೆ ಸೇರಿದ ಪ್ರಾಂತ್ಯವಾಗಿತ್ತು. ಬಳ್ಳಿಗಾವೆ ಇದರ ರಾಜಧಾನಿಯಾಗಿತ್ತು. ಆಗ ಚಂದ್ರಗುತ್ತಿಗಿದ್ದ ಪ್ರಚಲಿತ ಹೆಸರು ಗೋಮಂತ ಶೈಲ ಎಂದು. ಮೌರ್ಯರ ಸಂತತಿಯು ಆಳ್ವಿಕೆಯ ಸಂದರ್ಭದಲ್ಲಿ ಬನವಾಸಿ ರಾಜ್ಯವನ್ನಾಳಿದ ಚಂದ್ರಗುಪ್ತಮೌರ್ಯ ಎಂಬುವನಿಂದ

"ಚಂದ್ರಗುತ್ತಿ" ಎಂದು ಈ ಪ್ರಾಂತ್ಯಕ್ಕೆ ಹೆಸರು ರೂಢಿಗೆ ಬಂದಿರಬೇಕೆಂಬ ಅಭಿಪ್ರಾಯವಿದೆ. ಕ್ರಿ.ಶ. ೫ರಿಂದ ೧೦ನೇ ಶತಮಾನದವರೆಗೆ ಆಳಿದ ಬನವಾಸಿ ರಾಜ ಸಂತತಿಯವರು ವಿಶ್ರಾಂತಿ ಧಾಮವನ್ನಾಗಿ ಮಾಡಿಕೊಂಡಿದ್ದರು.

ಕರ್ನಾಟಕ ಇತಿಹಾಸ ಪರಂಪರೆ ಸಂಪುಟದ ಪ್ರಕಾರ ಚಂದ್ರಗುತ್ತಿ ಪ್ರದೇಶವನ್ನು ಗುತ್ತಲ್ಲಿನ ಗುತ್ತರು, ಗೋವೆಯ ಕದಂಬರು ಮತ್ತು ಸೌಂದತ್ತಿ ರಟ್ಟರು ಕ್ರಿ. ಶ. ಎಂಟನೇ ಶತಮಾನ ಅಥವಾ ಅದಕ್ಕಿಂತಲೂ ಮೊದಲು ಆಳುತ್ತಾ ಬಂದರೆಂಬ ಅಂಶ ವ್ಯಕ್ತವಾಗುತ್ತದೆ. ಈ ವಂಶಾವಳಿ ರಾಜರು (ಕದಂಬರು, ರಟ್ಟರು, ಗುತ್ತರು) ದ್ರಾವಿಡ ಜನಾಂಗದ ಶೈವ ಬ್ರಾಹ್ಮಣ ವಂಶಕ್ಕೆ ಸೇರಿದವರು ಎಂಬುದು ಇತಿಹಾಸದಿಂದ ತಿಳಿಯುತ್ತದೆ.

ಗುತ್ತರು ತಾವು ಚಂದ್ರಗುಪ್ತ ಮೌರ್ಯನ ಸಂತತಿಯವರೆಂದು ಹೇಳಿಕೊಂಡಿದ್ದಾರೆ. ಗುತ್ತವೊಳಲ್ ಅವರ ಮುಖ್ಯ ಪಟ್ಟಣವಾಗಿತ್ತು. ಚಂದ್ರಗುಪ್ತ ವಂಶದವರಾಗಿದ್ದರಿಂದ ಈ ಪಟ್ಟಣಕ್ಕೆ ಚಂದ್ರಗುಪ್ತ ಎಂದೂ ಮುಂದೆ ಕಾಲಾಂತರದಲ್ಲಿ ಚಂದ್ರಗುತ್ತಿ ಎಂಬ ಹೆಸರು ಬಂದಿರಬಹುದು. ಈಗಲೂ ಚಂದ್ರಗುತ್ತಿಯ ರೇಣುಕಾಂಬ ದೇವಾಲಯದ ಉತ್ತರದ ಗುಡ್ಡದ ಮೇಲೆ ಏಳು ಸುತ್ತಿನ ಕೋಟೆ ಇದಕ್ಕೆ ಸಾಕ್ಷಿಯಾಗಿದೆ. ಅದರ ಇನ್ನೊಂದು ಶಾಖೆ ಉಜ್ಜಯಿನಿಯ ವಿಕ್ರಮಾದಿತ್ಯರ ಸಂತತಿಯವರೆಂದು ಗುತ್ತಿನ (ಧಾರವಾಡ ಜಿಲ್ಲೆಯ ಕರ್ಜಗಿ ತಾಲ್ಲೂಕಿನ ಗುತ್ತಲ್) ಸುತ್ತಮುತ್ತಲಿನ ಪ್ರದೇಶವನ್ನು ಮತ್ತು ಕೆಲವೊಮ್ಮೆ ನೆರೆಹೊರೆಯ ನಾಡನ್ನು ಅವರು ಹನ್ನೆರಡನೇ ಮತ್ತು ಹದಿಮೂರನೇ ಶತಮಾನದಲ್ಲಿ ಆಳಿದ್ದು ಬೆಳಕಿಗೆ ಬಂದಿದೆ.

ಅದರಂತೆ ರಟ್ಟರು ಕೂಡ ಸೌಂದತ್ತಿ (ಸೌಗಂಧಿಕ)ಯನ್ನು ತಮ್ಮ ರಾಜ್ಯದ ಕೇಂದ್ರ ಸ್ಥಳವನ್ನಾಗಿಟ್ಟುಕೊಂಡು ರಾಜ್ಯವಾಳಿದ್ದಾರೆ. ಇವರಲ್ಲಿ ಪೃಥ್ವಿರಾಮರಾಜನೇ ಪರಶುರಾಮ ನೆಂಬುದು ಗಮನಾರ್ಹ. ಈತನ ಕಾಲ ಅಂದಾಜು ಆರನೇ ಶತಮಾನದ ಪೂರ್ವದಲ್ಲಿರ ಬಹುದಾಗಿದೆ. ಇದನ್ನೆ ದ್ವಾಪರಯುಗವೆಂದು ಇಲ್ಲಿ ಹೆಸರಿಸಲಾಗಿದೆ.

ಕಾನಿಷ್ಕನ ನಂತರ ಉತ್ತರ ಭಾಗದಲ್ಲಿ ಅನೈಕ್ಯಮತ್ಯ ಮತ್ತು ಅರಾಜಕತೆ ತಲೆದೋರಿದವು. ಶಾತವಾಹನ ವಂಶದಲ್ಲಿ ಸುಪ್ರಸಿದ್ಧನಾಗಿದ್ದ ಗೌತಮಿ ಮಿತ್ರ ಶಾತಕರ್ಣಿಯು ಶಕರು ಮತ್ತು ಯವನರನ್ನು ಮಟ್ಟ ಹಾಕಿ ಅವರ ಪ್ರಾಬಲ್ಯವನ್ನು ಮುರಿದನು. ಆದರೂ ವಿದೇಶೀ ಧಾಳಿಕಾರರ ಪ್ರಾಬಲ್ಯ ಸಂಪೂರ್ಣವಾಗಿ ಅಡಗಿ ಹೋಗಿರಲಿಲ್ಲ. ಮೊದಲನೆ ರುದ್ರಧಾಮದ ನಾಯಕತ್ವದಲ್ಲಿ ಶಕರು ಪಶ್ಚಿಮ ಭಾರತದಲ್ಲಿ ಮತ್ತೆ ತಲೆ ಎತ್ತುತ್ತಿದ್ದರು. ವಾಯುವ್ಯ ಭಾರತದಲ್ಲಿ ಕುಶಾನ ವಂಶದ ದೊರೆಗಳು ಕೆಲವು ಭಾಗಗಳನ್ನು ಇನ್ನೂ ಆಳುತ್ತಿದ್ದರು. ಆ ಸಮಯದಲ್ಲಿ ಗುಪ್ತ ವಂಶದ ಮೊದಲನೇ ಚಂದ್ರಗುಪ್ತನು ಪ್ರಾಬಲ್ಯಕ್ಕೆ ಬಂದನು. ಗುಪ್ತರ

ಕಾಲವು ಕ್ರಿ.ಶ. ೩೨೦ರಿಂದ ಪ್ರಾರಂಭವಾಯಿತೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.

ನಂತರದಲ್ಲಿ ಸಮುದ್ರಗುಪ್ತನು ಕೀರ್ತಿಶಾಲಿಯಾದನು. ಇವನ ತರುವಾಯ ಎರಡನೇ ಚಂದ್ರಗುಪ್ತ (ಕ್ರಿ.ಶ. ೩೮೦-೪೧೪) ಪಟ್ಟಕ್ಕೆ ಬಂದು ರಾಜ್ಯ ವಿಸ್ತಾರ ಮಾಡಿದನು. ಈತನ ಮಗ ಕುಮಾರಗುಪ್ತನು ನಲವತ್ತು ವರ್ಷ ರಾಜ್ಯವಾಳಿದನು. (ಕ್ರಿ.ಶ. ೪೧೫ರಿಂದ ೪೫೫) ಇವನ ಮಗ ಸ್ಕಂದಗುಪ್ತನು (ಕ್ರಿ.ಶ. ೪೫೫ರಿಂದ ೪೬೭) ಹೂಣರನ್ನು ಅಟ್ಟಿದರು. ನಾಲಂದಾ ವಿಶ್ವವಿದ್ಯಾಲಯಕ್ಕೆ ಧನ ಸಹಾಯ ಮಾಡಿದನು. ಸ್ಕಂದಗುಪ್ತನ ವರ್ಣನೆ ಕಥಾ ಸರಿತ್ಸಾಗರದಲ್ಲಿ ಬಂದಿದೆ. ಗುಪ್ತ ವಂಶದ ಸಮರ್ಥ ದೊರೆಗಳಲ್ಲಿ ಕೊನೆಯವನು ಬುಧಗುಪ್ತ. ಈತನ ಕಾಲದಲ್ಲಿ ಬಂಗಾಳದಿಂದ ಕಾಥೇವಾಡ, ಹಿಮಾಲಯದಿಂದ ನರ್ಮದಾ ನದಿಯವರೆಗೆ ಗುಪ್ತರ ಸಾಮ್ರಾಜ್ಯವಿತ್ತು. ಹೂಣರು ಪದೇ ಪದೇ ಧಾಳಿ ಮಾಡಿದ್ದರಿಂದ ಗುಪ್ತರ ಸಾಮ್ರಾಜ್ಯದ ಅವನತಿಗೆ ಕಾರಣವಾಯಿತು. ಕ್ರಿ.ಶ. ಆರನೇ ಶತಮಾನದಲ್ಲಿ ಗುಪ್ತ ಸಾಮ್ರಾಜ್ಯವು ಒಡೆದು ಹೋಗಿ ಬಂಗಾಳ, ಮಗಧ, ಮಾಳವ, ಕಾಶ್ಮೀರ, ಉಜ್ಜಯಿನಿ ಮೊದಲಾದ ಕಡೆ ಗುಪ್ತವಂಶದ ದೊರೆಗಳು ಆಳುತ್ತಿದ್ದು ಕ್ರಮೇಣ ಉತ್ತರ ಭಾರತದಿಂದ ಕಣ್ಮರೆಯಾಗಿ ದಕ್ಷಿಣ ಭಾರತಕ್ಕೆ ಕಾಲಿಟ್ಟರು.

ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ಗುಪ್ತರು (ಗುತ್ತರು) ಎಂಬ ಹೆಸರಿನಿಂದ ಸಾಮಂತರಾಗಿ ರಾಜ್ಯವಾಳಿದವರಲ್ಲಿ ಚಂದ್ರಗುಪ್ತ ರೇಣುಕಾಸುರ ರಾಜನು ಒಬ್ಬನು. ಈ ರಾಜವಂಶ ಕಾಶ್ಮೀರದಿಂದ ಬಂದು ನೆಲೆಸಿದ ಬಗ್ಗೆ ಸ್ಕಂದ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಅದರಂತೆ ಉಜ್ಜಯಿನಿಯಿಂದ ಬಂದ ಇನ್ನೊಂದು ಶಾಖೆ ಗುತ್ತಲ್ (ಕರ್ನಾಟಕದ ಧಾರವಾಡ ಜಿಲ್ಲೆಯ ಕರ್ಜಗಿ ತಾಲ್ಲೂಕಿನ ಗುತ್ತಲ್) ಎಂಬಲ್ಲಿ ಆಳಿದರು. ಬೆಳವಲಗುತ್ತಿ (ಬೆಳಗುತ್ತಿ ಹೊನ್ನಾಳಿ ತಾಲ್ಲೂಕು) ಚಂದ್ರಗುತ್ತಿ (ಸೊರಬ ತಾಲ್ಲೂಕು) ಇವು ಅಂದಿನ ಗುತ್ತರ ವಲಯಗಳಾಗಿದ್ದವು.

ಹೀಗೆ ಕರ್ನಾಟಕದ ಗುತ್ತರು ಸ್ವತಃ ತಾವು ಚಂದ್ರಗುಪ್ತ ವಂಶದವರೆಂದು ಹೇಳಿಕೊಂಡಿದ್ದಾರೆ. ಇದು ಕರ್ನಾಟಕ ಇತಿಹಾಸ ಪರಂಪರೆ ಸಂಪುಟ ಒಂದರಲ್ಲಿ (ಪುಟ ಸಂಖ್ಯೆ ೩೨೦ರಲ್ಲಿ) ನಮೂದಿಸಿರುವುದನ್ನು ಗಮನಿಸಬಹುದಾಗಿದೆ. ಮತ್ತು ಅದೇ ಸಂಪುಟದ ಪುಟ ಸಂಖ್ಯೆ ೧೧೪ರಲ್ಲಿ ರೇಣುಕಾಂಬೆಯ ಪುತ್ರ ಪರಶುರಾಮನು ಆಳಿದ ಬಗ್ಗೆ ಪ್ರದೇಶವನ್ನು ಸೂಚಿಸುವ ಪದ್ಯವೊಂದು ಸ್ಕಂದ ಪುರಾಣದಿಂದ ಆಯ್ದು ಉಲ್ಲೇಖಿಸಿದೆ. ಚಂದ್ರಗುತ್ತಿ ರೇಣುಕಾಂಬೆಯ ಪೂರ್ವ ಇತಿಹಾಸವು ಕ್ರಿ.ಶ. ಎಂಟು ಅಥವಾ ಒಂಬತ್ತನೇ ಶತಮಾನದ್ದು ಎಂದು ತಿಳಿಯಬಹುದಾಗಿದೆ.

## ಚಂದ್ರಗುತ್ತಿ - ಪುರಾಣದ ಹಿನ್ನೆಲೆ

ಬೊಂಬಾಯಿಯಿಂದ ಕನ್ಯಾಕುಮಾರಿಯವರೆಗೆ ಹರಡಿರುವ ಪಶ್ಚಿಮ ಕರಾವಳಿ ತೀರ ಪ್ರದೇಶವು ಪುರಾತನ ಕಾಲದಿಂದಲೂ ಪರಶುರಾಮ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಪರಶುರಾಮನು ಕರಾವಳಿಯ ಈ ಪ್ರದೇಶವನ್ನು ಪಡೆದುಕೊಂಡು ಅಲ್ಲಿ ಸಪ್ತ ಕೊಂಕಣಗಳನ್ನು ಸ್ಥಾಪಿಸಿದನೆಂದು ಸ್ಕಂದ ಪುರಾಣದ ಈ ಶ್ಲೋಕ ವರ್ಣಿಸುತ್ತದೆ.

ಕರಾಟಂ ಚ - ವಿರಾಟಂ ಚ
ಮರಾಟಂ - ಕೊಂಕಣಂ ತಥಾ
ಹವ್ಯಿಗಂ - ತೇಳವಂ ಚೈವ
ಕೇರಳಂ - ಚೇತಿ ಸಪ್ತಕಂ||

ಇವುಗಳ ಪೈಕಿ ವಿರಾಟ (ಹಾನಗಲ್), ಕರಾಟದ (ಕರಾಡ) ಸ್ವಲ್ಪ ಭಾಗ, ಹವ್ಯಿಗ (ಉತ್ತರ ಕನ್ನಡ) ಮತ್ತು ತೇಳವ (ದಕ್ಷಿಣ ಕನ್ನಡ)ಗಳು ಕರ್ನಾಟಕದಲ್ಲಿವೆ. ಕನ್ನಡ ನಾಡಿನಲ್ಲಿ ಪರಶುರಾಮನ ಹೆಸರು ತಳೆದಿರುವ ಇನ್ನೂ ಹಲವು ಸ್ಥಳಗಳಿವೆ. ಸೌಂದತ್ತಿಯ ಸಮೀಪದಲ್ಲಿ 'ಪರಸಗಡ' ಎಂಬ ಪಟ್ಟಣವಿದ್ದು ಇದು ಜಮದಗ್ನಿ (ಪರಶುರಾಮನ ತಂದೆ) ಮಹರ್ಷಿಗಳು ಮತ್ತು ರೇಣುಕಾದೇವಿ (ತಾಯಿ) ನೆಲೆಸಿರುವ ಎಲ್ಲಮ್ಮನ ಗುಡ್ಡಕ್ಕೆ ಹೊಂದಿಕೊಂಡಂತೆಯಿದೆ. ಅಲ್ಲದೆ, ಅದರ ಪಕ್ಕದಲ್ಲಿಯೇ ಪರಶುರಾಮನಿಗಾಗಿ ಕಟ್ಟಿಸಿದ ದೇವಾಲಯವೂ ಇದೆ. ಅದರಂತೆ ಚಂದ್ರಗುತ್ತಿ (ಮಹೇಂದ್ರಗಿರಿ, ಚಂದ್ರಗಿರಿ)ಯಲ್ಲಿ ರೇಣುಕಾಂಬೆಯು ನೆಲೆಸಿರುವ ಗುಹೆಯಿದೆ. ಗುಹೆಯ ಎಡಭಾಗದಲ್ಲಿ ಪರಶುರಾಮ ಚೌಡಿಕೆ ಹಿಡಿದು ನಿಂತಿರುವ ವಿಗ್ರಹವಿದೆ. ಶ್ರೀಮದ್‌ಭಾಗವತ ಪುರಾಣದಲ್ಲಿ ಗೌತಮ ಮಹರ್ಷಿಗಳು ರಾಜ ರೇಣುಕಾಸುರನಿಗೆ ಸ್ಥಳದ ಪರಿಚಯವನ್ನು ಹೀಗೆ ತಿಳಿಸುತ್ತಾರೆ.

ಆ ದುರ್ಗವು ಪಶ್ಚಿಮ ಸಮುದ್ರದ ಹತ್ತಿರ ಐದು ಯೋಜನಕ್ಕೆ ಪೂರ್ವದಲ್ಲಿ ಮಹೇಂದ್ರ ಪರ್ವತದ ನಡುವೆ ಇದೆ. ಅಲ್ಲಿ ನಂದಿಕಂ (ವರದಾ) ಎನ್ನುವ ನದಿಯು ಹರಿಯುತ್ತದೆ. ಗರುಡತೀರ್ಥ ಹಾಗೂ ನಾಗತೀರ್ಥ ಎಂಬ ಎರಡು ಪವಿತ್ರ ತೀರ್ಥಗಳು ಪರ್ವತದ ಮೇಲಿರುವವು. ನೀನು ಅಲ್ಲಿಗೆ ಹೋಗಿ ಮೂಕಾಂಬಿಕೆಯನ್ನು ಸಂತುಷ್ಟಗೊಳಿಸಿದರೆ ನಿನಗೆ ಓರ್ವ ಕುಲಪುತ್ರಿ ಜನಿಸುವಳು.

ಗೌತಮ ಮಹರ್ಷಿಗಳ ಆದೇಶದಂತೆ ರೇಣುಕಾಸುರ ರಾಜನು ಕಾಶ್ಮೀರ ಪ್ರದೇಶವನ್ನು ಬಿಟ್ಟು ತನ್ನ ಸೈನ್ಯ ಬಲದೊಂದಿಗೆ ಚಂದ್ರಗುತ್ತಿಗೆ ಬಂದು ನೆಲೆಸಿದನು. ಪರ್ವತದ ಮೇಲಿರುವ ಮೂಕಾಂಬಿಕಾದೇವಿಯನ್ನು ಆರಾಧಿಸಲು ಪ್ರಾರಂಭಿಸಿದನು.

## ರೇಣುಕೆಯ ಜನನ

ರೇಣುಕಾಸುರ ರಾಜನು ದೈತ್ಯ ಶ್ರೇಷ್ಠನೂ, ದಾನಿಯೂ ಮತ್ತು ಶೂರನೂ ಆದ ರಾಜನಾಗಿದ್ದನು. ಈತನ ಹೆಂಡತಿ ಭೋಗವತಿ. ಮಹಾಸಾಧ್ವಿ ಶಿರೋಮಣಿ. ದಂಪತಿಗಳಿಬ್ಬರೂ ಅತ್ಯಂತ ಭಕ್ತಿಯಿಂದ ವ್ರತ ನಿಯಮಗಳಿಂದ ಮೂಕಾಂಬಿಕಾದೇವಿಯನ್ನು ಆರಾಧಿಸಿ, ದೇವಿಯ ಕೃಪೆಗೆ ಪಾತ್ರರಾದರು. ಕೆಲವು ದಿವಸಗಳ ನಂತರ ಭೋಗವತಿಯು ಗರ್ಭ ಧರಿಸಿ ಒಂದು ಹೆಣ್ಣು ಮಗುವಿಗೆ ಜನ್ಮವಿತ್ತಳು. ದಂಪತಿಗಳಿಗೆ ಮಹದಾನಂದವಾಯಿತು. ಮಗುವಿಗೆ ತಮ್ಮ ಕುಲದೇವತೆಯ ಹೆಸರನ್ನಿಟ್ಟರು. ಚಂದ್ರಗುಪ್ತ ವಂಶದವಳಾದ ರೇಣುಕಾಳಿಗೆ ಚಂದ್ರಗುಪ್ತಿ, ರೇಣುಕಾಂಬ ಎಂಬ ಹೆಸರು ಪ್ರಸಿದ್ಧವಾಯಿತು. ಗುತ್ತರಸರು (ಗುಪ್ತರು) ಚಂದ್ರಗುತ್ತಿಯಲ್ಲಿ ಏಳು ಸುತ್ತಿನ ಕೋಟೆಯನ್ನು ಕಟ್ಟಿಸಿ ಅನೇಕ ವರ್ಷ ರಾಜ್ಯವನ್ನಾಳಿದರು.

ಇತ್ತ ರೇಣುಕಾಸುರನು ತನ್ನ ಏಕೈಕ ಪುತ್ರಿಯಾದ ರೇಣುಕೆಯನ್ನು ಅಚ್ಚುಮೆಚ್ಚಿನಿಂದ ಬೆಳೆಸಿದನು. ಅತಿ ಚೆಲುವೆಯಾದ ಮಗಳಿಗೆ ಬೇಕಾದ ವಜ್ರ ವೈಢೂರ್ಯ ಆಭರಣಗಳನ್ನು ಮಾಡಿಸಿದನು.

ರೇಣುಕೆಗೆ ಹದಿನಾರು ವರ್ಷಗಳು ತುಂಬಿದ ನಂತರ ರೇಣುಕಾಸುರ ರಾಜನಿಗೆ ಪ್ರಾಪ್ತ ವಯಸ್ಕಳಾದ ಮಗಳ ಮದುವೆಯ ಚಿಂತೆ ಪ್ರಾರಂಭವಾಯಿತು. ಯೋಗ್ಯ ವರನಿಗಾಗಿ ಶೋಧನೆ ಮಾಡುತ್ತಿರುವಾಗ ಒಂದು ರಾತ್ರಿ ರಾಜನ ಕನಸಿನಲ್ಲಿ ಮೂಕಾಂಬಿಕೆ ಕಾಣಿಸಿಕೊಂಡು ವರನ ಕುರುಹು ಹೇಳಿ ಮಾಯವಾದಳು. ದೇವಿ ತಿಳಿಸಿದಂತೆ, ರೇಣುಕಾಸುರನು ವರನನ್ನು ಹುಡುಕುತ್ತಾ ದಾರಿಯಲ್ಲಿ ಅಡ್ಡವಾದ ಕೃಷ್ಣಾ, ಮಲಾಪಹಾರಿ (ಮಲಪ್ರಭಾ) ನದಿಗಳನ್ನು ದಾಟಿ ಪಶ್ಚಿಮದಲ್ಲಿರುವ ಲವಣ ಸಮುದ್ರದಿಂದ ಐವತ್ತು ಯೋಜನೆ ಪೂರ್ವಕ್ಕೆ ಇರುವ ರಾಮಶೃಂಗ ಪರ್ವತಕ್ಕೆ ಬಂದಿಳಿದನು.

ರಾಮಶೃಂಗ ಪರ್ವತದಲ್ಲಿ ಜಮದಗ್ನಿ ಮಹರ್ಷಿಯು ರೇಣುಕಾಸುರ ರಾಜನನ್ನು ಆದರದಿಂದ ತನ್ನ ಆಶ್ರಮಕ್ಕೆ ಬರಮಾಡಿಕೊಂಡು ಊಟೋಪಚಾರ ಮಾಡಿಸಿದನು. ಇಂದ್ರನ ನಂದನವನದಂತೆ ಕಂಗೊಳಿಸುತ್ತಿರುವ ಪವಿತ್ರ ಆಶ್ರಮವನ್ನು ನೋಡಿ ರಾಜನಿಗೆ ಪರಮ ಸಂತೋಷವಾಯಿತು. ಆಶ್ರಮದಲ್ಲಿ ಅನೇಕ ಮುನಿವರ್ಯರು ಬಂದಿದ್ದರು. ರಾಜನು ಮುನಿವರ್ಯರೊಂದಿಗೆ ಜಮದಗ್ನಿಗೆ ತನ್ನ ಮಗಳಾದ ರೇಣುಕೆಯನ್ನು ಮದುವೆ ಮಾಡಿಕೊಡುವುದಾಗಿ ತಿಳಿಸಿದನು. ಜಮದಗ್ನಿಯು ಒಪ್ಪಿಕೊಂಡನು. ಒಂದು ಶುಭ ಮುಹೂರ್ತದಲ್ಲಿ ಜಮದಗ್ನಿ, ರೇಣುಕೆಯರ ವಿವಾಹವು ನಡೆಯಿತು. ದೇವದುಂದುಭಿಗಳು ಮೊಳಗಿದವು.

ಸತಿಪತಿಯರಿಬ್ಬರೂ ಪ್ರೀತಿಯಿಂದ ಅನ್ಯೋನ್ಯವಾಗಿ ಬೆರೆತರು. ರೇಣುಕಾಸುರ ರಾಜನು ಮಗಳಿಗೆ ಪಾತಿವ್ರತ್ಯ ರಹಸ್ಯಗಳನ್ನು ಬೋಧಿಸಿ ತನ್ನ ಪರಿವಾರದವರೊಂದಿಗೆ ತನ್ನ ರಾಜಧಾನಿಯಾದ ಗುತ್ತಲ (ಚಂದ್ರಗುತ್ತಿ)ಕ್ಕೆ ಬಂದನು.

ರೇಣುಕೆ ನಾರು ಮಡಿಯನ್ನುಟ್ಟು ಜಮದಗ್ನಿಯೊಂದಿಗೆ ಋಷಿಕುಮಾರಿಯಂತೆ ಸರಳ ಜೀವನ ನಡೆಸುತ್ತಾ ಸದಾಕಾಲ ಪತಿಯಾದ ಜಮದಗ್ನಿಯ ಸೇವೆ ಮಾಡುತ್ತಾ ಅಗ್ನಿಹೋತ್ರಿ, ಯಜ್ಞ ಮುಂತಾದವುಗಳಿಗೆ ಪೂಜಾಸಾಮಗ್ರಿಗಳನ್ನು ಒದಗಿಸುತ್ತಾ ಕಾಲ ಕಳೆಯುತ್ತಿದ್ದಳು.

ಪ್ರತಿ ದಿವಸ ಮಲಾಪಹಾರಿ (ಮಲಪ್ರಭಾ) ನದಿಯಿಂದ ಉಸುಕಿನ ಕೊಡ ಮಾಡಿ ನಾಗಸರ್ಪ ಸಿಂಬೆ ಮಾಡಿ ನೀರನ್ನು ಹೊತ್ತು ತಂದು ಆಶ್ರಮದ ಪೂಜಾ ಕಾರ್ಯಗಳು ಸಾಂಗವಾಗಿ ನಡೆಯುವಂತೆ ಮಾಡುತ್ತಿದ್ದಳು. ಆಶ್ರಮಕ್ಕೆ ಪ್ರತಿ ನಿತ್ಯ ಬರುವ ಯಾತ್ರಿಕರು ಮತ್ತು ಅತಿಥಿಗಳನ್ನು ಗೌರವಯುತವಾಗಿ ಕಂಡು ಆತ್ಮೀಯವಾಗಿ ಉಪಚರಿಸುತ್ತಿದ್ದಳು. ತನ್ನ ಪಾತಿವ್ರತ್ಯದ ಪ್ರಭಾವದಿಂದ ಉಸುಕಿನ ಕೊಡ ನಿರ್ಮಾಣ ಮಾಡಿ ಶುದ್ಧ ಮನದಿಂದ ಪನ್ನೀರನ್ನು ತಂದು ಪೂಜೆಗೈವುದು ಶಿವನಿಗೂ ಅಚ್ಚರಿಯನ್ನುಂಟುಮಾಡುತ್ತಿತ್ತು. ಇವಳ ಪತಿವ್ರತಾ ಮಹಿಮೆಯಿಂದ ಆಶ್ರಮದ ಗಿಡ, ಮರ ಬಳ್ಳಿಗಳು ವರ್ಷವೆಲ್ಲಾ ಫಲ, ಪುಷ್ಪಗಳನ್ನು ನೀಡುತ್ತಿದ್ದವು. ಪ್ರಾಣಿ, ಪಕ್ಷಿಗಳು ಸದಾಕಾಲ ರೇಣುಕೆಯ ಹತ್ತಿರವೇ ಸುಳಿದಾಡುವ ದೃಶ್ಯ ರಮ್ಯವಾಗಿ ಕಾಣುತ್ತಿತ್ತು.

ಜಮದಗ್ನಿ ಋಷಿಯ ಕ್ರೋಧ ಇಡೀ ಲೋಕವನ್ನೇ ದಹಿಸುವಂತಿತ್ತು. ಯಜ್ಞಯಾಗಾದಿಗಳು ಮುಗಿದ ತರುವಾಯ ಶಾಂತವಾಗಿರುತ್ತಿದ್ದ. ಆ ಸಮಯದಲ್ಲಿ ಸತಿ ರೇಣುಕೆಯೊಂದಿಗೆ ಸರಸ, ಸಲ್ಲಾಪದಲ್ಲಿರುತ್ತಿದ್ದ. ಸುತ್ತಮುತ್ತಲಿರುವ ಕ್ಷೇತ್ರಗಳ ಮಹಿಮೆಗಳನ್ನು ಪತ್ನಿಗೆ ತಿಳಿಸುತ್ತಿದ್ದ.

ಹೀಗಿರಲು ಕೆಲವು ಕಾಲಾನಂತರ ರೇಣುಕೆಗೆ ರುಮಣ್ವಂತ, ಸುಷೇಣ, ವಸು, ವಿಶ್ವಾವಸು ಮತ್ತು ಪರಶುರಾಮ ಎಂಬ ಐವರು ಗಂಡು ಮಕ್ಕಳು ಹುಟ್ಟಿದರು. ಕಾಲ ಕ್ರಮೇಣ ಮಕ್ಕಳು ವಿದ್ಯಾ, ಬುದ್ಧಿಯನ್ನು ಕಲಿತು ದೊಡ್ಡವರಾದರು. ಇವರಲ್ಲಿ ಚಿಕ್ಕವನಾದ ಪರಶುರಾಮನು ಮಾತ್ರ ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಆರನೇ ಅವತಾರ, ಮಹಾ ಪರಾಕ್ರಮಶಾಲಿಯಾಗಿ ಬೆಳೆದನು.

### ರೇಣುಕೆಯ ಪತಿವ್ರತಾ ಭಂಗ

ದಿನ ನಿತ್ಯದಂತೆ ರೇಣುಕೆಯು ನಾರುಮಡಿಯನ್ನುಟ್ಟು ಮಲಪ್ರಭಾ ನದಿಗೆ ನೀರು ತರಲು ಹೋದಾಗ ಅಲ್ಲಿ ತನ್ನ ಮಡದಿಯರ ಸಂಗಡ ಜಲಕ್ರೀಡೆಯಲ್ಲಿದ್ದ ಚಿತ್ರರಥನೆಂಬ ಗಂಧರ್ವನನ್ನು ಕಂಡು ಮೋಹಭರಿತೆಯಾದಳು. ಅವಳ ಮನಸ್ಸು ಚಂಚಲವಾಯಿತು. ತನ್ನ

ಮನಸ್ಸಿನಲ್ಲಿ ರತಿಕ್ರೀಡೆ ಯಾಚಿಸಿದ್ದರಿಂದ ಅವಳ ಪಾತಿವ್ರತ್ಯ ಭಂಗವಾಗಿ ಉಸುಕಿನಿಂದ ಕೊಡ ತಯಾರಿಸಲು ಆಗಲಿಲ್ಲ. ಹಾವಿನ ಸಿಂಬೆಯು ಬಿಚ್ಚಿ ನೀರು ಪಾಲಾಯಿತು. ತನ್ನ ಮನಸ್ಸಿನ ವ್ಯಭಿಚಾರವನ್ನು ಸುಧಾರಿಸಿಕೊಂಡು, ಮತ್ತೆ ಮರಳಿನ ಕೊಡ ತಯಾರಿಸಲು ಅನುವಾದಳು. ಆದರೆ ಸಾಧ್ಯವಾಗಲಿಲ್ಲ. ಅಲ್ಲಿಯೇ ಕೆಲಕಾಲವಿದ್ದು ಹೊತ್ತು ಮೀರಿ ಆಶ್ರಮಕ್ಕೆ ಹೋದಳು. ಜಮದಗ್ನಿಯು ಈಕೆಯ ಚಾರಿತ್ರ್ಯವನ್ನು ಶಂಕಿಸಿ ಕ್ರೋಧಾಭರಿತನಾಗಿ ಕುಷ್ಟರೋಗಿಯಾಗು ಎಂದು ಶಾಪವಿತ್ತು ಮೈಮೇಲಿನ ಬಟ್ಟೆಗಳನ್ನು ಸಹ ಕಳಚಿಕೊಂಡು ಆಶ್ರಮದ ಹೊರಗೆ ಹಾಕಿದನು.

ಪತಿಯ ಶಾಪದಿಂದ ಬಹಳ ದುಃಖಿತಳಾಗಿ ಕಳಂಕಿತಳಾಗಿ ಮೈಮೇಲೆ ಬೇವಿನ ಸೊಪ್ಪನ್ನು ಕಟ್ಟಿಕೊಂಡು, ಮರ್ಮಾಂಗ ಮುಚ್ಚಿಕೊಂಡು ಕಾಡು ಮೇಡು ಅಲೆಯತೊಡಗಿದಳು. ತನ್ನ ತಪ್ಪಿಗಾಗಿ ಹಲುಬಿದಳು. ಆದರೂ ಜಮದಗ್ನಿ ಋಷಿಗೆ ಕನಿಕರ ಬರಲಿಲ್ಲ. ತನ್ನ ಮಕ್ಕಳಾದ ರುಮಣ್ವಂತ, ಸುಷೇಣ, ವಸು, ವಿಶ್ವಾವಸುರನ್ನು ಕರೆದು ರೇಣುಕೆಯ ಕೊರಳನ್ನು ಕತ್ತರಿಸಿ ಎಂದು ಆಜ್ಞಾಪಿಸಿದನು. ನಾಲ್ವರೂ, ತಂದೆಯ ಆಜ್ಞೆಯನ್ನು ಪಾಲಿಸಲು ಮುಂದಾಗಲಿಲ್ಲ. ಆಗ ಅವರನ್ನು ಜಡರಾಗುವಂತೆ ಶಪಿಸಿ, ಪರಶುರಾಮನನ್ನು ಕರೆದು ನಿನ್ನ ತಾಯಿ ಚಾರಿತ್ರ್ಯಹೀನಳಾಗಿ ಊರೂರು ತಿರುಗುತ್ತಿದ್ದಾಳೆ. ಅವಳ ಶಿರಚ್ಛೇಧನ ಮಾಡು ಎಂದು ಅಪ್ಪಣೆ ಮಾಡಿದನು.

ಪರಶುರಾಮನು ತನ್ನ ತಂದೆಯ ಆಜ್ಞೆಯನ್ನು ಪಾಲಿಸಲು ಕೊಡಲಿಯನ್ನು ಹಿಡಿದುಕೊಂಡು ರೇಣುಕೆಯ ಶಿರವನ್ನು ತುಂಡರಿಸಲು ಬೆನ್ನ ಹಿಂದೆಯೇ ಬರುತ್ತಿದ್ದನು. ರೇಣುಕೆಯು ಸಪ್ತ ನದಿಗಳನ್ನು ದಾಟಿ ಮೈಮೇಲೆ ಬಂದು ತುಣುಕು ಬಟ್ಟೆಯಿಲ್ಲದೆ ಬೇವಿನ ತೊಪ್ಪಲಿನಿಂದ ಮರ್ಮಾಂಗಗಳನ್ನು ಮುಚ್ಚಿಕೊಂಡು ಓಡುತ್ತಾ ಬಂದು ಚಂದ್ರಗುತ್ತಿಯ ಕಲ್ಲುಬಂಡೆಯ ಗುಹೆಯೊಳಗೆ ಅಡಗಿಕೊಂಡಳು.

ಪರಶುರಾಮನು ಕೈಯಲ್ಲಿ ಕೊಡಲಿಯನ್ನು ಹಿಡಿದು ರೇಣುಕೆಯನ್ನು ಹಿಂಬಾಲಿಸುತ್ತಾ ಬಂದು ಚಂದ್ರಗುತ್ತಿಯ ಗುಹೆಯನ್ನು ಹೊಕ್ಕು ತನ್ನ ತಾಯಿಯ ಶಿರವನ್ನು ಕತ್ತರಿಸಿ ಹೊರತಂದನು. ಮುಂಡ ಮಾತ್ರ ಗುಹೆಯಲ್ಲಿ ಉಳಿಯಿತು. ಪರಶುರಾಮನು ತನ್ನ ಮಾತೃ ರುಂಡವನ್ನು ತೆಗೆದುಕೊಂಡು ತನ್ನ ತಂದೆ ಇದ್ದಲ್ಲಿಗೆ ಕೊಂಡೊಯ್ದು ಮುಂದಿಟ್ಟನು. ಜಮದಗ್ನಿಯ ಕೋಪಾಗ್ನಿಯು ಶಾಂತವಾಯಿತು. ಪರಶುರಾಮನು ತನ್ನ ಆಜ್ಞೆಯನ್ನು ಪಾಲಿಸಿದ್ದಕ್ಕೆ ಸಂತೋಷಗೊಂಡು ನಿನಗೆ ಬೇಕಾದ ವರವನ್ನು ಕೇಳು ಎಂದನು. ಪರಶುರಾಮನು ತನ್ನ ತಾಯಿಯನ್ನು ಬದುಕಿಸಬೇಕೆಂದು ಕೇಳಿಕೊಂಡ ಪ್ರಯುಕ್ತ ಜಮದಗ್ನಿಯ ಪಾದೋದಕದಿಂದ ರೇಣುಕೆ ಪುನರ್ಜನ್ಮ ಪಡೆದಳು.

ರೇಣುಕೆಯು ಬೆತ್ತಲೆಯಾಗಿ ಬೇವಿನ ಸೊಪ್ಪನ್ನು ಕಟ್ಟಿಕೊಂಡು ಬಂದ ಕುರುಹಿಗಾಗಿ ತಮ್ಮ ಇಷ್ಟಾರ್ಥಗಳನ್ನು ಸಿದ್ಧಿಸಿಕೊಳ್ಳಲು ಭಕ್ತಾದಿಗಳು ಬೆತ್ತಲೆ ಸೇವೆ, ಬೇವುಡುಗೆ ಸೇವೆಗಳನ್ನು ನಡೆಸುತ್ತಾರೆ ಎಂಬ ನಂಬಿಕೆಯಿದೆ.

## ಜಮದಗ್ನಿಯ ವಧೆ

ಒಂದು ದಿನ ಜಮದಗ್ನಿ ಋಷಿಯ ಆಶ್ರಮಕ್ಕೆ ಸೌಂದತ್ತಿ ರಟ್ಟರ ರಾಜನಾದ ಕಾರ್ತವೀರ್ಯಾರ್ಜುನನು ಬೇಟೆಯಾಡುತ್ತಾ ಆಯಾಸಗೊಂಡು ತನ್ನ ಸೇನಾಪರಿವಾರದೊಂದಿಗೆ ಬಂದಿಳಿದನು. ಆಶ್ರಮಕ್ಕೆ ಅತಿಥಿಯಾಗಿ ಬಂದ ರಾಜನಿಗೂ ಮತ್ತು ರಾಜ ಪರಿವಾರದವರಿಗೆ ಕಾಮಧೇನು(ರೇಣುಕೆ)ವಿನ ಅನುಗ್ರಹದಿಂದ ಪಂಚಭಕ್ಷ್ಯ ಪಕ್ವಾನ್ನಗಳನ್ನು ಸಿದ್ಧಪಡಿಸಿ ತೃಪ್ತಿಯಾಗುವಂತೆ ಮೃಷ್ಟಾನ್ನ ಭೋಜನ ಮಾಡಿಸಿದನು. ಅದನ್ನೆಲ್ಲ ಕಣ್ಣಾರೆ ನೋಡಿದ ಆ ಹೈಹಯ ರಾಜನು ಆ ಕಾಮಧೇನುವನ್ನು ತನಗೆ ಒಪ್ಪಿಸಲು ಕೇಳಿಕೊಂಡನು. ಕಾಮಧೇನುವನ್ನು ಕೊಡಲು ಒಪ್ಪದಿದ್ದರೆ ದಂಡೋಪಾಯದಿಂದ ಬಲತ್ಕಾರವಾಗಿ ಕೊಂಡೊಯ್ಯುವುದಾಗಿ ಹೇಳಿದನು. ಜಮದಗ್ನಿಯು ನನ್ನ ಕಾಮಧೇನುವನ್ನು ಸರ್ವತಾ ನಿನಗೆ ನೀಡಲಾರೆ ಎಂದು ಹೇಳಿದಾಗ ರಾಜನಿಗೆ ಕೋಪ ಬಂದು ತನ್ನ ಸೈನಿಕರಿಗೆ ಕಾಮಧೇನುವನ್ನು ಎಳೆಯಲು ಆಜ್ಞೆ ಮಾಡಿದನು. ಅದರಂತೆ ರಾಜನ ಸೈನಿಕರು ರೇಣುಕೆಯನ್ನು ಗಾಯಗೊಳಿಸಿ ಜಮದಗ್ನಿಯನ್ನು ಶಸ್ತ್ರಾಸ್ತ್ರಗಳಿಂದ ಹೊಡೆದು ಕೊಂದರು. ಮತ್ತು ಕಾಮಧೇನುವನ್ನು ಎಳೆದುಕೊಂಡು ಹೋದರು. ರೇಣುಕೆಯು ಮೂರ್ಛಿತಳಾಗಿ ಬಿದ್ದಿದ್ದಳು. ಎಚ್ಚರವಾಗಿ ಕೂಗಿಕೊಂಡಾಗ ಆಶ್ರಮದ ಸುತ್ತಮುತ್ತ ವಾಸವಾಗಿರುವ ಕಿರಾತರು ಸಹಾಯಕ್ಕೆ ಬಂದು ರಾಜನ ಸೈನ್ಯವನ್ನು ಭಂಗಿಸಿದರು.

ಜಮದಗ್ನಿ ಋಷಿಗಳ ಆಶ್ರಮದಲ್ಲಿ ಈ ಎಲ್ಲಾ ದುರಂತ ನಡೆದಾಗ ಪರಶುರಾಮ ಮತ್ತು ಅವರ ಅಣ್ಣಂದಿರು ಕಾಡಿಗೆ ಗೆಡ್ಡೆ, ಗೆಣಸು, ದರ್ಭೆ, ಸಮಿಧೆ, ಹೂವು ಹಣ್ಣು ಹಂಪಲುಗಳನ್ನು ತರಲು ಕಾಡಿಗೆ ಹೋಗಿದ್ದರು. ಆಶ್ರಮಕ್ಕೆ ಬಂದ ಬಳಿಕ ಶಸ್ತ್ರಾಘಾತದಿಂದ ಕ್ಷತವಿಕ್ಷತಾಂಗಳಾದ ತಾಯಿಯನ್ನು, ಮೈತುಂಬಾ ಶಸ್ತ್ರ ಪ್ರಹಾರದ ಗಾಯಗಳಾಗಿ ನೆತ್ತರು ಸುರಿಯುತ್ತಿರುವ ತಂದೆಯ ಶವವನ್ನೂ ನೋಡಿ ಅಲ್ಲಿ ನೆರೆದ ತಾಪಸ, ತಾಪಸಿಯರ ಮುಖದಿಂದ ಹೈಹಯ ರಾಜನು ಮಾಡಿದ ಅತ್ಯಾಚಾರ ಸಮಾಚಾರವನ್ನು ಕೇಳಿ ಜಮದಗ್ನಿಯ ಕುಮಾರರೆಲ್ಲರೂ ದುಃಖೋದ್ರೇಕದಿಂದ ಕಣ್ಣೀರು ಕರೆದರು ಮತ್ತು ಅವರೆಲ್ಲರೂ ವೇದೋಕ್ತ ವಿಧಿಯಿಂದ ತಂದೆಯ ಉತ್ತರ ಕ್ರಿಯಾದಿಗಳನ್ನು ನೆರವೇರಿಸಿದರು. ತಿಲತರ್ಪಣವನ್ನು ನೀರಿನಿಂದ ತಮ್ಮ ತಂದೆಗೆ ನೀಡಿದರು. ಆದರೆ ಬಲಿಷ್ಠನಾದ ಪರಶುರಾಮನು ಮಾತ್ರ ದುಃಖತಪ್ತನಾಗಿ ತಿಲತರ್ಪಣ ಮಾಡಲಿಲ್ಲ. ತಂದೆಯ ಮರಣ ಹಾಗೂ ಮರಣಾಂತಕ ಗಾಯಗಳಿಂದ ನರಳುತ್ತಿದ್ದ ತಾಯಿಯನ್ನು ನೋಡಿ ಕ್ರೋಧಾಂಧನಾಗಿ ಒಳಗೊಳಗೆ ಕುದಿಯುತ್ತಿದ್ದ. ತನ್ನ ಅಣ್ಣಂದಿರನ್ನು ಹಾಗೂ ಅಲ್ಲಿ ನೆರೆದ ತಾಪಸರನ್ನು ಕುರಿತು ನುಡಿದ,

ನನ್ನ ತಂದೆ ಯಾವ ತಪ್ಪನ್ನೂ ಮಾಡಿರಲಿಲ್ಲ, ಹಸಿದು ಬಂದ ಹೈಹಯ ರಾಜನಿಗೆ ಅನ್ನ ಹಾಕಿದ್ದೇ ತಪ್ಪಾಯಿತು. ಅದಕ್ಕಾಗಿ ಆ ಪಾಪಿ ರಾಜ ನನ್ನ ತಂದೆಯನ್ನು ಕೊಂದುಹಾಕಿದ. ನನ್ನ ತಾಯಿಯ ಮೇಲೆ ಎಂದಿಗೂ ಮಾಯದ ಇಪ್ಪತ್ತೊಂದು ಗಾಯಗಳನ್ನು ಮಾಡಿದ್ದಾನೆ. ಅವುಗಳಿಂದ ಈಗಲೂ ನೆತ್ತರು ಬಸಿಯುತ್ತಿದೆ. ಆದುದರಿಂದ ನಾನು ನನ್ನ ತಾಯಿಯ ಮೇಲಿನ ಗಾಯಗಳಷ್ಟು ಸಾರಿ ಭೂ ಪ್ರದಕ್ಷಿಣೆ ಮಾಡಿ ಭೂಲೋಕದಲ್ಲಿರುವ ಕ್ಷತ್ರಿಯರನ್ನ ನಾಶ ಮಾಡುತ್ತೇನೆ. ತಂದೆಯನ್ನು ಕೊಂದ ಕಾರ್ತವೀರ್ಯನನ್ನು ನನ್ನ ಕೊಡಲಿಯಿಂದ ಕೊಲ್ಲುತ್ತೇನೆ. ಕ್ಷತ್ರಿಯರ ರಕ್ತದಿಂದ ಒಂದು ಮಡುವನ್ನು ನಿರ್ಮಿಸಿ, ಆ ರಕ್ತದಿಂದ ನನ್ನ ತಂದೆಗೆ ತರ್ಪಣ ನೀಡುತ್ತೇನೆ. ಅಲ್ಲಿಯವರೆಗೆ ನಾನು ತಂದೆಗೆ ತರ್ಪಣ ನೀಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಕ್ಷತ್ರಿಯರ ಸಂಹಾರಕ್ಕಾಗಿ ಹೊರಟನು.

**ಕಾರ್ತವೀರ್ಯನ ವಧೆ**

ಜಮದಗ್ನಿ ಆಶ್ರಮದಲ್ಲಿ ಕಾರ್ತವೀರ್ಯನು ಮಾಡಿದ ಘೋರ ಕೃತ್ಯವನ್ನು ಕಣ್ಣಾರೆ ಕಂಡ ಬೇಡರು, ಪುಲಿಂದ ವೀರರೂ, ಶಬರ ಸೇನಾಪತಿಗಳು ಪರಶುರಾಮನಿಗೆ ಬೆಂಬಲವಾಗಿ ಮಾಹಿಷ್ಮತಿ ನಗರದ ಮೇಲೆ ಯುದ್ಧ ಸಾರಿದರು.

ಪರಶುರಾಮನ ಕಿರಾತ ಸೇನೆಗೂ ಹೈಹಯ ರಾಜನಾದ ಕಾರ್ತವೀರ್ಯಾರ್ಜುನನ ಸೇನೆಗೂ ಘನ ಘೋರವಾದ ಯುದ್ಧವಾಯಿತು. ಆಗ ಕ್ರುದ್ಧನಾದ ಪರಶುರಾಮನು ತನ್ನ ಕೊಡಲಿಯನ್ನು ಎತ್ತಿ ಕ್ಷತ್ರಿಯ ಸೇನಾಪತಿಯರನ್ನೆಲ್ಲಾ ಪರಶು ಪ್ರಹಾರದಿಂದ ದಂಡಿಸಿ ಕಾರ್ತವೀರ್ಯನ ಮುಂದೆ ನಿಂತಾಗ ಅವನು ನಡುಗತೊಡಗಿದನು. ರಾಜನ ಗದೆಯು ಕೈಯಿಂದ ನೆಲಕ್ಕೆ ಬಿದ್ದಿತು. ಕ್ರೋಧಾಂಧನಾದ ಪರಶುರಾಮನು ಪಾಪಿಯಾದ ರಾಜಾಧಮ ನನ್ನ ತಂದೆಯನ್ನು ಕೊಂದ ಆ ನಿನ್ನ ಕೈಗಳು ಎಲ್ಲಿವೆ ತೋರಿಸು ಎಂದು ಹೇಳುತ್ತಾ ತನ್ನ ಕೊಡಲಿಯನ್ನು ಬೀಸಿ ಅವನ ಸಾವಿರ ತೋಳುಗಳನ್ನು ಕಡಿದುಹಾಕಿದನು. ನಂತರ ರಾಜನ ತಲೆಯನ್ನು ಕಡಿದು ತಾನೆ ಅವನ ರಕ್ತವನ್ನು ತೆಗೆದು ಕಲಶದಲ್ಲಿ ತುಂಬಿ ತನ್ನ ಜೊತೆಗೆ ಬಂದ ಕಿರಾತರ ಕೈಗೆ ಕೊಟ್ಟು ಹೇಳಿದ. ನನ್ನ ಸಹೋದರರು ಪಿತೃತರ್ಪಣಕ್ಕಾಗಿ ನೀರಿನಿಂದ ತುಂಬಿದ ಒಂದು ಗರ್ತವನ್ನು ನಿರ್ಮಿಸಿದ್ದಾರೆ. ಅದರಲ್ಲಿ ಈ ನೆತ್ತರನ್ನು ಹಾಕಿ ನಾನು ಅಲ್ಲಿಗೆ ಬಂದು ಪಿತೃತರ್ಪಣ ಮಾಡಿ ನನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸುತ್ತೇವೆ ಎಂದನು.

ಹೀಗೆ ಕಾರ್ತವೀರ್ಯನ ವಧೆಯ ನಂತರ ಪರಶುರಾಮನು ಮಾಹಿಷ್ಮತಿ ನಗರದ ರಾಜನಾದನು. ತನ್ನ ಸೈನ್ಯ ಬಲದಿಂದ ಇಪ್ಪತ್ತೊಂದು ಸಲ ಭೂಪ್ರದಕ್ಷಿಣೆ ಮಾಡಿ, ಭೂಮಂಡಲದಲ್ಲಿರುವ ಕ್ಷತ್ರಿಯರನ್ನು ನಾಶ ಮಾಡಿದನು. ಆದ್ದರಿಂದ ಈತನಿಗೆ ಪೃಥ್ವಿರಾಮನೆಂದು ಕರೆಯುತ್ತಾರೆ.

## ಪರಶುರಾಮನ ತೀರ್ಥಯಾತ್ರೆ

ಪರಶುರಾಮನು ಪೃಥ್ವಿಯ ಮೇಲಿನ ಎಲ್ಲಾ ಕ್ಷತ್ರಿಯರನ್ನು ಕೊಂದು ಸಾರ್ವಭೌಮ ರಾಜನೆಂದೆನಿಸಿಕೊಳ್ಳುತ್ತಾನೆ. ಬ್ರಾಹ್ಮಣ ವಂಶಕ್ಕೆ ಸೇರಿದವನಾದ್ದರಿಂದ ಕ್ಷತ್ರಿಯರನ್ನು ನಾಶ ಮಾಡಿದ ಪಾಪ ಪರಿಹಾರಕ್ಕಾಗಿ ತಾನು ಗೆದ್ದ ಎಲ್ಲಾ ರಾಜ್ಯವನ್ನು ದಾನವಾಗಿ ಕೊಟ್ಟು ತೀರ್ಥ ಕ್ಷೇತ್ರಗಳನ್ನು ಒಂದು ವರ್ಷಕಾಲ ಸಂದರ್ಶನ ಮಾಡಿ ಪುನಃ ಆಶ್ರಮಕ್ಕೆ ಬಂದು ಯಜ್ಞ ಯಾಗಾದಿಗಳನ್ನು ಮಾಡಿ ಪರಮೇಶ್ವರನನ್ನು ಸಂತೋಷಪಡಿಸುತ್ತಾನೆ. ಈತನು ಯಜ್ಞಾಗಾರದಲ್ಲಿ ಪೃಥ್ವಿಯನ್ನು ಬ್ರಾಹ್ಮಣರಿಗೆ ದಾನ ಮಾಡಿ ಸರಸ್ವತಿ ನದಿಯಲ್ಲಿ ಅವಭೃತ ಸ್ನಾನ ಮಾಡಲು ಅದರಿಂದ ಆತನ ಪಾಪವೆಲ್ಲಾ ನಷ್ಟವಾಗಿ ಆತನು ಸೂರ್ಯನಂತೆ ಪ್ರಕಾಶಮಾನನಾದನು.

ಸಮುದ್ರನಾಥನಲ್ಲಿಗೆ ಹೋಗಿ ತಾನು ದಾನಕೊಟ್ಟ ರಾಜ್ಯದಲ್ಲಿರುವದು ಯೋಗ್ಯ ವಲ್ಲವೆಂದು ತಿಳಿದು ಸಮುದ್ರನಾಥನನ್ನು ಸ್ಥಳಾವಕಾಶ ಮಾಡಿಕೊಡಲು ಕೇಳಿಕೊಂಡನು. ಸಮುದ್ರನಾಥನು ಒಂದು ವೇಳೆ ಹಿಂದೆ ಸರಿಯದಿದ್ದರೆ ಪಾತಾಳವನ್ನೆ ಮೆಟ್ಟಿ ಸಮುದ್ರವೇ ಇಲ್ಲದಂತೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದನು.

ಸಮುದ್ರನಾಥನು ಹೆದರಿ ಪರಶುರಾಮನಿಗೆ ಇರಲು ಸ್ಥಳಾವಕಾಶ ಮಾಡಿಕೊಟ್ಟನೆಂದು ಪುರಾಣದ ಕತೆಯಿಂದ ತಿಳಿದುಬರುತ್ತದೆ. ನಂತರ ಪರಶುರಾಮನು ಮಹೇಂದ್ರ ಪರ್ವತಕ್ಕೆ ಹೋಗಿ ತಪಶ್ಚರ್ಯದಲ್ಲಿ ಮಗ್ನನಾಗಿ ಆತನು ಸಪ್ತ ಋಷಿಗಳಲ್ಲಿ ಗಣ್ಯನಾದನು.

## ಜನಪದ ಕತೆಯ ಪ್ರಕಾರ

ಪೃಥ್ವಿಯಲ್ಲಿರುವ ಕ್ಷತ್ರಿಯರನ್ನು ಪರಶುರಾಮನು ತನ್ನ ಗಂಡುಗೊಡಲಿಯಿಂದ ನಾಶ ಮಾಡಿ ಪೃಥ್ವಿರಾಮನೆಂಬ ಬಿರುದು ಪಡೆದುಕೊಂಡನು. ಪಾಪ ಪರಿಹಾರಕ್ಕಾಗಿ ನಾರದ ಮುನಿಗಳ ಸಲಹೆಯಂತೆ ಬ್ರಹ್ಮಗಿರಿಯ ಶಿವಗೋರಕ್ಷನಾಥರನ್ನು ಕುರಿತು ತಪಸ್ಸನ್ನು ಆಚರಿಸಿದನು. ಇವನ ತಪಸ್ಸಿಗೆ ಗೋರಕ್ಷನಾಥರು ಪ್ರಸನ್ನರಾಗಿ ಪಾತ್ರದೇವತಾವನ್ನು ಕೊಟ್ಟು ಭಾಗೀರಥಿಯಲ್ಲಿ ಸ್ನಾನ ಮಾಡಿ ಕುಂಭದಲ್ಲಿಟ್ಟು ಪೂಜಿಸು ಮತ್ತು ರಕ್ತ ಬೀಳದ ಹಾಗೂ ದಾನ ಕೊಡದ ಭೂಮಿಯಲ್ಲಿ ಕುಳಿತು ಹನ್ನೆರಡು ವರ್ಷಗಳ ಕಾಲ ತಪಸ್ಸನ್ನು ಆಚರಿಸು, ನಿನ್ನ ಪಾಪ ಪರಿಹಾರವಾಗುತ್ತದೆ ಎನ್ನುತ್ತಾರೆ.

ನಾಸಿಕದಿಂದ ಪರಶುರಾಮನು ಪಾತ್ರದೇವತಾವನ್ನು ತೆಗೆದುಕೊಂಡು ತಪಸ್ಸಿಗೆ ಯೋಗ್ಯ ಸ್ಥಳವನ್ನು ಹುಡುಕುತ್ತಾ ಪಾದಯಾತ್ರೆಯಾಗಿ ದಕ್ಷಿಣಾ ಮಾರ್ಗವಾಗಿ ಹೊರಡುತ್ತಾನೆ. ಮಾರ್ಗದಲ್ಲಿ ಅಲ್ಲಲ್ಲಿ ತಂಗಿದ ಸ್ಥಳಗಳೇ ಇಂದು ನಾಥಪಂಥದ ಮಠಗಳಾಗಿವೆ.

ಆಗುಂಬೆಯವರೆಗೆ ಬಂದು ಘಾಟಿಯ ಮೇಲೆ ನಿಂತು ಸುತ್ತಲೂ ವೀಕ್ಷಣೆ ಮಾಡುತ್ತಾನೆ. ಮೂರು ಕಡೆ ಸಮುದ್ರ ಒಂದು ಕಡೆ ಮಾತ್ರ ಭೂಮಿ. ಇಪ್ಪತ್ತೊಂದು ಸಾರಿ ಭೂಪ್ರದಕ್ಷಿಣೆ ಮಾಡಿದ ಪರಶುರಾಮನಿಗೆ ರಕ್ತ ಬೀಳದ ಮತ್ತು ದಾನ ಕೊಡದ ಭೂಮಿ ಎಲ್ಲಿಯೂ ಗೋಚರಿಸುವುದಿಲ್ಲ. ನಿರಾಶನಾಗಿ ಪರಶುರಾಮ ಪಾತ್ರದೇವತಾ ಸಹಿತ ಜಲಸಮಾಧಿಗಾಗಿ ಸಮುದ್ರಕ್ಕೆ ಹಾರುತ್ತಾನೆ. ಆವಾಗ ಸಮುದ್ರರಾಜ ಇಪ್ಪತ್ತೊಂದು ಮೈಲಿ ಉದ್ದ ಮತ್ತು ಇಪ್ಪತ್ತೊಂದು ಮೈಲಿ ಅಗಲದ ಸ್ಥಳವನ್ನು ಬಿಟ್ಟು ಕೊಡುತ್ತಾನೆ. ಇದು ದಾನ ಕೊಡದ ಹಾಗೂ ರಕ್ತ ಬೀಳದ ಸ್ಥಳವಾಗಿದೆ ಎಂದು ಸಮುದ್ರರಾಜ ಹೇಳುತ್ತಾನೆ. ಈ ಸ್ಥಳವೇ ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಕದ್ರಿಯ ಭಾಗವೆಂದು ಹೇಳಲಾಗುತ್ತದೆ.

ಕದ್ರಿಯಲ್ಲಿ ಹನ್ನೆರಡು ವರ್ಷಗಳ ಕಾಲ ಪರಶುರಾಮನು ಶಿವನನ್ನು ಕುರಿತು ಘೋರ ತಪಸ್ಸನ್ನು ಆಚರಿಸುತ್ತಾನೆ. ಈ ತಪೋಬಲದ ಪ್ರತಿಫಲವಾಗಿ ಧರ್ಮಸ್ಥಳದ ಶ್ರೀ ಮಂಜುನಾಥನ ಉದ್ಭವವಾಗುತ್ತದೆ. ಪರಶುರಾಮನ ತಪಸ್ಸನ್ನು ಮೆಚ್ಚಿ ಶಿವ ದರ್ಶನವನ್ನು ನೀಡುತ್ತಾನೆ.

ಪರಶುರಾಮ ಶಿವನಿಗೆ ಮೂರು ವರಗಳನ್ನು ಕೇಳುತ್ತಾನೆ. ಕದ್ರಿಯ ಪ್ರದೇಶದಲ್ಲಿ ಸೂರ್ಯದರ್ಶನವಾಗಬೇಕು. ಈ ಪ್ರದೇಶದಲ್ಲಿ ನನ್ನ ಹೆಸರು ಖ್ಯಾತಿಗೊಳ್ಳಬೇಕು, ಮೂರನೆ ವರವಾಗಿ ನನ್ನ ಯಜ್ಞಕುಂಡದಲ್ಲಿ ಸದಾಕಾಲ ಅಗ್ನಿ ಉರಿಯುತ್ತಿರಬೇಕು.

ಶಿವ ನಿನಗೆ ಇಷ್ಟು ಚಿಕ್ಕ ಸ್ಥಳ ಏಕೆ. ಗೋಕರ್ಣಕ್ಕೆ ಹೋಗಿ ಅಲ್ಲಿಂದ ನಿನ್ನ ಕೊಡಲಿಯನ್ನು ದಕ್ಷಿಣ ದಿಕ್ಕಿಗೆ ಬೀಸು ಎಂದಾಗ ಪರಶುರಾಮ ಗೋಕರ್ಣಕ್ಕೆ ಹೋಗಿ ತನ್ನ ಪರಶುವನ್ನು ಬೀಸಿದಾಗ ಕನ್ಯಾಕುಮಾರಿಯವರೆಗೆ ಹೋಗುತ್ತದೆ. ಗೋಕರ್ಣದಿಂದ ಕನ್ಯಾಕುಮಾರಿಯವರೆಗೆ ಇಂದಿಗೂ ಪರಶುರಾಮ ಸೃಷ್ಟಿ ಎಂದು ಕರೆಯಲಾಗುತ್ತದೆ. ಕನ್ಯಾಕುಮಾರಿಯಲ್ಲಿ ಪರಶು ಬಿದ್ದ ಸ್ಥಳದಲ್ಲಿ ಇಂದಿಗೂ ಪೂಜೆ ನಡೆಯುತ್ತಿದೆ. ಪರಶುರಾಮ ಸೃಷ್ಟಿ ಪ್ರದೇಶದಲ್ಲಿ ಬರಗಾಲ, ಚಂಡಮಾರುತ, ಮುಂತಾದ ಉಪಪ್ರಳಯಗಳ ಭಯವಿಲ್ಲ ಎಂಬ ನಂಬಿಕೆಯಿದೆ.

### ಬಾರಾಪಂಥ

ಪರಶುರಾಮ ಪಾತ್ರದೇವತಾವನ್ನು ಪಡೆದು ನಾಸಿಕದಿಂದ ಪಾದಯಾತ್ರಿಯಾಗಿ ಬಂದ ನೆನಪಿಗಾಗಿ ಇಂದಿಗೂ ಕೂಡ ಹನ್ನೆರಡು ವರ್ಷಗಳಿಗೊಮ್ಮೆ ನಾಸಿಕದಿಂದ ಚಂದ್ರಗುತ್ತಿಗೆ ನಾಥಪಂಥದ ಸನ್ಯಾಸಿಗಳು ಪಾತ್ರದೇವತಾವನ್ನು ತೆಗೆದುಕೊಂಡು ಬರುವ ಪದ್ಧತಿಯಿದೆ.

ರೋಹಿಣಿ ನಕ್ಷತ್ರದ ನಾಗರ ಪಂಚಮಿ ದಿವಸ ನಾಸಿಕದಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಜರುಗುವ ಕುಂಭಮೇಳದಲ್ಲಿ ಬಾರಾಪಂಥದ ನೂರಾರು ಸನ್ಯಾಸಿಗಳು ಸೇರುತ್ತಾರೆ.

ಆ ದಿವಸ ಭಾರತದಲ್ಲಿಯೇ ಮುಖ್ಯ ಮಠವಾದ ಕದ್ರಿನಾಥ ಪಂಥ ಮಠಕ್ಕೆ ಸ್ವಾಮಿಯವರನ್ನು ಆಯ್ಕೆ ಮಾಡುತ್ತಾರೆ.

ಬಾರಾಪಂಥ ಎಂದರೆ ಹನ್ನೆರಡು ಪಂಥಗಳು ಎಂದು ಧರ್ಮನಾಥ, ಗಂಗನಾಥ, ಕಪಿಲಾನಿ, ಭರ್ತ್ಯಬೈರಾಗಿ ನಟರಾಜ, ಸತ್ಯನಾಥ, ರಾಮನಾಥ ರಾವಲ್, ಆಯೀ ಮುಂತಾದ ಹನ್ನೆರಡು ಪಂಥಗಳು. ಇವರು ಹನ್ನೆರಡು ವರ್ಷಗಳಿಗೊಮ್ಮೆ ಚಂದ್ರಗುತ್ತಿಗೆ ಬರುತ್ತಾರೆ. ಪರಶುರಾಮನಿಗೆ ಶಿವಗೋರಕ್ಷನಾಥರು ಕೊಟ್ಟ ಪಾತ್ರದೇವತಾವನ್ನು ತೆಗೆದುಕೊಂಡು ನಾಸಿಕದಿಂದ ಪಾದಯಾತ್ರಿಗಳಾಗಿ ಪರಶುರಾಮನು ಉತ್ತರದಿಂದ ದಕ್ಷಿಣಕ್ಕೆ ನಡೆದು ಬಂದ ದಾರಿಯಲ್ಲಿ ಬಾರಾಪಂಥದವರು ಬರುತ್ತಾರೆ. ಚಂದ್ರಗುತ್ತಿ ರೇಣುಕಾಂಬ ದೇವಾಲಯದ ಕೆಳಭಾಗದಲ್ಲಿರುವ ನಾಥಪಂಥದ ಮಠದಲ್ಲಿ ಸೇರಿ ಪಾತ್ರದೇವತಾವನ್ನು ಪೂಜಿಸುತ್ತಾರೆ. ಪಾತ್ರದೇವತಾವನ್ನು ಪೂಜಿಸುವ ಅಧಿಕಾರ ಐದು ಪಂಥದ ಸನ್ಯಾಸಿಗಳಿಗೆ ಮಾತ್ರ ಇದೆ. ಇವರಿಗೆ ಪಂಚಜೀ ಎನ್ನುತ್ತಾರೆ.

ಚಂದ್ರಗುತ್ತಿಯಲ್ಲಿರುವ ಮಠ ಧರ್ಮನಾಥ ಪಂಥಕ್ಕೆ ಸೇರಿದೆ. ಈ ಮಠದಲ್ಲಿ ಯೋಗಿ ಶ್ರೀ ಸಂಪೂರ್ಣನಾಥಜೀ ಬಾವಾಜಿಯವರು ಇದ್ದಾರೆ. ಇವರಿಗೆ ಹೆಚ್ಚು ವಯಸ್ಸಾದಾಗ ಅಥವಾ ಚಂದ್ರಗುತ್ತಿ ನಾಗರೀಕರು ದೂರನ್ನಿತ್ತಾಗ ಬಾರಾಪಂಥದವರು ಇವರನ್ನು ಬದಲಾಯಿಸುವ ಅಧಿಕಾರವನ್ನು ಹೊಂದಿದ್ದಾರೆ. ಮಠದಲ್ಲಿ ಚಂದ್ರನಾಥ ಬಾವಾಜಿಯವರ ಸಮಾಧಿಯಿದ್ದು ನಿತ್ಯವೂ ಮಠದ ಪೀಠಸ್ಥರಾದ ಬಾವಾಜಿಯವರು ಪೂಜೆ ಸಲ್ಲಿಸುತ್ತಾರೆ. ನಾಥಪಂಥದವರ ಆರಾಧ್ಯ ದೈವ ಕಾಲಭೈರವ. ರೇಣುಕಾದೇವಿ ದೇವಾಲಯದ ಕೆಳಭಾಗದಲ್ಲಿರುವ ಕಾಲಭೈರವನ ಪೂಜೆ ಬಾವಾಜಿಯವರಿಂದ ನಡೆಯುತ್ತದೆ.

### ರೇಣುಕೆಯ ಕುಷ್ಠರೋಗ ನಿವಾರಣೆ

ಜಮದಗ್ನಿಯ ಶಾಪಕ್ಕೆ ತುತ್ತಾದ ರೇಣುಕೆ ಕುಷ್ಠರೋಗಿಯಾಗಿ ಕಾಡು ಮೇಡುಗಳನ್ನು ಅಲೆಯುತ್ತಿರುವಾಗ ಶಿವಜೋಗಿ ಮತ್ತು ಎಕ್ಕಯ್ಯಜೋಗಿಗಳು ಭೆಟ್ಟಿಯಾಗುತ್ತಾರೆ. ರೇಣುಕೆ ಬಾಯಾರಿಕೆಯನ್ನು ನೀಗಿಸಿಕೊಳ್ಳಲು ಎಕ್ಕಯ್ಯಜೋಗಿಯನ್ನು ನೀರು ಕೊಡಿ ಎಂದು ಕೇಳುತ್ತಾಳೆ. ಎಕ್ಕಯ್ಯಜೋಗಿ ತನ್ನಗಾರು ಶಿವಜೋಗಿಯು ಸ್ನಾನ ಮಾಡುತ್ತಿರುವ ನೀರನ್ನು ರೇಣುಕೆಯ ಬಾಯಿಗೆ ಹಾಕಿದಾಗ ಕುಷ್ಠರೋಗ ಸಂಪೂರ್ಣವಾಗಿ ಗುಣವಾಗುತ್ತದೆ ಎಂಬುದಾಗಿ ಇಲ್ಲಿಯ ಜನಪದರ ಅಭಿಪ್ರಾಯವಾಗಿದೆ.

### ಪರಶುರಾಮನಿಗೆ ಶಾಪ

ಜಮದಗ್ನಿ ಮತ್ತು ಪರಶುರಾಮರಿಂದ ಪರಿ ಪರಿಯಾದ ಹಿಂಸೆಯನ್ನು ಅನುಭವಿಸಿದ ರೇಣುಕಾದೇವಿ, ಅಮ್ಮಾ ಎನ್ನುವ ನಿನ್ನ ಕೂಗು ನನ್ನ ಕಿವಿಗೆ ಕೇಳದಿರಲಿ ಎಂದು

ಪರಶುರಾಮನಿಗೆ ಶಾಪವಿತ್ತು ಸಾಂಸಾರಿಕ ವ್ಯಾಮೋಹವನ್ನು ತೊರೆದು ಕಲಿಯುಗ ಪ್ರಾರಂಭವಾದ ಮೇಲೆ ಭಕ್ತರ ಇಷ್ಟಾರ್ಥವನ್ನು ನೆರವೇರಿಸಲು ಚಂದ್ರಗುತ್ತಿಯಲ್ಲಿ ಶ್ರೀ ರೇಣುಕಾದೇವಿಯಾಗಿ ನೆಲಸಿದಳು.

ಪರಶುರಾಮ ನಾಸಿಕದಲ್ಲಿ ತಪೋನಿಷ್ಠನಾಗಿರುವ ಸಮಯದಲ್ಲಿ ಕೆಲವರು ಮುನಿಗಳು ದರ್ಶನಕ್ಕೆ ಹೋದಾಗ ಮುನಿಗಳೊಡನೆ ತನ್ನ ತಾಯಿಯನ್ನು ನೋಡಲಾಗದ ಸ್ಥಿತಿಯನ್ನು ಅವರಲ್ಲಿ ಹೇಳಿಕೊಂಡಾಗ ಮುನಿಗಳು ನಿನ್ನ ತಾಯಿ ಈಗ ಚಂದ್ರಗುತ್ತಿಯಲ್ಲಿ ನೆಲಸಿ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಿದ್ದಾಳೆ. ನೀನು ಪಾದಯಾತ್ರಿಯಾಗಿ ಹೋಗಿ ತಾಯಿಯ ದರ್ಶನ ಪಡೆಯಬಹುದು ಎಂದರು. ಈತ ತನ್ನ ಪರಿವಾರದವರೊಂದಿಗೆ ಚಂದ್ರಗುತ್ತಿಗೆ ಬಂದು ತಾಯಿಯ ದರ್ಶನ ಪಡೆದು ಕೃತಾರ್ಥನಾದ ಎಂಬ ಕತೆಯನ್ನು ಇಲ್ಲಿಯವರು ಹೇಳುತ್ತಾರೆ.

ಹೀಗೆ ಪರಶುರಾಮನ ತಾಯಿಯಾದ ರೇಣುಕಾಂಬೆಯು ಚಂದ್ರಗುಪ್ತ ವಂಶದ ರಾಜಪುತ್ರಿಯಾಗಿ, ಜಮದಗ್ನಿ ಮಹರ್ಷಿಯ ಪತ್ನಿಯಾಗಿ ಪೃಥ್ವಿರಾಮನ ಮಾತೆಯಾಗಿ ಸಮಸ್ತ ಪ್ರಜೆಗಳ ಅಮ್ಮಳಾಗಿ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವ ಮಹಾದೇವತೆಯಾಗಿ ಚಂದ್ರಗುತ್ತಿಯಲ್ಲಿ ನೆಲಸಿದ್ದಾಳೆ.

## ರೇಣುಕಾಂಬೆ ದೇವಾಲಯದ ವಾಸ್ತುಗಳ ವಿವರ

ಚಂದ್ರಗುತ್ತಿ ಗ್ರಾಮದ ಪಶ್ಚಿಮಕ್ಕೆ ಒಂದು ಎತ್ತರವಾದ ಗುಡ್ಡ, ಗುಡ್ಡದ ಮೇಲೆ ಒಂದು ದೊಡ್ಡ ಬಂಡೆಕಲ್ಲು. ಇದರ ಕೆಳಭಾಗದಲ್ಲಿ ಪ್ರಕೃತಿ ನಿರ್ಮಿತವಾದ ವಿಶಾಲವಾಗಿರುವ ಗುಹೆ, ಇದರ ಒಳಗಡೆ ಸ್ತ್ರೀಯ ಎರಡು ನಿತಂಬಗಳ ಆಕಾರವಿರುವ ಹಾಸುಗಲ್ಲಿದೆ. ಈ ಕಲ್ಲಿನ ತುದಿಯ ಮಧ್ಯ ಭಾಗದಲ್ಲಿ ಒಂದೂವರೆ ಇಂಚು ಎತ್ತರ ಮೂರು ಇಂಚು ಸುತ್ತಳತೆಯ ಉದ್ದದ ಲಿಂಗವಿದೆ. ಪರಶುರಾಮ ತಂದೆಯ ಆಣತಿಯಂತೆ ರೇಣುಕೆಯನ್ನು ಕೊಲ್ಲಲು ಅಟ್ಟಿಸಿಕೊಂಡು ಬಂದಾಗ ಅವಳು ಓಡಿ ಬಂದು ಈ ಗುಹೆಯಲ್ಲಿರುವ ಶಿವಲಿಂಗವನ್ನು ತಬ್ಬಿಕೊಂಡು ಶಿವೈಕ್ಯಳಾದಳಂತೆ. ಆದ್ದರಿಂದ ರೇಣುಕೆಯನ್ನು ಶಿವೈಕ್ಯ ಸ್ವರೂಪಿಣಿ, ಗುಹಾಂಬ, ಗುತ್ಯಮ್ಮ, ಗುತ್ತಿಕನ್ನಮ್ಮ ಎಂದೂ ಕರೆಯುತ್ತಾರೆ.

ಗುಹೆಯನ್ನು ಒಳಗೊಂಡಂತೆ ಕಟ್ಟಿದ ಪ್ರಾಚೀನ ದೇವಾಲಯವಿದೆ. ಗುಹೆಯ ಮೇಲಿನ ಗುಡ್ಡದ ಮೇಲೆ ಗೋಪುರವಿದ್ದು ಗುಹೆಯ ಹೊರಭಾಗವೇ ಸುಕನಾಸಿ. ಅದರ ಮುಂದೆ ಕಟ್ಟಲಾದ ನವರಂಗವು ಚಾಲುಕ್ಯ ಶಿಲ್ಪ ಶೈಲಿಯಲ್ಲಿದೆ.

ದೇವಾಲಯದ ಒಳಗೆ ಬಲಭಾಗದಲ್ಲಿ ಎರಡೂವರೆ ಅಡಿ ಎತ್ತರ, ಒಂದೂವರೆ ಅಡಿ ಅಗಲದ ಶಾರದಾದೇವಿಯ ವಿಗ್ರಹ ಕಲ್ಲಿನ ಪೀಠದ ಮೇಲಿದೆ. ವಿಗ್ರಹದ ಹಿಂಭಾಗದಲ್ಲಿ

ಕಲ್ಲಿನ ಪ್ರಭಾವಳಿಯಿದೆ. ಎಡಬದಿಗೆ ಎರಡು ಅಡಿ ಎತ್ತರ ಒಂದು ಅಡಿ ಅಗಲದ ಐದು ಹೆಡೆಯ ನಾಗರ ಪ್ರತಿಮೆಯಿದೆ. ಇದರ ಪಕ್ಕದಲ್ಲಿ ಮೂರುವರೆ ಅಡಿ ಎತ್ತರ ಎರಡೂವರೆ ಅಡಿ ಅಗಲದ ದುರ್ಗಿಯ ವಿಗ್ರಹವಿದ್ದು ಎಂಟು ಕೈಗಳಿವೆ. ಆದರೆ ಎಲ್ಲಾ ಕೈಗಳು ಭಿನ್ನವಾಗಿವೆ. ಸರಸ್ವತಿ ಮತ್ತು ದುರ್ಗಿ ವಿಗ್ರಹಗಳು ಬಿಚ್ಚು ಎದೆಯನ್ನು ಹೊಂದಿವೆ. ಗರ್ಭಗುಡಿಯ ಪ್ರಧಾನ ಬಾಗಿಲಿನ ಎರಡೂ ಕಡೆಗೆ ಎರಡೂವರೆ ಅಡಿ ಎತ್ತರ, ಎರಡು ಅಡಿ ಅಗಲದ ದ್ವಾರಪಾಲಕರ ವಿಗ್ರಹಗಳಿವೆ.

ದೇವಾಲಯದ ಮುಂಭಾಗದಲ್ಲಿ ಏಳು ಹೆಡೆ ನಾಗೇಂದ್ರನ ಗುಡಿಯಿದೆ. ಐದು ಅಡಿ ಎತ್ತರ ಒಂದೂವರೆ ಅಡಿ ಅಗಲವುಳ್ಳ ಕಲ್ಲಿನ ಈ ವಿಗ್ರಹ ತುಂಬಾ ಸುಂದರವಾಗಿದೆ. ನಾಗೇಂದ್ರನ ಗುಡಿಯ ಎಡದಲ್ಲಿ ಒಂದೂವರೆ ಅಡಿ ಎತ್ತರ, ಒಂದು ಅಡಿ ಅಗಲದ ವಿಷ್ಣುವಿನ ವಿಗ್ರಹವಿದೆ. ಎರಡೂ ವಿಗ್ರಹಗಳ ಎದುರು ಎರಡು ಅಡಿ ಅಗಲದ ಕಲ್ಲಿನ ಪೀಠದ ಮೇಲೆ ಒಂದೂವರೆ ಅಡಿ ಅಗಲ ಒಂದೂವರೆ ಅಡಿ ಉದ್ದವುಳ್ಳ ನಾಗರ ಸಿಂಬೆಯಿದ್ದು ಸಿಂಬೆಯ ಮಧ್ಯೆ ರೇಣುಕೆಯ ಕಲ್ಲಿನ ಪಾದುಕೆಗಳಿವೆ.

### ಪರಶುರಾಮ

ದೇವಾಲಯದ ಹೊರಗೆ ಎಡಭಾಗದಲ್ಲಿ ಪರಶುರಾಮನ ಚಿಕ್ಕ ಗುಡಿಯಿದೆ. ಇದರಲ್ಲಿ ಸುಮಾರು ಮೂರು ಅಡಿ ಎತ್ತರ ಒಂದೂವರೆ ಅಡಿ ಅಗಲದ ಪರಶುರಾಮನ ವಿಗ್ರಹವಿದೆ. ವಿಗ್ರಹಕ್ಕೆ ನಾಲ್ಕು ಕೈಗಳಿದ್ದು ಮುಂಭಾಗದ ಬಲಗೈಯಲ್ಲಿ ಚೌಡಿಕೆ ಬಾರಿಸುವ ಕಡ್ಡಿ ಎಡಗೈಯಲ್ಲಿ ಚೌಡಿಕೆಯಿದೆ. ಹಿಂಭಾಗದ ಬಲಗೈಯಲ್ಲಿ ಚಕ್ರ ಎಡಗೈಯಲ್ಲಿ ಶಂಖಗಳಿವೆ. ವಿಗ್ರಹದ ಕೆಳಭಾಗದಲ್ಲಿ ಬಲಕ್ಕೆ ಪರಶು ಎಡಗಡೆ ಗದೆಯಿದೆ. ವಿಗ್ರಹದ ಸುತ್ತಲೂ ಕಲ್ಲಿನ ಪ್ರಭಾವಳಿ ಇದ್ದು ಪ್ರಭಾವಳಿಯ ಎತ್ತರ ಎರಡೂವರೆ ಅಡಿ ಅಗಲ ಎರಡು ಅಡಿ ಇದೆ.

ಗರ್ಭಗುಡಿಯ ಎದುರು ನೇರವಾಗಿ ದೇವಿಯ ವಾಹನ ಸಿಂಹದ ವಿಗ್ರಹವಿದೆ. ಇದನ್ನು ಕಲ್ಲಿನ ಪೀಠದ ಮೇಲೆ ಕೂರಿಸಿದ್ದಾರೆ. ಸಿಂಹದ ಎದುರು ಎರಡು ಕಲ್ಲಿನ ಪಾದುಕೆಗಳಿದ್ದು ಇದಕ್ಕೆ ಪಾದಗಟ್ಟೆ ಎಂದು ಕರೆಯುವರು.

ನಾಗೇಂದ್ರ ಗುಡಿಯ ಬಲಗಡೆ ಬಸವಣ್ಣನ ವಿಗ್ರಹ ಇದೆ. ಪರಶುರಾಮ ಮತ್ತು ನಾಗರ ದೇವರುಗಳ ಪೂಜೆಯನ್ನು ಬೋವಿ ಜನಾಂಗದವರು ಮಾಡುತ್ತಾರೆ.

### ಮಾತಂಗಿ ಅಮ್ಮನವರು

ರೇಣುಕಾಂಬ ದೇವಾಲಯದ ಹೊರ ಬಲಭಾಗದಲ್ಲಿ ಎರಡು ದೊಡ್ಡ ಬಂಡೆಗಳ ಕೆಳಗೆ ಮಾತಂಗಿ ಅಮ್ಮನವರಿದ್ದಾರೆ. ಒಂದೂವರೆ ಅಡಿ ಎತ್ತರ ಒಂದು ಅಡಿ ಅಗಲವುಳ್ಳ ರುಂಡ ಮಾತ್ರ ಇದೆ. ಕಿವಿಯಲ್ಲಿ ಕರ್ಣಕುಂಡಲ, ಬಾಯಲ್ಲಿ ಕೋರೆಗಳು, ಕೇಶ ವಿನ್ಯಾಸದ

ಪ್ರಭಾವಳಿ ಇದ್ದು, ಕಲ್ಲಿನ ಪೀಠದ ಮೇಲಿದೆ. ಕೊರಳಲ್ಲಿ ತೀಕಿ ಸರವಿದ್ದು, ಗಂಭೀರವಾದ ಮುಖಮುದ್ರೆಯನ್ನು ಹೊಂದಿದೆ.

ಮಾತಂಗಿಗೆ ದೇವಾಂಗ ಜನಾಂಗದವರು ಅರ್ಚಕರಾಗಿದ್ದಾರೆ. ಮಾತಂಗಿಯ ಬಲಗಡೆ ವೀರಭದ್ರನ ವಿಗ್ರಹವಿದೆ. ಎರಡು ಕಾಲು ಅಡಿ ಎತ್ತರ, ಒಂದು ಅಡಿ ಅಗಲ, ನಾಲ್ಕು ಕೈಗಳು. ಮುಂದಿನ ಬಲಗೈ ಭಿನ್ನವಾಗಿದೆ. ಎಡಗೈಯಲ್ಲಿ ದಕ್ಷನ ಶಿರವಿದ್ದು ಕೆಳಗಡೆಯಿಂದ ನಾಯಿಯೊಂದು ಶಿರವನ್ನು ಕಚ್ಚಿ ಎಳೆಯುತ್ತಿದೆ. ಹಿಂದಿನ ಬಲಗೈಯಲ್ಲಿ ತ್ರಿಶೂಲ ಎಡಗೈಯಲ್ಲಿ ಡಮರುಗಗಳಿವೆ. ಕರ್ಣಕುಂಡಲ, ಕಿರೀಟ, ಕೊರಳಹಾರ, ಕಾಲಲ್ಲಿ ಕಾಲ್ಕಡಗಗಳಿವೆ. ವಿಗ್ರಹದ ಎದುರಿಗೆ ಎರಡು ಪಾದುಕೆಗಳಿವೆ.

ಮಾತಂಗಿಯ ಎಡಭಾಗದಲ್ಲಿ ಒಂದೂಕಾಲು ಅಡಿ ಎತ್ತರ ಅರ್ಧ ಅಡಿ ಅಗಲದ ಕೈ ಮುಗಿದು ನಿಂತಿರುವ ಯಕ್ಷಿಯ ವಿಗ್ರಹವಿದ್ದು ಎರಡು ಅಡಿ ಎತ್ತರ ಒಂದೂವರೆ ಅಡಿ ಅಗಲದ ಕಲ್ಲಿನ ಹಲಗೆಯ ಮೇಲೆ ಇದನ್ನು ಕೆತ್ತಲಾಗಿದೆ. ಮಾತಂಗಿಯ ಮುಂದೆ ಪಾದಗಟ್ಟೆ ಇದೆ. ಅದರ ಮೇಲೆ ಬಸವಣ್ಣನ ವಿಗ್ರಹವಿದೆ. ಪಾದಗಟ್ಟೆಯ ಮುಂಭಾಗದಲ್ಲಿ ನಾಲ್ಕು ನಾಗರ ಕಲ್ಲುಗಳಿವೆ.

ಮಾತಂಗಿಯ ಬಲಭಾಗದಲ್ಲಿರುವ ಕಲ್ಲು ಬಂಡೆಯ ಕೆಳಗೆ ಮೂರು ಸಾಲಿನಲ್ಲಿ ಇಪ್ಪತ್ತೆಂಟು ನಾಗರ ಕಲ್ಲುಗಳನ್ನು ನಿಲ್ಲಿಸಿದ್ದಾರೆ.

**ಕಾಲಭೈರವ**

ರೇಣುಕಾಂಬ ದೇವಾಲಯಕ್ಕೆ ಗುಡ್ಡದ ಮೆಟ್ಟಿಲುಗಳನ್ನೇರಿ ಹೋಗುವಾಗ ಮಧ್ಯೆ ಕಾಲಭೈರವನ ಗುಡಿಯಿದೆ. ಎರಡು ಅಡಿ ಎತ್ತರ ಒಂದು ಅಡಿ ಅಗಲವುಳ್ಳ ಭೈರವನ ವಿಗ್ರಹಕ್ಕೆ ನಾಲ್ಕು ಕೈಗಳಿವೆ. ಮುಂಭಾಗದ ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಕಪಾಲ ಮತ್ತು ರುಂಡ. ಹಿಂಭಾಗದ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರುಗಗಳಿವೆ. ಮೂರು ಅಡಿ ಎತ್ತರ, ಎರಡೂವರೆ ಅಡಿ ಅಗಲದ ಕಲ್ಲಿನ ಪ್ರಭಾವಳಿ ಇದ್ದು ಪ್ರಭಾವಳಿಯ ಬಲಭಾಗದಲ್ಲಿ ಪ್ರೇತ, ಎಡಭಾಗದಲ್ಲಿ ನಾಯಿ, ಕೊರಳಲ್ಲಿ ರುಂಡಮಾಲೆಗಳಿವೆ. ಭೈರವನ ಎದುರು ಕಪ್ಪುಶಿಲೆಯ ಈಶ್ವರ ಲಿಂಗವಿದೆ. ಶಿವಲಿಂಗದ ಪಕ್ಕದಲ್ಲಿ ಪ್ರಶ್ನೆಯ ಗುಂಡುಯಿದೆ. ಭಕ್ತರು ತಮ್ಮ ಮನಸ್ಸಿನಲ್ಲಿ ಮಾಡಿಕೊಂಡ ಸಂಕಲ್ಪಗಳು ಈಡೇರುವುದೆಂದರೆ ಗುಂಡನ್ನು ಎತ್ತಿದಾಗ ಹಗುರವಾಗಿ ಮೇಲೇಳುತ್ತದೆ. ಇಲ್ಲವಾದರೆ ಕಲ್ಲನ್ನು ಎತ್ತುವುದು ಕಷ್ಟವಾಗುತ್ತದೆ.

ಗರ್ಭಗುಡಿಯ ಹೊರಭಾಗದ ಗೋಡೆಯ ಬಲಗಡೆ ಒಂದೂವರೆ ಅಡಿ ಎತ್ತರ, ಒಂದು ಅಡಿ ಅಗಲದ ಪದ್ಮಾಸನದಲ್ಲಿ ಮಂಡಿಸಿರುವ ಕಾಲಭೈರವಿಯ ಸುಂದರ ವಿಗ್ರಹವಿದೆ. ಕಿರೀಟ, ಕರ್ಣಕುಂಡಲಗಳಿದ್ದು ನಾಲ್ಕು ಕೈಗಳಿವೆ. ಮುಂದುಗಡೆಯ ಬಲಗೈಯಲ್ಲಿ ಖಡ್ಗ

ಎಡಗೈಯಲ್ಲಿ ಕಪಾಲ, ಹಿಂದುಗಡೆಯ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರುಗಗಳಿವೆ.

ಎಡಭಾಗದಲ್ಲಿ ಗೋಡೆಯಲ್ಲಿ ಒಂದೂವರೆ ಅಡಿ ಎತ್ತರ ಒಂದು ಅಡಿ ಅಗಲದ ವಿಘ್ನೇಶ್ವರನ ಭಗ್ನ ಮೂರ್ತಿಯಿದೆ. ಕಾಲಭೈರವನಿಗೆ ನಾಥಪಂಥದ ಬಾವಾಜಿಗಳು ಪೂಜೆ ಮಾಡುತ್ತಾರೆ.

### ಶೂಲದ ಬೀರಪ್ಪ

ದೇವಾಲಯದಿಂದ ಎಡಗಡೆ ಗುಡ್ಡ ಇಳಿದು ಸ್ವಲ್ಪ ದೂರ ನಡೆದರೆ ಶೂಲದ ಬೀರಪ್ಪನ ಗುಡಿಯಿದೆ. ಹುತ್ತದ ಮೇಲೆ ಇತ್ತೀಚಿಗೆ ಸಿಮೆಂಟಿನಿಂದ ಕಟ್ಟಿದ ಇಳಿಜಾರು ನೆಲಗಟ್ಟಿನ ಮೇಲೆ ಭಕ್ತಾದಿಗಳು ಒಪ್ಪಿಸಿದ ಸಾವಿರಾರು ಶೂಲಗಳಿವೆ. ಶೂಲದ ಬೀರಪ್ಪನ ಅರ್ಚಕರು ಕುರುಬ ಜನಾಂಗದವರು, ಇವರು ದರುಶನ ಎಂಬ ಧಾರ್ಮಿಕ ದೀಕ್ಷೆಯನ್ನು ಹೊಂದಿರುತ್ತಾರೆ. ಇವರು ದೇವಿಗೆ ಚೌಡಿಕೆ ವಾದ್ಯದ ಸೇವೆಯನ್ನು ನಡೆಸಿಕೊಡುತ್ತಾರೆ.

ಶೂಲದ ಬೀರಪ್ಪನ ಬಗ್ಗೆ ಒಂದು ಜನಪದ ಕತೆ ಈ ರೀತಿ ಇದೆ.

ಶೂಲದ ಬೀರಪ್ಪ ಪರಶುರಾಮನ ಬಂಟ ಮತ್ತು ಕ್ಷೇತ್ರಪಾಲಕ. ಪರಶುರಾಮ ಕೆಲವು ಕಾಲ ತಪಸ್ಸಿಗೆ ಹೋಗುವಾಗ ಈತನಿಗೆ ರಾಜ್ಯಭಾರದ ಜವಾಬ್ದಾರಿಯನ್ನು ವಹಿಸಿದ. ಈತ ಅತಿಕಾಮಿಯಾಗಿ ಹಾದಿಯಲ್ಲಿ ಹೋಗುವ ಹೆಣ್ಣು ಮಕ್ಕಳನ್ನು ಬೆತ್ತಲೆಗೊಳಿಸಿ, ಮೋಜು ಮಾಡಲು ಪ್ರಾರಂಭಿಸಿದ. ದಿನೇ ದಿನೇ ಇವನ ದುರಾಡಳಿತ ಹೆಚ್ಚಾಯಿತು. ತಾಯಿ ಮಾತಂಗಿಯ ಹಿತ ನುಡಿಯನ್ನು ಕೇಳದಾದ. ಇವನು ಬೆತ್ತಲೆಗೊಳಿಸಿದ ಹೆಣ್ಣು ಮಕ್ಕಳಿಗೆ ಮಾತಂಗಿ ವಸ್ತ್ರ ತೊಡಿಸಿ, ಕುಂಕುಮ ಬಳೆಗಳನ್ನು ಕೊಟ್ಟು ಕಳುಹಿಸುತ್ತಿದ್ದಳು. ರೇಣುಕೆ ಮತ್ತು ಮಾತಂಗಿಯರ ಅಹವಾಲನ್ನು ಕೇಳಿ ಪರಶುರಾಮ ತಪಸ್ಸನ್ನು ನಿಲ್ಲಿಸಿ ವಾಪಾಸಾದ. ಶೂಲದ ಬೀರಪ್ಪನ ದುರಾಡಳಿತದ ಕಥೆಯನ್ನು ಕೇಳಿ ಕೆರಳಿ ಕೆಂಡವಾದ. ಮಾನಿನಿಯರ ಮಾನಹರಣ ಮಾಡಿದ ಬೀರನಾಯಕನನ್ನು ಶೂಲಕ್ಕೇರಿಸಿದ. ಅಂದಿನಿಂದ ಇವನು ಶೂಲದ ಬೀರಪ್ಪನಾದ.

ಬೆತ್ತಲೆಸೇವೆ, ಬೇವುಡಿಗೆ ಮಾಡುವ ಭಕ್ತರು ಮಾತಂಗಿ ಗುಡಿಯವರೆಗೆ ಬಂದು ಹೊಸ ವಸ್ತ್ರ ತೊಡುವ ಸಂಪ್ರದಾಯ ಈಗಲೂ ಇದೆ.

### ಪೂಜಾ ವಿಧಾನ - ಉಡುಗೆ ತೊಡುಗೆ

ರೇಣುಕಾಂಬದೇವಿಯ ಪೂಜೆ ಮುಖ್ಯವಾಗಿ ಆಗಮೋಕ್ತ (ವೇದೋಕ್ತ)ವಾಗಿ ನಡೆಯುತ್ತದೆ. ಪ್ರತಿ ದಿವಸ ನಿರ್ಮಾಲ್ಯವನ್ನು ವಿಸರ್ಜಿಸಿ ಮಡಿಯ ನೀರಿನಿಂದ ಶುದ್ಧಗೊಳಿಸಿ

ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಹಾಗೂ ದೇವಿ ಸ್ತೋತ್ರದಿಂದ ಅಭಿಷೇಕ ನಡೆಸಿ ನಂತರ ಪುಷ್ಪಗಳಿಂದ ಅಲಂಕರಿಸಲಾಗುವುದು. ಅಷ್ಟೋತ್ತರ ಮತ್ತು ಸಹಸ್ರನಾಮದಿಂದ ಕುಂಕುಮಾರ್ಚನೆ ಮಾಡಿ ಮಹಾನೈವೇದ್ಯ ಮಹಾಮಂಗಳಾರತಿ ಮಾಡಿ ನಂತರ ಬಂದ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು.

ಅಮಾವಾಸ್ಯೆ, ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ನಡೆಯುವುದು. ಮಳೆಗಾಲದಲ್ಲಿ ಬರುವ ಜ್ಯೇಷ್ಠ, ಶ್ರಾವಣ, ಭಾದ್ರಪದ ಮಾಸಗಳಲ್ಲಿ ಬರುವ ಹುಣ್ಣಿಮೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಹುಣ್ಣಿಮೆಗಳಲ್ಲಿ ದೇವಿಯ ಪಲ್ಲಕ್ಕಿ ಉತ್ಸವ ನಡೆಸಲಾಗುವುದು. ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಬಂದು ಹರಕೆ ಒಪ್ಪಿಸುವರು, ಪ್ರತಿ ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜೆ ನಡೆಯುತ್ತದೆ.

ಪ್ರತಿ ಸಂಕ್ರಮಣದ ದಿವಸ ದೇವಾಲಯದಲ್ಲಿರುವ ಗಣಪತಿಯನ್ನು ವಿಶೇಷವಾಗಿ ಪೂಜಿಸಲಾಗುವುದು. ನವರಾತ್ರಿಯಲ್ಲಿ ಒಂಬತ್ತು ದಿವಸಗಳ ಕಾಲ ಪ್ರತಿ ದಿವಸ ವಿಶೇಷ ಪೂಜೆ, ನವಗ್ರಹ ಪೂಜೆ, ಲಲಿತ ಸಹಸ್ರನಾಮ, ಚಂಡಿಕಾಹವನ, ದೇವಿ ಪಾರಾಯಣಗಳು ನಡೆಯುತ್ತವೆ. ಕಾರ್ತೀಕ ಮಾಸದಲ್ಲಿ ಒಂದು ತಿಂಗಳು ಭಕ್ತಾದಿಗಳಿಂದ ಲಕ್ಷ ದೀಪೋತ್ಸವಗಳು ನಡೆಯುತ್ತವೆ.

ಪ್ರತಿ ವರ್ಷ ಡಿಸೆಂಬರ್ ಹದಿನಾರರಿಂದ ಜನವರಿ ಹದಿನಾಲ್ಕರವರೆಗೆ ಧನುರ್ಮಾಸದಲ್ಲಿ ತ್ರಿಕಾಲ ಪೂಜೆ ನಡೆಯುತ್ತದೆ. ಪ್ರತಿ ದಿವಸ ಅಕ್ಕಿ, ಹೆಸರು ಬೇಳೆ ಬೇಯಿಸಿ ಹುಗ್ಗಿ ಮಾಡಿ ಜೀರಿಗೆ ಮೆಣಸಿನ ಕಾಳು ಲವಂಗ ಪುಡಿ ಮಾಡಿ ಹುಗ್ಗಿ ಮಿಶ್ರ ಮಾಡಿ ನೈವೇದ್ಯ ಮಾಡುತ್ತಾರೆ. ನೈವೇದ್ಯಕ್ಕೆ ಪ್ರತಿ ದಿವಸ ಎರಡು ಗೋದಿ ರೊಟ್ಟಿ ಆಗಲೇಬೇಕು.

ಶಿವರಾತ್ರಿ ಅಮಾವಾಸ್ಯೆಯಾದನಂತರ ಬರುವ ನವಮಿ ದಿವಸ ಪ್ರತಿ ವರ್ಷ ಫಾಲ್ಗುಣ ಶುದ್ಧ ಶ್ರೇಷ್ಠಿಯಿಂದ ದಶಮಿಯವರೆಗೆ ಜಾತ್ರೆ ಪಂಚರಾತ್ರಾ ಕಾರ್ಯಕ್ರಮಗಳು ನಡೆಯುತ್ತವೆ. ಆರನೇ ದಿವಸ (ಏಕಾದಶಿ) ಭಕ್ತಾದಿಗಳು ಹರಕೆ ಒಪ್ಪಿಸುವ ಕಾರ್ಯಕ್ರಮಗಳು ನಡೆಯುತ್ತವೆ.

ಯುಗಾದಿ, ಗಣೇಶ ಚೌತಿ, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆಗಳು ಜರುಗುತ್ತವೆ. ಜಾತ್ರೆಯಲ್ಲಿ ಮತ್ತು ಇತರೆ ದಿವಸಗಳಲ್ಲಿ ಪ್ರಾಣಿಗಳನ್ನು ಬಲಿ ಕೊಡುವುದಿಲ್ಲ. ದೇವಿಗೆ ಅನ್ನ, ಹಾಲು, ಹಣ್ಣು, ತುಪ್ಪಗಳನ್ನು ಮಾತ್ರ ನೈವೇದ್ಯ ಮಾಡುತ್ತಾರೆ. ಧಾರವಾಡ, ಬೆಳಗಾಂ, ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ ಉತ್ತರ ಕನ್ನಡ ಜಿಲ್ಲೆಗಳಿಂದ ಲಕ್ಷಾಂತರ ಭಕ್ತಾದಿಗಳು ದೇವಿಗೆ ಸೇವೆ ಸಲ್ಲಿಸಲು ಬರುತ್ತಾರೆ. ಭಕ್ತರು ದೇವಿಗೆ ಅನೇಕ ವಿಶೇಷ ಪೂಜಾ ಸೇವೆಗಳನ್ನು ಮಾಡಿಸಬಹುದು. ಎಲೆ ಪೂಜೆ, ರುದ್ರಾಭಿಷೇಕ, ಕ್ಷೀರಾಭಿಷೇಕ,

ಏಕಾದಶಿ ರುದ್ರಾಭಿಷೇಕ, ಮಹಾಪಂಚಾಮೃತಾಭಿಷೇಕ, ಸಹಸ್ರನಾಮ ಕುಂಕುಮಾರ್ಚನೆ, ಪಂಚಾಮೃತಾಭಿಷೇಕ, ಮಹಾನೈವೇದ್ಯ ಪೂಜಾ, ಒಂದು ದಿನದ ಪೂಜಾ ಸೇವೆ, ಪುಷ್ಪಾರ್ಚನೆ, ಪುಷ್ಪಾಲಂಕಾರ, ದಿನ, ವಾರ, ಎರಡುವಾರ ತಿಂಗಳು, ಮೂರು ತಿಂಗಳು, ವರ್ಷಗಳವರೆಗೆ ನಂದಾದೀಪ ಸೇವೆ, ಹೀಗೆ ಅನೇಕ ರೀತಿಯಲ್ಲಿ ದೇವಿಗೆ ವಿಶೇಷ ಪೂಜಾ ಸೇವೆಯನ್ನು ಸಲ್ಲಿಸಿ ಕೃತಾರ್ಥರಾಗಬಹುದು.

ಸಾಮಾನ್ಯ ಸೇವೆಗಳಾಗಿ ಹಣ್ಣು-ಕಾಯಿ, ಮಂಗಳಾರತಿ, ಕುಂಕುಮಾರ್ಚನೆ, ಚೌಲ, ಕಿವಿ ಚುಚ್ಚುವುದು, ಮೂಗು ಚುಚ್ಚುವುದು, ಫಲಕಾಯಿ ಆಶೀರ್ವಾದ, ನಿಂಬೆ ಹಣ್ಣು ಆಶೀರ್ವಾದ, ಪಡ್ಲಿಗೆ ಅಭಿಷೇಕ, ಕೊಡ ಅಭಿಷೇಕ, ಚೌಡಿಕೆ ಅಭಿಷೇಕ, ಗುಪ್ತ ಪ್ರಶ್ನೆ, ಎಲೆಕತ್ರಿ, ತುಲಾಭಾರ, ಮುತ್ತು ಕಟ್ಟುವುದು, ವಿಶೇಷ ಮುತ್ತು ಕಟ್ಟಿಸುವುದು ಮುಂತಾದವುಗಳಾಗಿವೆ.

ದೇವಿಯ ಭಕ್ತರಲ್ಲಿ ವಿದ್ಯಾವಂತರೂ, ಉಚ್ಚವರ್ಗದವರೂ ಇದ್ದಾರೆ, ಆದರೆ ಹಿಂದುಳಿದ ವರ್ಗದವರು ಹೆಚ್ಚಾಗಿದ್ದಾರೆ. ಹಿಂದೂಗಳಲ್ಲದೆ ಅನ್ಯ ಮತದವರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧರು ಕೂಡ ದೇವಿಯ ಭಕ್ತರಿದ್ದಾರೆ.

ಮಲೆನಾಡಿನ ಹಳ್ಳಿಗಳಲ್ಲಿ ಶೇಕಡ ಎಪ್ಪತ್ತೈದು ಕುಟುಂಬಗಳು ದೇವಿಯ ಒಕ್ಕಲಾಗಿದ್ದಾರೆ. ಉಳಿದ ಇಪ್ಪತ್ತೈದು ಭಾಗ ಶಿಕಾರಿಪುರದ ಹುಚ್ಚರಾಯಸ್ವಾಮಿ ಭಕ್ತರು, ಬಯಲು ಸೀಮೆಯಲ್ಲಿ ಕೆಲವೊಂದು ದೊಡ್ಡ ದೊಡ್ಡ ಊರುಗಳೇ ದೇವಿಯ ದತ್ತು ಗ್ರಾಮವಾಗಿವೆ.

ಗುತ್ತಿ ಒಕ್ಕಲುಗಳ ಕುಟುಂಬದಲ್ಲಿ ನಡೆಯುವ ಶುಭ ಕಾರ್ಯಗಳ ಮೊದಲು ದೇವಿಯ ಅನುಗ್ರಹ ಪಡೆದು ಬರುತ್ತಾರೆ. ಮದುವೆಯಲ್ಲಿ ಧಾರೆಯ ಹಿಂದಿನ ದಿವಸ ನಡೆಯುವ ದೇವ ಕಾರ್ಯದಂದು, ಚಂದ್ರಗುತ್ತಿಗೆ ಹೋಗಿ ದೇವಿಗೆ ಹಣ್ಣು, ಕಾಯಿ ಮಾಡಿಸಿ ಪೂಜೆ ಸಲ್ಲಿಸಿ ಬರುತ್ತಾರೆ. ಮದುವೆಯ ನಂತರ ವಧೂವರರು ಹೋಗಿ ದೇವಿಗೆ ಉಡಿ ತುಂಬಿಸಿ ಹಣ್ಣು ಕಾಯಿ ಮಾಡಿಸಿ ಪೂಜೆ ಸಲ್ಲಿಸಿ ಬರುವ ಸಂಪ್ರದಾಯವಿದೆ. ಪ್ರಥಮವಾಗಿ ಋತುವಾದ ಹೆಣ್ಣು ಮಕ್ಕಳು ಋತುವಾದ ಐದು ದಿವಸಗಳ ನಂತರ ದೇವಿಯ ಸನ್ನಿಧಿಗೆ ಹೋಗಿ ಉಡಿ ತುಂಬಿಸಿ ಪೂಜೆ ಸಲ್ಲಿಸಿ ದೇವಿಯ ಆಶೀರ್ವಾದ ಪಡೆದು ಬರುತ್ತಾರೆ. ಮರಣ ಸಂಭವಿಸಿದ ಕುಟುಂಬದವರು ಸ್ವರ್ಗಸ್ಥರಾದವರ ವೈಕುಂಠ ಸಮಾರಾಧನೆ ದಿವಸ ಜಕಣಿ (ದೀಪ) ಕೊಡಿಸಲು, ಚಂದ್ರಗುತ್ತಿಯಿಂದ ನಿಂಬೆಹಣ್ಣು, ಫಲಕಾಯಿ ಆಶೀರ್ವಾದ ಮಾಡಿಸಿ ತರುತ್ತಾರೆ. ಆರು ತಿಂಗಳು ತುಂಬಿದ ಗರ್ಭಿಣಿ ಮಹಿಳೆಯರು ದೇವಿಯ ದರ್ಶನಕ್ಕೆ ಹೋಗುವುದಿಲ್ಲ, ಆದರೆ ಹೆರಿಗೆಯ ನಂತರ ಮಗುವಿನೊಂದಿಗೆ ಹೋಗಿ ದೇವಿಯ ಆಶೀರ್ವಾದ ಪಡೆದು ಬರುತ್ತಾರೆ.

ನವರಾತ್ರಿಯಲ್ಲಿ ನಡೆಯುವ ಒಂಬತ್ತು ದಿವಸಗಳ ಉತ್ಸವದಲ್ಲಿ ಮೊದಲನೆ ದಿವಸ ಗುತ್ತಿಯ ವಕ್ಕಲು ಒಪ್ಪತ್ತು ಆಚರಿಸುವ ಪದ್ಧತಿಯಿದೆ. ಆ ದಿನ ಕುಟುಂಬದವರೆಲ್ಲರೂ ಉಪವಾಸವಿದ್ದು ಶುಚಿರ್ಭೂತರಾಗಿ ಅಮ್ಮನನ್ನು ತಂದು ಪೂಜಿಸುತ್ತಾರೆ. ಹಿತ್ತಾಳೆ ಗಿಂಡಿಯಲ್ಲಿ ಬಾವಿಯಿಂದ ಹೊಸ ನೀರು ತುಂಬಿ ಮೂರು ಚಿಕ್ಕ ಕಲ್ಲುಗಳನ್ನು ಗಿಂಡಿಗೆ ಹಾಕಿ ಮಾವಿನ ತೊಳಲು, ಲಕ್ಕಿ ಕುಡಿ ಗಿಂಡಿಯಲ್ಲಿಟ್ಟು ಹೂವು ಏರಿಸಿ, ಪೂಜಿಸುವ ಕ್ರಮಕ್ಕೆ ಅಮ್ಮನನ್ನು ತರುವುದು ಎನ್ನುತ್ತಾರೆ. ವಿಶೇಷವಾದ ಅಡಿಗೆ ಮಾಡಿ ಅಮ್ಮನಿಗೆ ಎಡೆ ಮಾಡುತ್ತಾರೆ. ಎಡೆ ಮಾಡಿರುವ ಪದಾರ್ಥವನ್ನು ಪ್ರಸಾದವೆಂದು ತಿಳಿದು ಕುಟುಂಬದವರೆಲ್ಲರೂ ಊಟ ಮಾಡುತ್ತಾರೆ. ಎಡೆಯಲ್ಲಿರುವ ಒಂದು ಅಗಳು ಪದಾರ್ಥವನ್ನು ಹೊರಗಡೆ ಚೆಲ್ಲುವ ಹಾಗಿಲ್ಲ. ಒಮ್ಮೆ ಚೆಲ್ಲಿದರೆ ಅದನ್ನು ನಾಯಿ, ಕೋಳಿಗಳು ತಿಂದರೆ ಕುಟುಂಬದವರಿಗೆ ಕಣ್ಣು ಹೋಗುತ್ತವೆ ಎಂಬ ನಂಬಿಕೆಯಿದೆ. ಭೋಜನದ ನಂತರ ಅಮ್ಮನನ್ನು ತೆಂಗಿನ ಮರದ ಬುಡದಲ್ಲಿ ಗಿಂಡಿಯಲ್ಲಿರುವ ನೀರನ್ನು ಚೆಲ್ಲಿ ವಿಸರ್ಜನೆ ಮಾಡುತ್ತಾರೆ.

**ಉಡುಗೆ-ತೊಡುಗೆ**

ಅಮಾವಾಸ್ಯೆ, ಹುಣ್ಣಿಮೆ, ನವರಾತ್ರಿ ಉತ್ಸವ, ರಥೋತ್ಸವಗಳಲ್ಲಿ ದೇವಿಯ ಶಿವಲಿಂಗಕ್ಕೆ ಬೆಳ್ಳಿಯ ಮುಖವಾಡವನ್ನು ಹಾಕಿ ಅಲಂಕರಿಸುತ್ತಾರೆ. ಮುಖವಾಡ ಅರ್ಧ ಅಡಿ ಎತ್ತರ ನಾಲ್ಕು ಇಂಚು ಅಗಲವಾಗಿದೆ. ಪ್ರತಿ ಸಾರಿ ಗುಹೆಯಲ್ಲಿ ಲಿಂಗವಿರುವ ಕಡಿದಾದ ಸ್ಥಳಕ್ಕೆ ಹೋಗಿ ಪೂಜೆ ಸಲ್ಲಿಸುವುದು ಕಷ್ಟವಾಗುವುದರಿಂದ ಗುಹೆಯಲ್ಲಿರುವ ಹಾಸುಗಲ್ಲಿನ ಬುಡದಲ್ಲಿ ಪ್ರತ್ಯೇಕವಾದ ದೇವಿಯ ಬೆಳ್ಳಿಯ ಮುಖವಾಡವನ್ನಿಟ್ಟು ಪೂಜಿಸುತ್ತಾರೆ. ಇದರ ಎತ್ತರ ಎರಡು ಅಡಿ, ಅಗಲ ಮುಕ್ಕಾಲು ಅಡಿ ಇದೆ.

ಪಲ್ಲಕ್ಕಿ ಉತ್ಸವ, ರಥೋತ್ಸವ, ನವರಾತ್ರಿಗಳಲ್ಲಿ ಬಳಸುವ ಉತ್ಸವ ಮೂರ್ತಿಯು ಪಂಚಲೋಹದಾಗಿದ್ದು ಇದರ ಎತ್ತರ ಒಂದೂವರೆ ಅಡಿ, ಅಗಲ ಒಂದೂ ಕಾಲು ಅಡಿ ಇದೆ. ಎದೆಯ ಭಾಗವನ್ನು ಮರದಿಂದ ತಯಾರಿಸಿದ್ದಾರೆ.

ಉತ್ಸವ ಮೂರ್ತಿಗೆ ರೇಷ್ಮೆ ಸೀರೆ ಉಡಿಸುತ್ತಾರೆ. ಮೂಗಿಗೆ ಬಂಗಾರದ ನತ್ತು ಮತ್ತು ಮೂಗುತಿ, ಕಿವಿಗೆ ಬಂಗಾರದ ಓಲೆಗಳು ತಲೆಗೆ ನೆತ್ತಿಯ ಮೇಲೆ ಬೆಳ್ಳಿ ಕಿರೀಟ, ಕಣ್ಣಿಗೆ ಬಂಗಾರದ ಕಣ್ಮಂಗಳ ಮಧ್ಯೆ ನೀಲಿ ಹರಳು ಇರುವ ಕಣ್ಣುಗಳು, ಕೊರಳಿಗೆ ಬಂಗಾರದ ಗುಂಡಿನ ಸರ, ಚಿನ್ನದ ತೀಕಿ, ನೆಲ್ಲಿಕಾಯಿ, ಬೋರೆ ಗುಂಡಿನ ಚಿನ್ನದ ಸರಗಳು, ಬಂಗಾರದ ತಾಳಿ ಸರ ಹಾಕುವರು. ಸೊಂಟಕ್ಕೆ ಬಣ್ಣ ಬಣ್ಣದ ಹರಳುಗಳಿರುವ ಅಡಿಕೆ ಪಟ್ಟಿ, ಕಿವಿಗೆ ಚಿನ್ನದ ಬುಗುಡಿ, ಕೆನ್ನೇ ಸರಪಳಿ, ಭುಜಗಳಿಗೆ ಬೆಳ್ಳಿಯ ಭುಜ ಕೀರ್ತಿಗಳನ್ನು ತೊಡಿಸಿ ಕಾಲಿನ ಕೆಳಕ್ಕೆ ಬೆಳ್ಳಿಯ ಪಾದುಕೆಗಳನ್ನಿಡುವರು, ಜಡೆಗೆ ಬೆಳ್ಳಿ ಬಂಗಾರದ ಜಡೆ ಬಂಗಾರಗಳನ್ನು ಧರಿಸುತ್ತಾರೆ.

ಬಂಗಾರದ ಹೂವುಗಳಿಂದ ಕೂಡಿದ ನವರತ್ನಗಳನ್ನು ಜೋಡಿಸಿದ ವಿಶೇಷವಾದ ಸುವರ್ಣ ಕಿರೀಟವಿದೆ. ಇದನ್ನು ರಥೋತ್ಸವ, ನವರಾತ್ರಿ ಉತ್ಸವ ಮುಂತಾದ ವಿಶೇಷ ಸಂದರ್ಭಗಳಲ್ಲಿ ಉತ್ಸವ ಮೂರ್ತಿಗೆ ಬಂಗಾರದ ಕೇದಿಗೆ ಮುಂದಲೆಗಳನ್ನು ಜೋಡಿಸಿ ತೊಡಿಸುತ್ತಾರೆ.

**ನಂಬಿಕೆಗಳು ಮತ್ತು ಹರಕೆಗಳು**

ಗುತ್ತಮ್ಮದೇವಿಯ ಭಕ್ತಾದಿಗಳು ತಮ್ಮ ಕುಟುಂಬದಲ್ಲಿ ಬರುವ ಅನೇಕ ಸಮಸ್ಯೆಗಳ ಮತ್ತು ಕಷ್ಟಗಳ ಪರಿಹಾರಕ್ಕಾಗಿ ದೇವಿಗೆ ಹರಕೆ ಹೊರುತ್ತಾರೆ. ಕುಟುಂಬದ ಸ್ತ್ರೀ ಪುರುಷರಿಗೆ ಮತ್ತು ಮಕ್ಕಳಿಗೆ ಕಾಯಿಲೆಗಳಾದಾಗ, ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಸಂಭವಿಸಿದಾಗ ಜಾನುವಾರುಗಳ ರೋಗಗಳಿಗೆ, ಕಣ್ಣಿನ ದೋಷಗಳಿಗೆ, ಹೆಣ್ಣು ಮಕ್ಕಳಿಗೆ ವರ ಸಿಕ್ಕದೆಯಿರುವಾಗ, ತುಂಬಾ ವರ್ಷಗಳವರೆಗೆ ಮಕ್ಕಳಾಗದೆ ಇದ್ದವರು, ನ್ಯಾಯಾಲಯದಲ್ಲಿರುವ ವ್ಯಾಜ್ಯ, ಭೂ ವಿವಾದಗಳ ಪರಿಹಾರಗಳಿಗೆ ದೇವಿಗೆ ಹರಕೆ ಹೊತ್ತು ಒಪ್ಪಿಸುತ್ತಾರೆ.

ಮುಖ ಕೈಕಾಲುಗಳ ಮೇಲೆ 'ಚಯಕಲು'ಗಳು ಎದ್ದಾಗ ಬೆಳ್ಳಿ ಚಮಕಲು ಅಕ್ಕಿ ಮೆಣಸಿನಕಾಳು ಪೇರಿಸಿ ರಥೋತ್ಸವದ ದಿವಸ ರಥಕ್ಕೆ ಬೀರುತ್ತಾರೆ. ಜಾನುವಾರುಗಳಿಗೆ ಉಗುಣು ಮತ್ತು ರೋಗಗಳು ಬಂದಾಗ ಹಾಲಿನ ಅಭಿಷೇಕ ಮಾಡಿಸಿ, ತುಪ್ಪದ ದೀಪ ಹಚ್ಚುತ್ತೇವೆಂದು ಹರಕೆ ಹೊರುತ್ತಾರೆ. ಕಣ್ಣು ಕಾಣದೆ ತೊಂದರೆಯಾದವರು ದೇವಿಗೆ ಬೆಳ್ಳಿಯ ಕಣ್ಣು ಮಾಡಿಸಿ ಅರ್ಪಿಸುತ್ತಾರೆ. ಹೆಣ್ಣು ಮಕ್ಕಳಿಗೆ ಬೇಗ ವರ ದೊರಕಿ ಮದುವೆಯಾಗಲಿ ಎಂದು ಹರಕೆ ಹೊತ್ತವರು, ಮದುವೆಯ ನಂತರ ದೇವಿಗೆ ಉಡಿ ತುಂಬಿಸಿ ಸೀರೆ, ಕಣ ಅರ್ಪಿಸಿ ಜೋಡು ತೆಂಗಿನಕಾಯಿ ಒಡೆಸುತ್ತಾರೆ. ಸ್ತ್ರೀಯರು ತನ್ನ ಗಂಡನಿಗೆ ವಾಸಿಯೇ ಆಗದಂತ ಕಾಯಿಲೆಯಾಗಿ ಬದುಕುವುದೇಯಿಲ್ಲ ಎನ್ನುವ ಸ್ಥಿತಿಗೆ ಬಂದಾಗ ನನ್ನ ಪತಿಯ ಜೀವ ಉಳಿಸು ತಾಯಿ ಎಂದು ತನ್ನ ಕೊರಳಿನ ತಾಳಿಯನ್ನೇ ದೇವಿಗೆ ಅರ್ಪಿಸುತ್ತಾರೆ.

ಭಕ್ತಾದಿಗಳು ಎತ್ತು, ಕುರಿ, ಕೋಣ, ಎಮ್ಮೆಗಳನ್ನು ಜೀವಂತವಾಗಿ ದೇವಿಯ ಹೆಸರಿನಲ್ಲಿ ಬಿಡುತ್ತಾರೆ. ಫಸಲಿನ ಹೆಚ್ಚಳಕ್ಕೆ ಧನ, ಧಾನ್ಯ, ತೆಂಗು, ಅಡಿಕೆ, ಹಲಸು, ಬಾಳೆ, ಶುಂಠಿ, ಕಬ್ಬು ಮುಂತಾದವುಗಳನ್ನು ಹರಕೆ ಒಪ್ಪಿಸುವರು. ಬೆಳ್ಳಿ ತೊಟ್ಟಿಲು, ಬಂಗಾರದ ತಾಳಿ, ಮುಖುರ, ಬೆಳ್ಳಿಯ ಛತ್ರಿ, ತ್ರಿಶೂಲ, ಚರುಕಲು, ಕಣ್ಣುಗಳು, ಕೋರೆ ಮೀಸೆ ಮುಂತಾದ ಬೆಳ್ಳಿ ಬಂಗಾರದ ವಸ್ತುಗಳನ್ನು ಹರಕೆ ಒಪ್ಪಿಸುವರು. ರೇಷ್ಮೆ ಸೀರೆಗಳು ಮತ್ತು ಸಾದಾ ಸೀರೆಗಳು, ಕಣ, ರೇಷ್ಮೆ ಕಣ, ತಾಮ್ರ, ಹಿತ್ತಾಳೆ, ಕಂಚಿನ ಪಾತ್ರೆಗಳನ್ನು ಹರಕೆಯ ರೂಪದಲ್ಲಿ ದೇವಿಗೆ ಅರ್ಪಿಸುವರು.

ಬೇವುಡಿಗೆ, ಗಂಧದುಡಿಗೆ, ಅರಿಶಿನದುಡಿಗೆ, ಒದ್ದೆವುಡಿಗೆ, ಉರುಳು ಸೇವೆ, ದೀಡು ನಮಸ್ಕಾರ, ಶಸ್ತ್ರ ಚುಚ್ಚಿಸಿಕೊಳ್ಳುವುದು, ಸಿಡಿ ಹರಕೆ, ಮುಡಿ ನೀಡುವುದು, ಹತ್ತು ಬೆರಳಾರತಿ, ಎಲೆಪೂಜೆ ಮುಂತಾದ ದೈಹಿಕ ಮತ್ತು ಮಾನಸಿಕ ಶಿಕ್ಷೆಯ ಹರಕೆಗಳು ಇಲ್ಲಿ ನಡೆಯುತ್ತವೆ.

## ಬೇವುಡಿಗೆ

ಬೇವು ಅಥವಾ ಲಕ್ಕಿ ಸೊಪ್ಪನ್ನು ದಾರದಿಂದ ಹೆಣೆದು ತಟ್ಟಿ ಮಾಡಿ ಎದೆ ಮತ್ತು ಸೊಂಟದಿಂದ ಮೊಳಕಾಲವರೆಗೆ ಕಟ್ಟಿಕೊಳ್ಳುತ್ತಾರೆ. ಬೇವುಡಿಗೆಯ ಹೊಸ ಬಟ್ಟೆಯನ್ನು ಸುತ್ತಿಕೊಂಡು ತೊಟ್ಟಿಲು ಬಾವಿಯಿಂದ ಪ್ರಾರಂಭಿಸಿ ಮಾತಂಗಿ ಗುಡಿಯವರೆಗೆ, ದೇವಿಗೆ ಉಧೋ ಹಾಕುತ್ತಾ ಹೋಗುವುದು. ಮಾತಂಗಿ ಗುಡಿಯವರೆಗೆ ಹೋಗಿ ಬೇವುಡಿಗೆಯನ್ನು ಬಿಚ್ಚಿ ಹೊಸ ಬಟ್ಟೆಯನ್ನು ಧರಿಸುತ್ತಾರೆ.

## ಉರುಳು ಸೇವೆ

ಸ್ನಾನ ಮಾಡಿ ಒದ್ದೆ ಉಡಿಗೆ ಉಟ್ಟು ದೇವಿಗೆ ಕಂಕಣ ಕಟ್ಟುವ ಸ್ಥಳದಿಂದ ತೇರು ನೆಲೆ ನಿಲ್ಲುವ ಅಥವಾ ಓಕಳಿ ಕಟ್ಟೆಯವರೆಗೆ ದೇವಿಯನ್ನು ಧ್ಯಾನಿಸುತ್ತಾ ಉರುಳುವುದು.

## ಗಂಧದುಡಿಗೆ / ಅರಿಶಿನದುಡಿಗೆ

ಗಂಧ ಮತ್ತು ಅರಿಶಿನದುಡಿಗೆ ಸೇವೆಗಳು ಪ್ರತ್ಯೇಕವಾಗಿಲ್ಲ. ಬೆತ್ತಲೆ ಸೇವೆ ಮಾಡುವವರು ಗಂಧ ಮತ್ತು ಅರಿಶಿನವನ್ನು ತೇಯ್ದು ದೇಹದ ಎಲ್ಲಾ ಭಾಗಗಳಿಗೆ ಲೇಪಿಸಿಕೊಳ್ಳುವರು.

## ದೀಡು ನಮಸ್ಕಾರ

ದೀಡು ನಮಸ್ಕಾರ ಎಂದರೆ ಒಂದೂವರೆ ನಮಸ್ಕಾರ. ಸಾಷ್ಟಾಂಗ ನಮಸ್ಕಾರ ಮಾಡಿ ಬಲಗೈ ಮುಂದೆ ಚಾಚಿ ಗೆರೆ ಹಾಕಿ ನಾಲ್ಕು ಹೆಜ್ಜೆ ಮುಂದಿಟ್ಟು ಅಡ್ಡ ಬೀಳುತ್ತಾ ದೇವಸ್ಥಾನ ತಲುಪುವುದು. ಚಂದ್ರಗುತ್ತಿಯಿಂದ ಎರಡು ಕಿಲೋಮೀಟರು ದೂರವಿರುವ ವರದಾ ನದಿಯಿಂದ ಪ್ರಾರಂಭಿಸಿ ದೇವಾಲಯದವರೆಗೆ ಬರುತ್ತಾರೆ.

## ಸಿಡಿಯಾಡುವುದು

ಸಿಡಿಯಾಡುವ ಪದ್ಧತಿ ಅನೇಕ ವರ್ಷಗಳ ಹಿಂದೆ ಇತ್ತು ಎಂದು ತಿಳಿದುಬರುತ್ತದೆ. ಆದರೆ ಈಗ ಆ ಪದ್ಧತಿ ಸಂಪೂರ್ಣವಾಗಿ ನಿಂತುಹೋಗಿದೆ. ಸಿಡಿಯಾಡುವ ಸಂಪ್ರದಾಯದ ಕುಟುಂಬದವರು ಮಾತ್ರ ಸಿಡಿಯಾಡುತ್ತಿದ್ದರು. ಮಾತಂಗಿ ಗುಡಿಯ ಮುಂಭಾಗದಲ್ಲಿ ಸಿಡಿಯಾಡುವ ಕಟ್ಟೆ ಇತ್ತು ಎಂದು ಹೇಳುತ್ತಾರೆ. ಆದರೆ ಈಗ ಅದು ಇರುವುದಿಲ್ಲ.

**ವದ್ದೆವುಡಿಗೆ**

ತೊಟ್ಟಿಲು ಬಾವಿಯಿಂದ ಮೈಮೇಲೆ ನೀರು ಹಾಕಿಕೊಂಡು ವದ್ದೆಬಟ್ಟೆ ಸಹಿತ ದೇವಿಗೆ ಉಧೋ ಹಾಕುತ್ತಾ ದೇವಾಲಯದವರೆಗೆ ಬರುವುದು.

**ಶಸ್ತ್ರ ಹರಕೆ**

ಮಾತಂಗಿ ಗುಡಿಯ ಎದುರು ಎರಡು ಹಸ್ತಗಳನ್ನು ಜೋಡಿಸಿಕೊಂಡು ಹೆಬ್ಬೆಟ್ಟಿನ ಕೆಳಭಾಗದಲ್ಲಿ ಎರಡೂ ಕಡೆ ಐದೈದರಂತೆ ಹತ್ತು ಗುಂಡು ಸೂಚಿ ಅಥವಾ ಬೆಳ್ಳಿಯ ಸೂಜಿಗಳನ್ನು ಚುಚ್ಚಿಕೊಂಡು, ಮಾತಂಗಿ ಗುಡಿಯನ್ನು ಪ್ರದಕ್ಷಿಣೆ ಮಾಡಿ ಸೂಜಿಗಳನ್ನು ತೆಗೆದು ದೇವಾಲಯದ ಮುಖ್ಯ ದ್ವಾರಕ್ಕೆ ಬಂದು ಸುಳಿಗಾಯಿ ಒಡೆಯುತ್ತಾರೆ.

**ಹತ್ತು ಬೆರಳಾರತಿ**

ಎರಡೂ ಹಸ್ತಗಳನ್ನು ಜೋಡಿಸಿ ಬೆರಳಿನ ತುದಿಯಲ್ಲಿ ಗೋದಿ ಹಿಟ್ಟಿನ ಹಣತೆಯಾಕಾರದ ಉಂಡೆಯನ್ನಿಟ್ಟುಕೊಂಡು ಎಣ್ಣೆ ಅಥವಾ ತುಪ್ಪದಲ್ಲಿ ಅದ್ದಿದ ಬತ್ತಿಯನ್ನಿಟ್ಟು ದೀಪ ಹಚ್ಚಿ ದೇವಿಗೆ ಮೂರು ಅಥವಾ ಐದು ಸುತ್ತು ಬೆಳಗುವುದು. ಆ ವರ್ಷ ಹೊಸದಾಗಿ ಮದುವೆಯಾದ ನವ ದಂಪತಿಗಳು ಈ ಆರತಿಯನ್ನು ಬೆಳಗುತ್ತಾರೆ.

**ಎಲೆಪೂಜೆ**

ಎರಡು ಅಥವಾ ಐದು ನೂರು ವೀಳೆದೆಲೆಗಳನ್ನು ದೇವಿಗೆ ಏರಿಸುವುದು ಎಲೆ ಪೂಜೆ, ಹೂವು ಎಲೆ ಸೇರಿದ ಹಾರ ತಯಾರಿಸಿ ದೇವಿಗೆ ಹಾಕುತ್ತಾರೆ. ಗರ್ಭಗುಡಿಯ ಬಾಗಿಲಿಗೆ ಎಲೆಗಳಿಂದ ತೋರಣ ಕಟ್ಟುತ್ತಾರೆ.

**ಬೆತ್ತಲೆ ಸೇವೆ**

ಬೆತ್ತಲೆ ಸೇವೆಯನ್ನು ನಿರ್ವಾಣ ಸೇವೆ, ಹುಟ್ಟುಡುಗೆ, ದಾಂಡುಡಿಗೆ, ಬೆತ್ತಲುಡಿಗೆ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇದು ಚಂದ್ರಗುತ್ತಿಯಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದ ನಡೆದುಬಂದ ಪದ್ಧತಿ. ಪ್ರತಿ ವರ್ಷ ಜಾತ್ರೆಯ ಮೂರು ಮತ್ತು ನಾಲ್ಕನೇ ದಿವಸ ಸಣ್ಣ ತೇರು ಮತ್ತು ದೊಡ್ಡ ತೇರಿನ ದಿವಸ ನಡೆಯುತ್ತದೆ.

ಚಂದ್ರಗುತ್ತಿ ಜಾತ್ರೆಗೆ ಮೂರು ಮಾರ್ಗಗಳಿಂದ ಭಕ್ತಾದಿಗಳು ಬರುತ್ತಾರೆ. ಸೊರಬ ಮಾರ್ಗ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಮತ್ತು ಶಿರಸಿ-ಬನವಾಸಿ ಮಾರ್ಗ, ಈ ಮೂರು ಮಾರ್ಗಗಳಲ್ಲಿಯೂ ಚಂದ್ರಗುತ್ತಿಗೆ ಎರಡು ಕಿಲೋಮೀಟರು ದೂರದಲ್ಲಿ ಮೂರು ನದಿಗಳು ಹರಿಯುತ್ತವೆ. ಸೊರಬದ ಕಡೆಯಿಂದ ಬರುವ ಭಕ್ತರಿಗೆ ವರದಾನ, ಜೋಳದ ಗುಡ್ಡೆ ಎಂಬಲ್ಲಿ ಅಡ್ಡ ಬರುತ್ತದೆ. ಸಿದ್ದಾಪುರ ಮತ್ತು ಶಿರಸಿ, ಬನವಾಸಿ ಮಾರ್ಗವಾಗಿ

ಬರುವ ಭಕ್ತರಿಗೆ ಕಲವಾಯಿ, ಚೆನ್ನಪಟ್ಟದ ನದಿಗಳು ಎದುರಾಗುತ್ತವೆ. ಈ ಮೂರೂ ನದಿಗಳಿಂದ ಆಯಾಯ ಮಾರ್ಗವಾಗಿ ಬರುವ ಭಕ್ತಾದಿಗಳು ಸ್ನಾನ ಮಾಡಿ ಮೂರು ಕಡೆಗಳಿಂದ ಬೆತ್ತಲಾಗಿ ದೇವಸ್ಥಾನಕ್ಕೆ ಬರುತ್ತಾರೆ.

ಬೆತ್ತಲೆ ಸೇವೆಗಾಗಿ ಬರುವ ಭಕ್ತರು ಹಿಂದಿನ ದಿವಸವೇ ಬಂದು ನದಿಯ ಪಕ್ಕದಲ್ಲಿರುವ ಮರಗಳ ಕೆಳಗೆ ಅಥವಾ ಹತ್ತಿರದ ಹಳ್ಳಿಗಳಲ್ಲಿ ಬಿಡಾರ ಹೂಡುತ್ತಾರೆ. ರಥೋತ್ಸವದ ದಿವಸ ಬೆಳಿಗ್ಗೆಯಿಂದ ಮಧ್ಯಾಹ್ನ ಒಂದು ಗಂಟೆಯವರೆಗೆ ಬೆತ್ತಲೆ ಸೇವೆ ನಡೆಯುತ್ತದೆ. ಧಾರವಾಡ, ಚಿತ್ರದುರ್ಗ ಮತ್ತು ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳ ರಾಣೆಬೆನ್ನೂರು, ಚಿಕ್ಕೇರಿ, ಹಿರೇಕೆರೂರು, ಹಾವೇರಿ, ಬ್ಯಾಡಗಿ, ಹರಿಹರ, ದಾವಣಗೆರೆ, ಸಿದ್ದಾಪುರ, ಶಿರಸಿ, ಚೆನ್ನಗಿರಿ, ಹೊನ್ನಾಳಿ ಮುಂತಾದ ಕಡೆಗಳಿಂದ ಬರುವ ಭಕ್ತಾದಿಗಳು ದೇವಿಗೆ ಬೆತ್ತಲೆ ಸೇವೆ ಹರಕೆ ಒಪ್ಪಿಸುತ್ತಾರೆ. ಸೊರಬ ಮತ್ತು ಚಂದ್ರಗುತ್ತಿಯ ನೆರೆ ಹೊರೆಯ ಹಳ್ಳಿಯವರು ಬೆತ್ತಲೆ ಸೇವೆ ಮಾಡುವುದು ತುಂಬಾ ಕಡಿಮೆ.

ಸಂತಾನವಿಲ್ಲದವರು, ಪತಿ ಪತ್ನಿಯರಿಗೆ ಕಾಯಿಲೆಯಾಗಿ ವೈದ್ಯಕೀಯದಿಂದ ಗುಣಪಡಿಸಲು ಸಾಧ್ಯವಾಗದೆಯಿದ್ದವರು, ಕುಟುಂಬದಲ್ಲಿ ಮೇಲಿಂದ ಮೇಲೆ ಬರುವ ಅನೇಕ ಕಷ್ಟಗಳಿಗೆ ದೇವಿಗೆ ಸಂಪೂರ್ಣ ಶರಣಾಗತರಾಗಿ ಸಮರ್ಪಣಾ ಭಾವದಿಂದ ನಿನ್ನ ಗುಡಿಗೆ ಬಂದು ದುಂಡುಡಿಗೆ ಸೇವೆ ಸಲ್ಲಿಸುತ್ತೇವೆ ಎಂದು ಹರಕೆ ಹೊರುತ್ತಾರೆ.

ಬೆತ್ತಲೆ ಸೇವೆ ಸಲ್ಲಿಸುವ ಭಕ್ತಾದಿಗಳಲ್ಲಿ ಲಿಂಗ ಭೇದವಿಲ್ಲ, ವಯಸ್ಸಿನ ಅಂತರವಿಲ್ಲ, ಮಹಿಳೆಯರು, ಪುರುಷರು, ಯುವಕರು, ಯುವತಿಯರು, ನಾಲ್ಕು ವರ್ಷದ ಮಕ್ಕಳಿಂದ ಮುದಿ ವಯಸ್ಸಿನವರು ಯಾವುದೇ ರೀತಿಯ ಮುಜುಗರವಿಲ್ಲದೆ ಬೆತ್ತಲೆ ಸೇವೆಯನ್ನು ಸಲ್ಲಿಸುತ್ತಾರೆ.

ಬೆತ್ತಲೆ ಸೇವೆ ಸಲ್ಲಿಸುವವರು ಹೆಚ್ಚಾಗಿ ದಲಿತರು ಮತ್ತು ಹಿಂದುಳಿದ ಜಾತಿಯವರು. ಜಾತ್ರೆಯ ಹಿಂದಿನ ದಿವಸ ಪೂರ್ಣ ಉಪವಾಸವಿದ್ದು ಆ ದಿನ ರಾತ್ರಿಯೇ ಚಂದ್ರಗುತ್ತಿಗೆ ಬಂದು ತಂಗುತ್ತಾರೆ. ದೈಹಿಕ ಸುಖದಿಂದ ದೂರವಿರುತ್ತಾರೆ. ಮುಟ್ಟು, ಮೈಲಿಗೆಯಾದ ಮಹಿಳೆಯರು ದೇವಿಗೆ ಪೂಜೆ ಸಲ್ಲಿಸುವಂತಿಲ್ಲ.

ಮರುದಿವಸ ಬೆಳಿಗ್ಗೆ ಬೆತ್ತಲೆ ಸೇವೆ ಸಲ್ಲಿಸುವವರು ಚಂದ್ರಗುತ್ತಿಯಿಂದ ಎರಡು ಕಿಲೋಮೀಟರು ದೂರದಲ್ಲಿರುವ ವರದಾ, ಕತವಾಯಿ, ಚೆನ್ನಪಟ್ಟ ನದಿಗಳಲ್ಲಿ ಸ್ನಾನ ಮಾಡಿ ಮರಳು ಗಂಗೆಗೆ ಕಳಸ ಕನ್ನಡಿ ಪೂಜೆ ಮಾಡಿಕೊಂಡು, ಮೈತುಂಬಾ ಗಂಧ ಮತ್ತು ಅರಿಶಿನವನ್ನು ಲೇಪಿಸಿಕೊಂಡು ಕೊರಳಲ್ಲಿ ಮತ್ತು ಸೊಂಟದ ಸುತ್ತ ಸೇವಂತಿಗೆ ಅಥವಾ

ಕಣಗಲಿ ಹೂವಿನ ಹಾರಗಳನ್ನು ಧರಿಸಿ ಹಣೆಗೆ ಅರಿಶಿನ ಕುಂಕುಮ ಹಚ್ಚಿಕೊಂಡು ಬಾಯಲ್ಲಿ ಬೇವಿನಕಡ್ಡಿ ಇಟ್ಟುಕೊಂಡು ಎರಡೂ ಕೈಗಳ ಬೊಗಸೆಯಲ್ಲಿ ಉತ್ತತ್ತಿ, ಕಲ್ಲುಸಕ್ಕರೆ, ಎಲೆ ಅಡಿಕೆ, ಅಕ್ಕಿ, ದೇವಿಯ ಉಡಿಲಕ್ಕಿ ಸಾಮಾನುಗಳನ್ನು ಹಿಡಿದುಕೊಂಡು ಸಂಪೂರ್ಣ ಬೆತ್ತಲಾಗಿ ಬೆಟ್ಟದ ಮೇಲಿರುವ ಮಾತಂಗಿ ಗುಡಿಯವರೆಗೆ ಓಡಿ ಹೋಗುತ್ತಾರೆ.

ಬೆತ್ತಲಾದ ಭಕ್ತರು ಓಡುವಾಗ ಕೆಲವರು ಅಳುತ್ತಿರುತ್ತಾರೆ ಮತ್ತೆ ಕೆಲವರು ವಿಚಿತ್ರ ರೀತಿಯಲ್ಲಿ ನಗುತ್ತಿರುತ್ತಾರೆ. ಮೈದುಂಬಿ ತಲೆಯನ್ನು ತೂರಾಡಿಸುತ್ತಾ ಜನರ ಪರಿವೆಯೇ ಇಲ್ಲದಂತೆ ಓಡಾಡುತ್ತಿರುತ್ತಾರೆ.

ಬೆತ್ತಲೆ ಸೇವೆ ಸಲ್ಲಿಸಲು ಕುಟುಂಬದ ಒಟ್ಟು ಸದಸ್ಯರು ಮಾತ್ರ ಬರುವುದಿಲ್ಲ. ಕುಟುಂಬದ ಎರಡು ಮೂರು ಜನ ಅಥವಾ ಇಡೀ ಕುಟುಂಬವೇ ಬಂದು ಬೆತ್ತಲೆ ಸೇವೆ ಸಲ್ಲಿಸುತ್ತಾರೆ. ಎಷ್ಟು ವರ್ಷ ಬೆತ್ತಲೆ ಸೇವೆ ಸಲ್ಲಿಸುತ್ತೇವೆ ಎಂದು ಹರಕೆ ಮಾಡಿ ಕೊಂಡಿರುತ್ತಾರೋ ಅಷ್ಟು ವರ್ಷ ಬಂದು ಬೆತ್ತಲೆ ಸೇವೆ ಸಲ್ಲಿಸುತ್ತಾರೆ. ಬೆತ್ತಲೆ ಬರುವವರನ್ನು ನೋಡಿ ಇತರೆಯವರು ನಗುವಹಾಗಿಲ್ಲ. ಒಮ್ಮೆ ನಕ್ಕರೆ ಬಾಯಿ ಬೋರೆಯಾಗುತ್ತದೆ ಎಂಬ ನಂಬಿಕೆಯಿದೆ.

೧೯೮೯ರ ಮಾರ್ಚ್ ತಿಂಗಳಲ್ಲಿ ನಡೆದ ಜಾತ್ರೆಯಲ್ಲಿ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಇದರಲ್ಲಿ ಬೆತ್ತಲೆ ಸೇವೆ ಸಲ್ಲಿಸಿದವರ ಸಂಖ್ಯೆ ಇಪ್ಪತ್ತರಿಂದ ಇಪ್ಪತ್ತೈದು ಸಾವಿರ ಜನ ಆಗಿರಬಹುದೆಂದು ಅಂದಾಜು ಮಾಡಲಾಗಿದೆ.

ಜಮದಗ್ನಿ ರೇಣುಕೆಯ ಶೀಲವನ್ನು ಶಂಕಿಸಿ, ಮಗ ಪರಶುರಾಮನಿಗೆ ರೇಣುಕೆಯ ಶಿರವನ್ನು ಕತ್ತರಿಸುವಂತೆ ಆಜ್ಞಾಪಿಸುತ್ತಾನೆ. ಪರಶುರಾಮ ತಾಯಿಯನ್ನು ವರದಾ ನದಿಯಿಂದ ಬೆನ್ನಟ್ಟಿಕೊಂಡು ಬಂದನಂತೆ. ಆಗ ರೇಣುಕೆ ಜೀವಭಯದಿಂದ ದಿಕ್ಕೆಟ್ಟು ಓಡುವಾಗ ಮೈಮೇಲಿನ ಬಟ್ಟೆ ಮುಳ್ಳುಕಂಟಿಗಳಿಗೆ ಸಿಕ್ಕಿ ದಿಗಂಬರಿಯಾಗುತ್ತಾಳೆ. ಹತ್ತಿರದ ಗುಡ್ಡದ ಗುಹೆಯಲ್ಲಿರುವ ಶಿವಲಿಂಗವನ್ನು ತಬ್ಬಿಕೊಂಡು ರಕ್ಷಣೆ ಪಡೆಯುತ್ತಾಳೆ. ಅಂದಿನಿಂದ ಈಕೆಯ ಭಕ್ತರು ಈ ಬೆತ್ತಲೆ ಸೇವೆಯ ಮೂಲಕ ದೇವಿಯ ಆಶೀರ್ವಾದ ಪಡೆಯುತ್ತಾರೆ ಎಂದು ಪ್ರತೀತಿ.

ಈಗ ಗುಡಿಯಿರುವ ಸ್ಥಳದಲ್ಲಿ ರೇಣುಕೆಯ ಕೊಲೆಯಾಯಿತು, ಪಕ್ಕದಲ್ಲಿ ಮಾತಂಗಿ ಎಂಬ ಹೆಂಗಸನ್ನು ಕಾವಲಿಟ್ಟ ಮಾತಂಗಿಯ ವಿಗ್ರಹ ರೇಣುಕೆಯ ಗುಡಿಯ ಪಕ್ಕದಲ್ಲಿ ಬೃಹದಾಕಾರದ ಕಲ್ಲು ಬಂಡೆಯ ಕೆಳಗೆಯಿದೆ. ಈ ಜಾಗವೇ ಬೆತ್ತಲೆ ಸೇವೆಯ ಮಾಡುವವರ ಕೊನೆಯ ಸ್ಥಳ. ಇಲ್ಲಿ ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ, ರೇಣುಕೆಯ ದರ್ಶನ ಪಡೆದಾಗ ಬೆತ್ತಲೆ ಹೆಂಗಸರು, ಗಂಡಸರು, ಸಹಜ ಸ್ಥಿತಿಗೆ ಬರುತ್ತಾರೆ.

ಜೈನಪುರಾಣಗಳ ಪ್ರಕಾರ ಗುತ್ತಮ್ಮ ಹಿಂದೂ ದೇವತೆಯಲ್ಲ. ಆಕೆ ಜ್ವಾಲಾಮಾಲಿನಿಯೆಂಬ ಜೈನ ದೇವತೆ. ಜೈನ ದಿಗಂಬರ ಪಂಥವನ್ನು ಧಾರ್ಮಿಕ ಕಾರಣಗಳಿಗಾಗಿ ಸಮಾಜ ಒಪ್ಪಿದಂತೆ ಇಲ್ಲಿ ಬೆತ್ತಲೆ ಸೇವೆ ನಡೆಯುವದೆಂದು ಇನ್ನೊಂದು ನಂಬಿಕೆ.

ಈ ಬೆತ್ತಲೆ ಸೇವೆ ಇಂದು ನಿನ್ನೆಯದಲ್ಲ ಶತ ಶತಮಾನಗಳಿಂದ ನಡೆದುಕೊಂಡು ಬಂದ ಪದ್ಧತಿ. ೪೦೦ ವರ್ಷಗಳ ಹಿಂದೆ ದಾಸಶ್ರೇಷ್ಠರಾದ ಕನಕದಾಸರು ತಮ್ಮ 'ಕಣಿಯ ಹೇಳಲು ಬಂದೆ' ಕೀರ್ತನೆಯಲ್ಲಿ,

*ಸುತ್ತ್ರಣವರ ಮಾತು ಕೇಳಿ ಗುತ್ತಿ ಎಲ್ಲಮ್ಮ ನೊಲಿದು!*
*ಬೆತ್ತಲೆ ದೇವರ ಮುಂದೆ ಬಲಿಯ ನೋಡಿರೋ !*
*ಮತ್ತೆ ಮುಕ್ತಿಕಾಂಬೆವೆಂಬ ಆಸಕ್ತಿ ಬೇಡಿರೋ!!*

ಎಂದು ಚಂದ್ರಗುತ್ತಿಯ ಬೆತ್ತಲೆ ಸೇವೆಯನ್ನು ಗೇಲಿ ಮಾಡಿದ್ದಾರೆ.

ಬೆತ್ತಲೆ ಸೇವೆಯನ್ನು ೧೯೮೬ ಮಾರ್ಚ್ ೧೯, ೨೦, ೨೧ರಂದು ನಿಲ್ಲಿಸುವ ಪ್ರಯತ್ನವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಇತರೆ ಸಾಮಾಜಿಕ ಸೇವಾ ಸಂಸ್ಥೆಗಳ ಕಾರ್ಯಕರ್ತರು ರಕ್ಷಣಾ ಇಲಾಖೆಯವರ ನೆರವಿನಿಂದ ಮಾಡಿದರು. ಆದರೆ ಇವರೆಲ್ಲರೂ ಗುತ್ತಮ್ಮನ ಭಕ್ತಾದಿಗಳಾದ ಜೋಗಪ್ಪ-ಜೋಗಮ್ಮಗಳ ಆಕ್ರೋಶಕ್ಕೆ ತುತ್ತಾಗಿ ಬೆತ್ತಲಾದ ಘಟನೆ ಜರುಗಿತು. ಈ ಘಟನೆಯ ನಂತರ ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆಯನ್ನು ಕರ್ನಾಟಕ ಸರ್ಕಾರದಿಂದ ನಿಷೇಧಿಸಲ್ಪಟ್ಟಿರುತ್ತದೆ.

### ಮುತ್ತು ಕಟ್ಟುವುದು

ಚಂದ್ರಗುತ್ತಿ ಗುತ್ತಮ್ಮದೇವಿಗೆ ನಡೆದುಕೊಳ್ಳುವ ಕುಟುಂಬದ ಹೆಣ್ಣು ಮಕ್ಕಳು ಮದುವೆಯಾಗಿ ಗಂಡನ ಮನೆಗೆ ಬಂದ ನಂತರ ಮುತ್ತು ಕಟ್ಟಿಸಿಕೊಳ್ಳುವ ಸಂಪ್ರದಾಯವಿದೆ. ಮಂಗಳವಾರ, ಶುಕ್ರವಾರ ಹಾಗೂ ಹುಣ್ಣಿಮೆ ದಿವಸ ಅಥವಾ ರಥೋತ್ಸವದ ದಿವಸ ಮುತ್ತು ಕಟ್ಟುವ ಶಾಸ್ತ್ರವನ್ನು ಮಾಡುತ್ತಾರೆ. ಮುತ್ತು ಕಟ್ಟಿಸಿಕೊಳ್ಳುವ ಹೆಣ್ಣು ಮಗಳಿಗೆ ತವರು ಮನೆಯವರು ಹೊಸ ಬಟ್ಟೆ ಕೊಡಬೇಕಾಗುತ್ತದೆ. ತವರು ಮನೆಯವರು ತುಂಬಾ ಬಡವರಿದ್ದರೆ ಗಂಡನ ಮನೆಯವರೇ ಹೊಸ ಬಟ್ಟೆಯನ್ನು ತರುತ್ತಾರೆ.

ಮುತ್ತು ಕಟ್ಟಿಸಿಕೊಳ್ಳುವ ದಿವಸ ಕುಟುಂಬದವರೆಲ್ಲ ಉಪವಾಸವಿದ್ದು, ಮನೆಯನ್ನೆಲ್ಲಾ ಸಾರಿಸಿ ಸ್ವಚ್ಛಗೊಳಿಸುತ್ತಾರೆ. ಎಲೆ, ಅಡಿಕೆ, ಅಕ್ಕಿ, ಒಣ ಕೊಬ್ರಿ, ಉತ್ತತ್ತಿ, ಹಸಿರು ಬಳೆ, ಕಟ್‌ಲಾಡಿ, ಮಡ್ಡಾಡಿ, ಬಾಳೇಹಣ್ಣು, ಪಲಕದ ಬಟ್ಟೆ, ತೆಂಗಿನಕಾಯಿ ಮುಂತಾದ ಉಡಿ ತುಂಬುವ ಸಾಮಾನುಗಳನ್ನು ಮತ್ತು ಕರಿ ಕಂಬಳಿ, ಐದು ತೆಂಗಿನಕಾಯಿ, ನಾಲ್ಕು ಹಿತ್ತಾಳೆ

ತಂಬಿಗೆ, ಅರಿಶಿನ, ಕುಂಕುಮ, ಸುರಗಿದಾರ, ಕಳಸದ ಬಟ್ಟಲು, ಹೊಸ ಬಟ್ಟೆಗಳನ್ನು ತೆಗೆದುಕೊಂಡು, ರೇಣುಕಾಂಬ ದೇವಸ್ಥಾನಕ್ಕೆ ಹೋಗುತ್ತಾರೆ. ಗಂಗಾಮತ (ಬೋವಿ) ದವರೊಬ್ಬರು ದೇವಸ್ಥಾನದಲ್ಲಿ ಮುತ್ತು ಕಟ್ಟುವ ಶಾಸ್ತ್ರವನ್ನು ಮಾಡುತ್ತಾರೆ. ಕರಿಯ ಕಂಬಳಿಯನ್ನು ಗಳಿಗೆ ಮಾಡಿ ಹಾಸಿ ನಾಲ್ಕು ಮೂಲೆಗೆ ಅಕ್ಕಿಯಿಂದ ಚೌಕ ಬರೆದು ಕಳಸದ ಗಿಂಡಿಯಿಟ್ಟು ಸುರಗಿ ಸುತ್ತುತ್ತಾರೆ. ಮುತ್ತು ಕಟ್ಟಿಸಿಕೊಳ್ಳುವ ಹೆಣ್ಣು ಮಗಳನ್ನು ಚೌಕದ ಮಧ್ಯೆ ಕೂರಿಸುತ್ತಾರೆ. ಗಂಡನನ್ನು ಚೌಕದ ಹೊರಗೆ ಕೂರಿಸುತ್ತಾರೆ. ಬಿಳಿ ಹವಳದ ಮುತ್ತು ಒಂದನ್ನು ದಾರಕ್ಕೆ ಪೋಣಿಸಿ ಮುತ್ತು ಕಟ್ಟುವ ವ್ಯಕ್ತಿ ಹೆಣ್ಣು ಮಗಳಿಗೆ ಈ ರೀತಿ ಉಪದೇಶ ಮಾಡುತ್ತಾನೆ.

ಕೆಟ್ಟದನ್ನು ನುಡಿಯಬಾರದು
ಬೇರೆಯವರಿಂದ ಕೆಟ್ಟ ಮಾತನ್ನು ಹೇಳಿಸಿಕೊಳ್ಳಬಾರದು
ಮರಣ ಸಂಭವಿಸಿದ ಮತ್ತು ಹೆರಿಗೆಯಾದ ಸೂತಕವಿರುವ ಮನೆಗಳಿಗೆ ಹೋಗಬಾರದು
ಮಂಗಳವಾರ, ಶುಕ್ರವಾರ ಬೇರೆಯವರ ಮನೆಗಳಲ್ಲಿ ಊಟ ಮಾಡಬಾರದು
ತಾವು ವಾಸಿಸುವ ನೆರೆ ಹೊರೆಯವರ ಮನೆಗಳಲ್ಲಿ ಮರಣ ಸಂಭವಿಸಿದರೆ ಶವವನ್ನು ತೆಗೆಯುವವರೆಗೆ ಊಟ ಮಾಡಬಾರದು.
ಪತಿ ಪುತ್ರರು ಕುಟುಂಬದ ಇತರೆಯವರೊಂದಿಗೆ ಒಳ್ಳೆಯ ರೀತಿಯಿಂದ ನಡೆದುಕೊಳ್ಳಬೇಕು
ಉತ್ತಮ ಗೃಹಿಣಿಯಾಗಿ ದೇವಿಯ ಸೇವೆ ಮಾಡಬೇಕು

ಹೀಗೆ ಉಪದೇಶ ಮಾಡಿ ಕೊರಳಿಗೆ ಮುತ್ತನ್ನು ಕಟ್ಟುತ್ತಾರೆ. ನಂತರ ದೇವಿಗೆ ಉಡಿ ತುಂಬಿಸಿ ಪೂಜೆ ಮಾಡಿಸಿ ತಮ್ಮ ಮನೆಗೆ ಬರುತ್ತಾರೆ. ಮನೆಯಲ್ಲಿ ಪಡ್ಲಿಗೆಯವರನ್ನು ಕರೆಯಿಸಿ, ಪಡ್ಲಿಗೆಗೆ ಉಡಿ ತುಂಬಿಸಿ ಅನ್ನ, ಸಾರು, ಪಾಯಸ, ಹೋಳಿಗೆಯ ಎಡೆಮಾಡಿ ಪಡ್ಲಿಗೆಯಲ್ಲಿರುವ ಪರಶುರಾಮ ಜ್ಯೋತಿಗೆ ಹಣ್ಣು, ಕಾಯಿ ಮಾಡಿ ಪೂಜೆ ಸಲ್ಲಿಸಿ ಉಧೋ ಹಾಕುತ್ತಾರೆ.

*ಗುತ್ತೆಮ್ಮ ನಿನ್ನಾಲ್ಕು ಉಧೋ ಉಧೋ*
*ಪರಶುರಾಮ ನಿನ್ನಾಲ್ಕು ಉಧೋ ಉಧೋ*
*ಜೇನ್ನಲ್ಲವ್ವಾ ನಿನ್ನಾಲ್ಕು ಉಧೋ ಉಧೋ*
*ಶುಕ್ರವಾರದ ಸುಗಾಣ ನಿನ್ನಾಲ್ಕು ಉಧೋ ಉಧೋ*
*ಶನಿವಾರದ ಸಂಪನ್ನೆ ನಿನ್ನಾಲ್ಕು ಉಧೋ ಉಧೋ*

*ಆದಿತ್ಯವಾರದ ಆದಿಶಕ್ತಿ ನಿನ್ನಾಲ್ಕು ಉಧೋ ಉಧೋ*
*ಸೋಮವಾರದ ಸುಕುಮಾರಿ ನಿನ್ನಾಲ್ಕು ಉಧೋ ಉಧೋ*
*ಮಂಗಳವಾರದ ಮಾಯಕಾರತಿ ನಿನ್ನಾಲ್ಕು ಉಧೋ ಉಧೋ*
*ಬೃಹಸ್ಪತಿ ವಾರದ ಬೇಟೆಗಾರತಿ ನಿನ್ನಾಲ್ಕು ಉಧೋ ಉಧೋ*
*ಗುತ್ತಿಕನ್ನವ್ವಾ ನಿನ್ನಾಲ್ಕು ಉಧೋ ಉಧೋ*
*ಶೂಲದ ಬೀರಪ್ಪ ನಿನ್ನಾಲ್ಕು ಉಧೋ ಉಧೋ*
*ಬಾಗ್ಲ ಭೈರಪ್ಪ ನಿನ್ನಾಲ್ಕು ಉಧೋ ಉಧೋ*
*ಬಂಡಿ ಬಂಢಾರದವ್ವಾ ನಿನ್ನಾಲ್ಕು ಉಧೋ ಉಧೋ*
*ಜೋಗಿ ಜರಿಯವ್ವಾ ನಿನ್ನಾಲ್ಕು ಉಧೋ ಉಧೋ*

ದೇವಿಗೆ ಉಧೋ ಹಾಕಿದ ನಂತರ ಪಡ್ಲಿಗೆಯವರಿಗೆ ಕಾಣಿಕೆ ನೀಡಿ, ಕುಟುಂಬದವರೆಲ್ಲ ಸೇರಿ ಭೋಜನ ಮಾಡುತ್ತಾರೆ. ಮುತ್ತಿ ಕಟ್ಟಿಸಿಕೊಂಡ ನಂತರ ಐದು ಶುಕ್ರವಾರ ಮತ್ತು ಮಂಗಳವಾರ ಮಾಂಸಾಹಾರ ಮಾಡಬಾರದು. ನಂತರ ಒಂದು ಮುತ್ತಿನ ಜೊತೆಗೆ ಐದು ಅಥವಾ ಹತ್ತು ಮುತ್ತುಗಳನ್ನು ಸೇರಿಸಿಕೊಳ್ಳಬಹುದು. ಒಂದು ವರ್ಷದ ನಂತರ ಕೊರಳು ತುಂಬುವವರೆಗೆ ಮುತ್ತು ಸುರಿದು ಕೊರಳಿಗೆ ಕಟ್ಟಿಕೊಳ್ಳಬಹುದು. ಮದುವೆಯಾದ ಮುತ್ತೈದೆ ಹೆಣ್ಣು ಮಕ್ಕಳು ಮಾತ್ರ ಮುತ್ತು ಕಟ್ಟಿಸಿಕೊಳ್ಳಬಹುದು. ಮದುವೆಯಾಗದ ಹೆಣ್ಣು ಮಕ್ಕಳಿಗೆ ಮುತ್ತು ಕಟ್ಟುವುದಿಲ್ಲ. ಹಿಂದಿನಿಂದಲೂ ತಮ್ಮ ಮನೆತನದಲ್ಲಿ ಮುತ್ತು ಕಟ್ಟಿಸಿಕೊಳ್ಳುವ ಸಂಪ್ರದಾಯವಿದ್ದವರು ಮಾತ್ರ ಮುತ್ತು ಕಟ್ಟಿಸಿಕೊಳ್ಳುತ್ತಾರೆ. ಕುಟುಂಬದ ಹಿರಿಯ ಸೊಸೆಗೆ ಮಾತ್ರ ಮುತ್ತು ಕಟ್ಟಲಾಗುತ್ತದೆ. ಹಿರಿಯ ಸೊಸೆಯಿಲ್ಲದಿದ್ದಲ್ಲಿ ಕಿರಿಯ ಸೊಸೆಗೂ ಕಟ್ಟಬಹುದು. ದೇವಿಯ ಭಕ್ತರೆಲ್ಲರೂ ಮುತ್ತು ಕಟ್ಟಿಸಿಕೊಳ್ಳಬೇಕೆಂಬ ನಿಯಮವಿಲ್ಲ. ಜೋಗಪ್ಪ, ಜೋಗಮ್ಮಳಿಗೆ ದೀಕ್ಷೆ ಕೊಡುವ ಪದ್ಧತಿ ಇಲ್ಲಿ ಇರುವುದಿಲ್ಲ.

**ಪಡ್ಲಿಗೆ ಪೂಜೆ**

ಪಡ್ಲಿಗೆಯನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಹಡ್ಲಗಿ ಎಂದೂ ಕರೆಯುವರು. ಇದನ್ನು ಗುತ್ಯಮ್ಮಳ ಭಕ್ತರು ಮನೆಯಲ್ಲಿಟ್ಟು ಪೂಜಿಸುವರು. ಗೋಲಾಕಾರದ ಬಿದಿರಿನ ಬುಟ್ಟಿಗಳು, ಪಡ್ಲಿಗೆಯಲ್ಲಿ ಎರಡು ಬಿದಿರಿನ ಬುಟ್ಟಿಗಳಿರುತ್ತವೆ. ಒಂದು ಬುಟ್ಟಿ ಸ್ವಲ್ಪ ದೊಡ್ಡದಾಗಿರುತ್ತದೆ. ಇದರ ವ್ಯಾಸ ಆರು ಇಂಚು. ಮತ್ತೊಂದು ಚಿಕ್ಕದು ಇದು ದೊಡ್ಡ ಬುಟ್ಟಿಯಲ್ಲಿರುತ್ತದೆ. ಇದರ ಸುತ್ತಳತೆ ಒಂದೂವರೆ ಇಂಚಿನಿಂದ ಎರಡು ಇಂಚು ಇರುತ್ತದೆ. ಪಡ್ಲಿಗೆಯೇ ದೇವಿಯ ಮೊದಲ ಗುರುತಿನ ವಸ್ತು. ನಂತರ ದೇವಿಯ ಜಗ ಮತ್ತು ಕೊಡ ಬಂದಿರಬಹುದು. ದೇವಿಗೆ ಉಡಿ ತುಂಬಿಸಿ ಅಭಿಷೇಕ ಮಾಡಿಸಿ ಪಡ್ಲಿಗೆಯನ್ನು ಮಾಡುತ್ತಾರೆ.

ಪಡ್ಲಿಗೆಯ ದೊಡ್ಡ ಬುಟ್ಟಿ ರೇಣುಕೆಯ ಸಂಕೇತ, ಚಿಕ್ಕ ಬುಟ್ಟಿ ಪರಶುರಾಮನ ಸಂಕೇತವೆಂದು ಭಾವಿಸುತ್ತಾರೆ.

ಪಡ್ಲಿಗೆಯಲ್ಲಿ ಅಕ್ಕಿ, ಎಲೆ, ಅಡಿಕೆಗಳನ್ನಿಟ್ಟು ಪೂಜಿಸುತ್ತಾರೆ. ಇದರಲ್ಲಿ ಒಂದು ದೀಪವಿರುತ್ತದೆ, ಇದನ್ನು ಪರಶುರಾಮನ ಜ್ಯೋತಿ ಎಂದು ಹೇಳುತ್ತಾರೆ. ಕುಟುಂಬದಲ್ಲಿ ಮರಣ, ಹೆರಿಗೆಯಾಗಿ ಸೂತಕ ಬಂದಾಗ, ಪಡ್ಲಿಗೆಗೆ ಕೆಮ್ಮಣ್ಣು ಹಚ್ಚಿ, ಪಂಚಗವ್ಯ ಹಾಕಿಕೊಂಡು ಶುದ್ಧಗೊಳಿಸುತ್ತಾರೆ. ಶಿಥಿಲವಾದಾಗ ಮಾತ್ರ ಬದಲಾಯಿಸುತ್ತಾರೆ.

ವಾರಕ್ಕೊಮ್ಮೆ ಪಡ್ಲಿಗೆಯಲ್ಲಿರುವ ಅಕ್ಕಿ, ಎಲೆ-ಅಡಿಕೆ ಸಾಮಾನುಗಳನ್ನು ಬದಲಾಯಿಸುತ್ತಾರೆ. ಗುತ್ಯಮ್ಮದೇವಿಯು ಭಕ್ತರಿಗೆ ತಮ್ಮ ಕುಟುಂಬದಲ್ಲಿ ಕಷ್ಟಗಳು ಬಂದಾಗ ಜಾನುವಾರು ಕಾಯಿಲೆಗಳು ಬಂದು ಸಾವಿಗೆ ತುತ್ತಾದಾಗ ದೇವಿಗೆ ಮನೆಯಲ್ಲಿ ಪಡ್ಲಿಗೆಯನ್ನಿಟ್ಟು ಪೂಜಿಸುತ್ತೇವೆ ಎಂದು ಹರಕೆ ಹೊತ್ತವರು ಮಾತ್ರ ಪಡ್ಲಿಗೆಯನ್ನಿಟ್ಟು ಪೂಜಿಸುವರು. ಕೆಲವು ಕುಟುಂಬಗಳಲ್ಲಿ ಹಿಂದಿನಿಂದಲೂ ಪಡ್ಲಿಗೆಯ ಪೂಜೆ ಮಾಡುವ ಪದ್ಧತಿ ಇರುತ್ತದೆ. ಅಂತವರು ಪೂಜಿಸುತ್ತಾರೆ. ಇವರು ತಮ್ಮ ಹಳ್ಳಿಯಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಕೆಲವು ಮನೆಗಳಿಗೆ ಹೋಗಿ ದೇವಿಗೆ ಉಧೋ ಹಾಕಿ ಬಿಕ್ಷೆ ಬೇಡುವ ಸಂಪ್ರದಾಯವನ್ನು ಉಳಿಸಿಕೊಂಡಿದ್ದಾರೆ.

### ದರ್ಪಣ ಮತ್ತು ಚಾಮರ ಸೇವಕಿಯರು

ಚಂದ್ರಗುತ್ತಿಯಲ್ಲಿ ದೇವಿಗೆ ದರ್ಪಣ ಮತ್ತು ಚಾಮರ ಸೇವೆಯನ್ನು ಮಾಡುತ್ತಿರುವ ದೇವದಾಸಿಯರ ಒಂದು ಕುಟುಂಬವು ಮಾತ್ರ ಇದೆ. ಶ್ರೀಮತಿಯರಾದ ಅಂಬಮ್ಮ, ರತ್ನಮ್ಮ ಮತ್ತು ಸರೋಜಮ್ಮ. ಇವರು ಒಂದೇ ಕುಂಟುಂಬದವರು. ಶ್ರೀಮತಿ ರತ್ನಮ್ಮ ಮತ್ತು ಸರೋಜಮ್ಮನವರು ಶ್ರೀಮತಿ ಅಂಬಮ್ಮನವರ ತಮ್ಮನ ಮಕ್ಕಳು. ಶ್ರೀಮತಿ ರತ್ನಮ್ಮನವರು ಕೆಲವು ವರ್ಷಗಳ ಹಿಂದೆ ಕ್ಯಾನ್ಸರ್‌ನಿಂದ ಸ್ವರ್ಗಸ್ಥರಾಗಿದ್ದಾರೆ. ಅಂಬಮ್ಮನವರಿಗೆ ಈಗ ತೊಂಬತ್ತು ವರ್ಷ, ಸರೋಜಮ್ಮನವರಿಗೂ ಐವತ್ತು ವರ್ಷಗಳಾಗಿವೆ.

ಇವರು ಕಳೆದ ೪೦-೫೦ ವರ್ಷಗಳಿಂದ ದೇವಿಗೆ ದರ್ಪಣ ಮತ್ತು ಚಾಮರ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ರಥೋತ್ಸವ, ದಸರಾ ಉತ್ಸವ, ಪ್ರತಿ ಹುಣ್ಣಿಮೆ, ಶುಕ್ರವಾರ ಮತ್ತು ಮಂಗಳವಾರ ದೇವಿಯ ಪೂಜೆಗೆ ಪುಷ್ಪಗಳನ್ನು ಒದಗಿಸುವುದು, ದೇವಿಗೆ ಕಳಶ ಕನ್ನಡಿ (ದರ್ಪಣ) ಹಿಡಿಯುವುದು, ಅಮ್ಮನವರ ಪೂಜೆಗೆ (ಸೇವೆಗೆ) ಉಪಯೋಗಿಸುವ ನವರತ್ನ ಖಚಿತವಾದ ಬಂಗಾರದ ಕಿರೀಟಕ್ಕೆ ಕುಂಕುಮವನ್ನಿಡುವುದು. ದೇವಿಗೆ ಮಂಗಳಾರತಿ ನಡೆಯುವಾಗ ದೇವಿಯ ಸನ್ನಿಧಿಯಲ್ಲಿರುವುದು ಇವರ ಕೆಲಸವಾಗಿತ್ತು.

ಇವರುಗಳು ಇದುವರೆಗೂ ಅತ್ಯಂತ ಭಕ್ತಿ ಮತ್ತು ಶ್ರದ್ಧೆಯಿಂದ ದೇವಿಯ ಸೇವೆ ಮಾಡುತ್ತಾ ಬಂದಿದ್ದಾರೆ. ಈಗ ಇವರು ವಯೋವೃದ್ಧರಾದ್ದರಿಂದ ಸೇವೆಯಿಂದ ನಿವೃತ್ತರಾಗಿದ್ದಾರೆ. ಇವರ ಕುಟುಂಬದಲ್ಲಿರುವ ಮೂರು ಎಕ್ರೆ ಜಮೀನು ಭೂ ಸುಧಾರಣಾ ಕಾಯದೆ ಪ್ರಕಾರ ರೈತರಿಗೆ ಸೇರಿದೆ. ದೇವಾಲಯದಿಂದ ಪ್ರತಿ ತಿಂಗಳು ೧೫೦ ರೂಪಾಯಿಗಳನ್ನು ಸಂಭಾವನೆಯಾಗಿ ಕೊಡುತ್ತಿದ್ದುದನ್ನು ಈಗ ನಿಲ್ಲಿಸಿದ್ದಾರೆ. ಬೇರೆ ಯಾವ ಆದಾಯವು ಇಲ್ಲದೆ ಇರುವುದರಿಂದ ಕಡುಬಡತನದಿಂದ ಜೀವನ ಸಾಗಿಸುತ್ತಿದ್ದಾರೆ.

ಗಂಡು ಸಂತಾನವಿಲ್ಲದವರು ತಮ್ಮ ವಂಶ ಬೆಳೆಯಲು ಬೇಕಾದ ಒಂದು ಗಂಡು ಮಗುವಿಗಾಗಿ ಹೆಣ್ಣು ಮಕ್ಕಳನ್ನು ಬಸವಿ ಬಿಡುವ ಪದ್ಧತಿ ಚಂದ್ರಗುತ್ತಿಯಲ್ಲಿ ಹಿಂದೆ ಇತ್ತು ಎಂದು ಕಂಡುಬರುತ್ತದೆ. ಮುಖ್ಯವಾಗಿ ಹರಿಜನ, ಗಂಗಾಮತ (ಬೋವಿ) ಮತ್ತು ಬೇಡ ಜನಾಂಗಗಳಲ್ಲಿ ಈ ಪದ್ಧತಿ ಕಂಡುಬರುತ್ತದೆ. ಈ ಪದ್ಧತಿಯಂತೆ ಹುಡುಗಿಯರನ್ನು ದೇವಿಯ ದೇವಾಲಯಕ್ಕೆ ಕರೆದುಕೊಂಡು ಹೋಗಿ ಆಕೆಯನ್ನು ದೇವರಿಗೆ ಮದುವೆ ಮಾಡಿಸಲಾಗುವುದು. ದೇವರ ಪರವಾಗಿ ಹಿರಿಯ ದೇವದಾಸಿಯರಿಂದ ಕಾಲುಂಗುರಗಳನ್ನು ತೊಡಿಸಿ ತಾಳಿಯನ್ನು ಕಟ್ಟಿಸಲಾಗುತ್ತಿತ್ತು.

ಈಕೆ ದೇವರನ್ನೆ ಮದುವೆಯಾದವಳಾದ್ದರಿಂದ ಸಮಾಜದಲ್ಲಿ ಅವಳನ್ನು ಕೀಳೆಂದು ಭಾವಿಸುವುದಿಲ್ಲ, ಇತರೆ ಸ್ತ್ರೀಯರು ತಮ್ಮ ಮುತ್ತೈದೆತನದ ಸಂಕೇತವಾದ ತಾಳಿಗಳನ್ನು ಅವರಿಂದ ಪೋಣಿಸಿಕೊಳ್ಳುವರು, ಬಸವಿಯಾದವರು ವಿಧವೆಯರಾಗುವುದಿಲ್ಲ, ಬಸವಿ ಬಿಟ್ಟವರ ಮುತ್ತೈದೆತನ, ಶಾಶ್ವತವಾಗಿರುವ ಈ ಪದ್ಧತಿಯಿಂದ ಗುತ್ಯಮ್ಮದೇವಿಗೆ ಗುತ್ತಿ ಕನ್ನಮ್ಮ ಎಂಬ ಹೆಸರು ಬಂದಿರಬಹುದೆಂದು ಊಹಿಸಬಹುದಾಗಿದೆ.

### ಚೌಡಿಕೆ ವಾದ್ಯ

ಚೌಡಿಕೆ ಕೊಳಗದಾಕಾರದ ವಾದ್ಯ. ಇದು ತಂತಿ ವಾದ್ಯವೇನಲ್ಲ. ಆದರೆ ಇದರ ರಚನಾ ತಂತ್ರ ತಂತಿ ವಾದ್ಯದಂತೆಯೇ ಇರುವುದರಿಂದ ಆ ವರ್ಗಕ್ಕೆ ಸೇರಿಸಬಹುದಾಗಿದೆ. ಇದು ಶಕ್ತಿದೇವತೆಯ ಸಂಪ್ರದಾಯದ ವಾದ್ಯವಾದುದರಿಂದ ಚೌಡಿಕೆ ಎಂದು ಹೆಸರು ಬಂದಿದೆ. ಚೌಡಿಕೆ ವಾದ್ಯ ಎಲ್ಲಮ್ಮ ಅಥವಾ ಗುತ್ಯಮ್ಮಳ ಭಕ್ತರ ಮುಖ್ಯ ವಾದ್ಯ. ಇದನ್ನು ಮರದಿಂದ ಅಥವಾ ಕಂಚಿನಿಂದ ಮಾಡಿರುತ್ತಾರೆ. ಹೊನ್ನೆ, ಬೇವು, ಮಾವು, ತೆಂಗಿನ ಮರಗಳಲ್ಲಿ ಯಾವುದಾದರೂ ಒಂದನ್ನು ಬಳಸಿ ತಯಾರಿಸುತ್ತಾರೆ. ಮರದ ತಿರುಳನ್ನು ತೆಗೆದು ಒಂದು ಅಡಿ ಎತ್ತರ ಒಂದು ಅಡಿ ವ್ಯಾಸದ ಪಡಗವನ್ನು ತಯಾರಿಸಿಕೊಂಡು, ಪಡಗದ ಕೆಳಭಾಗವನ್ನು ಕುರಿ ಚರ್ಮದಿಂದ ಮುಚ್ಚಿರುತ್ತಾರೆ. ಅಲ್ಲಿಂದ ದಪ್ಪದಾರವನ್ನು ಹಾಯಿಸಿಕೊಂಡು ಮೇಲೆ ತಂದಿರುತ್ತಾರೆ. ಈ ದಾರ ಸುಮಾರು ಒಂದೂವರೆ ಅಡಿಯಿದ್ದು ಅದನ್ನು ಆರು ಇಂಚು ಉದ್ದದ ಐದು ಇಂಚು ಪರೀಘದ ಕಟ್ಟಿಗೆಗೆ ತೂತಿನಲ್ಲಿ ಪೋಣಿಸಿ ಕಟ್ಟಿರುತ್ತಾರೆ. ಈ

ತುಂಡಿಗೆ ಎರಡೂ ಕಡೆ ಗೆಜ್ಜೆ ಕಟ್ಟಿರುತ್ತಾರೆ. ಬಾರಿಸುವವರು, ಎಡ ಮೊಣಕೈಯಿಂದ ಪಡಗವನ್ನು ಒತ್ತಿ ಹಿಡಿದು ಮುಷ್ಟಿಯಲ್ಲಿ ಕಟ್ಟಿಗೆ ತುಂಡನ್ನು ಹಿಡಿದುಕೊಂಡಿರುತ್ತಾರೆ. ಬಲಗೈ ಹೆಬ್ಬೆರಳು ಮತ್ತು ತೋರುಬೆರಳುಗಳಿಂದ ದಾರವನ್ನು ಜಗ್ಗಿ ಜಗ್ಗಿ ನಾದ ಹೊರಡಿಸುವರು. ಹೀಗೆ ಜಗ್ಗುವಾಗ ಎಡಗೈ ಮುಷ್ಟಿಯನ್ನು ಸ್ವಲ್ಪ ಮೇಲೆ ಕೆಳಗೆ ಮಾಡುವುದರಿಂದ ನಾದ ವೈವಿಧ್ಯತೆ ಉಂಟಾಗುತ್ತದೆ.

ಈ ವಾದ್ಯದ ಉಗಮದ ಬಗ್ಗೆ ಕಾಲ್ಪನಿಕ ಕಥೆಯೊಂದು ಈ ರೀತಿ ಇದೆ.

ಜಮದಗ್ನಿಯ ಆಶ್ರಮದಲ್ಲಿದ್ದ ಕಾಮಧೇನುವನ್ನು ಪಡೆಯಬೇಕೆಂಬ ಹಠದಿಂದ ಕಾರ್ತವೀರ್ಯನು ಜಮದಗ್ನಿಯನ್ನು ಕೊಂದು ಬಲಾತ್ಕಾರದಿಂದ ಗೋವನ್ನು ಕೊಂಡೊಯ್ಯುತ್ತಾನೆ. ರೇಣುಕೆ ತನ್ನ ಪತಿಯ ಮರಣದಿಂದ ದುಃಖದಲ್ಲಿ ತೊಳಲಾಡುತ್ತಾಳೆ. ಮಗ ಪರಶುರಾಮ ತಾಯಿಯ ದುಃಖವನ್ನು ನಿವಾರಿಸುವುದಕ್ಕಾಗಿ ಮತ್ತು ತಂದೆಯನ್ನು ಮರಣಗೈದ ಕಾರ್ಯವೀರ್ಯನ ಮೇಲೆ ಸೇಡು ತೀರಿಸುವದಕ್ಕಾಗಿ ಕಾರ್ತವೀರ್ಯನ ವಂಶವನ್ನೇ ನಿರ್ವಂಶ ಮಾಡುವೆನೆಂದು ಪಣ ತೊಡುತ್ತಾನೆ. ಅದೇ ರೀತಿ ಕಾರ್ತವೀರ್ಯನನ್ನು ಕೊಂದು ಅವನ ಎದೆಗೂಡನ್ನೇ ಕೊಳಗವನ್ನಾಗಿ ಮಾಡಿ, ಕರುಳನ್ನೇ ಬೆಸೆದಾರವನ್ನಾಗಿ ಮಾಡಿ ಬೆರಳಿನ ಎಲಬನ್ನು ಮೀಟುವ ಕಡ್ಡಿಯನ್ನಾಗಿ ಮಾಡಿ ಬಾರಿಸುತ್ತಾ ರೇಣುಕೆ ತಂದು ತೋರಿಸಿದನಂತೆ ಎನ್ನುವದೊಂದು ಕಥೆಯಿದೆ.

ಮತ್ತೊಂದು ಜನಪದ ಕತೆಯ ಪ್ರಕಾರ ಪರಶುರಾಮ ತನ್ನ ಪರಶುವಿನಿಂದ ಭೂಮಂಡಲದಲ್ಲಿರುವ ಕ್ಷತ್ರಿಯರನ್ನು ನಾಶ ಮಾಡಿ ಇಡೀ ಪೃಥ್ವಿಯನ್ನು ಸುತ್ತಿ ಪೃಥ್ವಿರಾಮನೆಂದು ಬಿರುದಾಂಕಿತನಾದನು. ಜಮದಗ್ನಿಯ ವಧೆಯ ನಂತರ ರೇಣುಕಾಂಬೆಯ ಚಂದ್ರಗುತ್ತಿಯಲ್ಲಿ ತನ್ನ ತಂದೆ ಬಿಟ್ಟುಹೋದ ಏಳುಸುತ್ತಿನ ಕೋಟೆ, ಅಪಾರ ಆಸ್ತಿ-ಪಾಸ್ತಿಗೆ ವಾರಸುದಾರಳಾಗಿ ಚಂದ್ರಗುತ್ತಿಗೆ ಬಂದು ನೆಲಸಿದಳು.

ರೇಣುಕಾಸುರ ರಾಜನಿಗೆ ಗಂಡು ಮಕ್ಕಳಿಲ್ಲದೆಯಿರುವುದರಿಂದ ರೇಣುಕಾಂಬೆ ತಾನೇ ರಾಜ್ಯ ಸೂತ್ರವನ್ನು ಕೈಗೆ ತೆಗೆದುಕೊಂಡು ಹಲವು ಕಾಲ ರಾಜ್ಯವಾಳಿದಳು.

ಇವಳ ಆಳ್ವಿಕೆ ಕಾಲದಲ್ಲಿ ಬೆಂಚಾಸುರನೆಂಬ ಅಸುರನಿದ್ದನು. ಬ್ರಾಹ್ಮಣರ ಯಜ್ಞಯಾಗಾದಿಗಳಿಗೆ ಅಡ್ಡಿಪಡಿಸುತ್ತಿದ್ದ. ರಾಜ್ಯದ ಪ್ರಜೆಗಳಿಗೆ ಬಹಳ ಕಿರುಕುಳ ಕೊಟ್ಟು ಕೊಂಡೊಯ್ಯುತ್ತಿದ್ದ. ಈತನ ಹಿಂಸೆಯನ್ನು ತಡೆಯಲಾರದೆ ಬ್ರಾಹ್ಮಣರು, ಸ್ತ್ರೀಯರು ಬಂದು ರೇಣುಕಾಂಬೆಯನ್ನು ಪ್ರಾರ್ಥಿಸಿಕೊಂಡರು. ರೇಣುಕಾಂಬೆಯು ತನ್ನ ಶಸ್ತ್ರ ಬಲದಿಂದ ಮೂಕಾಂಬಿಕೆಯ ಅವತಾರವನ್ನು ತಾಳಿ ಬೆಂಚಾಸುರನೊಡನೆ ಯುದ್ಧ ಮಾಡಿ ಅವನನ್ನು ಸಂಹಾರ ಮಾಡಿದಳು. ಆತನ ನರನಾಡಿಗಳನ್ನು ಕಿತ್ತು ತಂತಿ ಮಾಡಿ, ಚಿಮ್ಮಿದ ರಕ್ತವನ್ನು

ಹಣೆಗೆ ಹಚ್ಚಿಕೊಂಡು ತಲೆಬುರುಡೆಗೆ ಕೋಲನ್ನು ಸಿಕ್ಕಿಸಿ ಚೌಡಿಕೆಯನ್ನು ಮಾಡಿ ಬಾರಿಸುತ್ತಾ ಹಾಡಿ ಕುಣಿದಾಡಿದಳು. ಅವಳೊಂದಿಗೆ ಪ್ರಜೆಗಳು ಸೇರಿ ಸಂತೋಷದಿಂದ ಕುಣಿದಾಡುತ್ತಾ ದೇವಿಯನ್ನು ಕೊಂಡಾಡಿದರು.

## ಏಳುಸುತ್ತಿನ ಕೋಟೆ

ರೇಣುಕಾಂಬ ದೇವಾಲಯದ ಉತ್ತರ ದಿಕ್ಕಿನ ಗುಡ್ಡದ ಮೇಲೆ ಏಳುಸುತ್ತಿನ ಕೋಟೆಯಿದೆ. ಗುತ್ತರಸರು (ಗುಪ್ತರು) ಈ ಕೋಟೆಯನ್ನು ಕಟ್ಟಿ ಅನೇಕ ವರ್ಷಗಳ ಕಾಲ ರಾಜ್ಯವಾಳಿದರು ಎಂಬುದಾಗಿ ಇತಿಹಾಸದಿಂದ ತಿಳಿಯುತ್ತದೆ. ಕೋಟೆಯ ಗೋಡೆಗಳು ಕೆಲವು ಕಡೆ ಬಿದ್ದು ಹೋಗಿವೆ. ಇನ್ನು ಕೆಲವು ಕಡೆ ಉತ್ತಮ ಸ್ಥಿತಿಯಲ್ಲಿವೆ. ದೇವಾಲಯದ ಶಿಖರದ ಮೇಲೆ ನಿಂತು ಪೂರ್ವ ದಿಕ್ಕಿನ ಸ್ವಲ್ಪ ಎಡಭಾಗಕ್ಕೆ ಒಂದು ಎತ್ತರವಾದ ಗುಡ್ಡ ನಮ್ಮ ಕಣ್ಣಿಗೆ ಬೀಳುತ್ತದೆ. ಅದೇ ಸ್ವಾದಿ ಬತ್ತೇರಿ, ಹಾಗೆಯೇ ಪಶ್ಚಿಮ ದಿಕ್ಕಿನ ಸ್ವಲ್ಪ ಎಡಭಾಗದಲ್ಲಿ ಬಿಳಗಿ ಬತ್ತೇರಿಯಿದೆ. ಸ್ವಾದಿ ಮತ್ತು ಬಿಳಗಿಯ ಜನ ಈ ಗುಡ್ಡಗಳ ಮೇಲಿದ್ದು ಕಾವಲು ಮಾಡುತ್ತಿದ್ದರಿಂದ ಈ ಹೆಸರುಗಳು ಬಂದಿವೆಯೆಂದು ಹೇಳುತ್ತಾರೆ. ನಂತರ ದಟ್ಟವಾದ ವೃಕ್ಷರಾಶಿ ಬಂಡೆಗಲ್ಲುಗಳ ಇಕ್ಕಟ್ಟಿನ ದಾರಿಯಲ್ಲಿ ಸುಮಾರು ಎರಡು ಫರ್ಲಾಂಗು ಕ್ರಮಿಸಿದಾಗ ವಿಶಾಲವಾದ ಕೆರೆಯೊಂದು ಕಾಣುತ್ತದೆ. ಇದೇ ತಾವರೆಕೆರೆ. ಈ ಕೆರೆಯ ಎದುರು ನಿಂತು ನೋಡಿದಾಗ ಸ್ವಾದಿ ಬತ್ತೇರಿಯ ಹಿಂಭಾಗ ಗೋಚರಿಸುತ್ತದೆ. ಇದರ ಪಕ್ಕದಲ್ಲಿ ಮೊದಲ ಕೋಟೆಯ ಬಾಗ, ಅದೀಗ ಬರಿ ಅವಶೇಷವಾಗಿ ಉಳಿದಿದೆ.

ಕೋಟೆಯ ಎರಡನೇ ಬಾಗಿಲು ದಾಟಿ ಸುಮಾರು ಒಂದೂವರೆ ಫರ್ಲಾಂಗು ಪಯಣಿಸಿದರೆ ದುರ್ಗಾಂಬದೇವಿಯ ಗುಹಾ ದೇವಾಲಯವಿರುವ ಸ್ಥಳಕ್ಕೆ ಬರುತ್ತೇವೆ. ಭೂತಾಕಾರದ ಬಂಡೆಗಳ ಮಧ್ಯೆ ಇರುವ ಗುಹೆಯಲ್ಲಿ ಗುಪ್ತರ ಕುಲದೇವತೆಯಾದ ಮೂಕಾಂಬಿಕೆ, ದಂಡಿನ ದುರ್ಗಿ ಎಂದು ಕರೆಸಿಕೊಳ್ಳುವ ಮಹಿಷಾಸುರ ಮರ್ಧಿನಿಯ ಸುಂದರವಾದ ಶಿಲಾಮೂರ್ತಿಯನ್ನು ನೋಡಬಹುದು. ಗುಹೆಯ ಮುಂಭಾಗದಲ್ಲಿರುವ ಒಂದು ಕಲ್ಲಿನ ಫಲಕದ ಮೇಲೆ ಇಬ್ಬರು ಭಕ್ತರು ದುರ್ಗೆಯ ಪಾದಗಳಿಗೆ ಶಿರಗಳನ್ನು ಸಮರ್ಪಿಸುತ್ತಿರುವಂತೆ ಚಿತ್ರಿಸಲಾಗಿದೆ. ರೇಣುಕಾಂಬೆಯು ಮೂಕಾಂಬಿಕೆಯ ವರ ಪ್ರಸಾದದಿಂದ ಜನಿಸಿದವಳೆಂದು ಇತಿಹಾಸದಿಂದ ತಿಳಿಯುತ್ತದೆ. ರಥೋತ್ಸವದಲ್ಲಿ ಈಗಲೂ ರೇಣುಕಾಂಬದೇವಿಯ ಪಲ್ಲಕ್ಕಿ ಉತ್ಸವ ಇಲ್ಲಿಗೆ ಬಂದು ಮೂಕಾಂಬಿಕಾದೇವಿಯ ಆಶೀರ್ವಾದ ಪಡೆದು ಮುಂದೆ ಹೋಗುವ ಸಂಪ್ರದಾಯವಿದೆ.

ಗೌರಿಕೊಡ್ಲನ್ನು ದಾಟಿ ಮುಂದೆ ಸಾಗಿದರೆ ಕೋಟೆಯ ನಾಲ್ಕನೇ ಬಾಗಿಲು ಸಿಗುತ್ತದೆ. ಅದನ್ನು ದಾಟಿ ಮುಂದೆ ಹೋಗಿ ಎಡಕ್ಕೆ ತಿರುಗಿದರೆ, ಭಗ್ನಗೊಂಡಿರುವ ಫಿರಂಗಿಯನ್ನು ನೋಡಬಹುದು. ಅಲ್ಲಿಯ ಗೋಡೆಯ ಮೇಲೆ ಬುರುಜು ಹತ್ತಿ ನೋಡಿದರೆ ನಯನ

ಮನೋಹರವಾದ ಪ್ರಕೃತಿಯ ನೋಟವನ್ನು ಕಾಣಬಹುದು. ಅಲ್ಲಿಂದ ಮುಂದೆ ಸಾಗಿದರೆ ಐದನೇ ಬಾಗಿಲು ಸಿಗುತ್ತದೆ. ಈ ಬಾಗಿಲು ಬೇರೆಲ್ಲದಕ್ಕಿಂತ ಭಿನ್ನ ಮತ್ತು ವಿಶಿಷ್ಟವಾಗಿದೆ. ಅಂಕು ಡೊಂಕಾಗಿ ಮಂಟಪದಾಕೃತಿಯಲ್ಲಿದ್ದು ವೈರಿ ಪಡೆಯನ್ನು ಸುಲಭವಾಗಿ ತಡೆದು ನಿಲ್ಲಿಸಿ ಹಿಮ್ಮೆಟ್ಟಿಸಲು ಅನುಕೂಲಕರವಾಗಿದೆ.

ಐದನೇ ಕೋಟೆಯ ಬಾಗಿಲು ದಾಟಿದರೆ, ಐದಾರು ಮೀಟರು ಅಂತರದಲ್ಲಿ ತುಂಬಾ ಪ್ರಾಚೀನವಾದ ಪಾಳು ಬಿದ್ದ ಮಸೀದಿಯ ನೆಲಗಟ್ಟು ಇದೆ. ಇದು ಆ ಕಾಲದಲ್ಲಿ ಆಡಳಿತ ಮಾಡಿರುವ ರಾಜರ ಸರ್ವಧರ್ಮ ಸಮನ್ವಯ ಭಾವದ ಪ್ರತೀಕವಾಗಿದೆ.

ಕೋಟೆಯ ಆರನೇ ಬಾಗಿಲು ಸಾಕಷ್ಟು ಸುಸ್ಥಿತಿಯಲ್ಲಿದ್ದು ಕೋಟೆಯ ಗೋಡೆಯ ಬಲಪಕ್ಕದಲ್ಲಿ ಗಜಾಶ್ವಗಳಿಗೆ ನೀರು ಕುಡಿಸುವ ಬಾವಿಯಿದೆ. ಬಾಗಿಲಿಂದಾಚೆ ಸುಮಾರು ಹದಿನೈದು ಮೀಟರು ದೂರದವರೆಗೆ ಚಾಚಿರುವ ಹಾಸುಬಂಡೆಯಲ್ಲಿ ಮೆಟ್ಟಿಲುಗಳನ್ನು ರಚಿಸಲಾಗಿದ್ದು ಸ್ವಲ್ಪ ಮುನ್ನಡೆದು ಬಲಭಾಗದ ಕಾವಲು ದಾರಿಯಲ್ಲಿ ಹೋದರೆ ಮರಗಿಡಗಳಿಂದ ಆವೃತವಾಗಿರುವ ತೊಟ್ಟಿಲ ಬಾವಿಯಂತಹ ಇನ್ನೊಂದು ಬಾವಿ ಸಿಗುತ್ತದೆ. ಇದು ರಾಜ ರಾಣಿಯರ ಈಜುಕೊಳವಾದ ಗೋಲಬಾವಿ. ಏಳನೇ ಬಾಗಿಲು ದಾಟಿ ಬೆಟ್ಟದ ತುದಿಯಲ್ಲಿ ನಿಂತು ಸುತ್ತಲೂ ವೀಕ್ಷಿಸಿದಾಗ ಮೈನವಿರೇಳಿಸುವ ನಯನ ಮನೋಹರವಾದ ಚೇತೋಹಾರಿ ದೃಶ್ಯಗಳನ್ನು ನೋಡಿ ಆನಂದಿಸಬಹುದು.

ಇಲ್ಲಿ ಭೀಮನ ಪಾದವೆಂಬ ಕಲ್ಲಿನಲ್ಲಿ ಕೊರೆದ ಹೊಂಡ ಇದೆ. ಇದರ ಉದ್ದ ಇಪ್ಪತ್ತು ಅಡಿ, ಅಗಲ ಹತ್ತು ಅಡಿಯಿದ್ದು, ಆಳ ಹದಿನೈದರಿಂದ ಇಪ್ಪತ್ತು ಅಡಿಯಿದೆ. ಇದರಲ್ಲಿಯ ನೀರು ಕುಡಿಯಲು ತುಂಬಾ ರುಚಿಕರವಾಗಿದ್ದು ದಣಿದು ಬಂದ ಯಾತ್ರಿಕರಿಗೆ ಪನ್ನೀರಾಮೃತವಾಗಿದೆ. ಪಾದದಾಕಾರದಲ್ಲಿರುವ ಈ ಚಿಲುಮೆ ನೋಡಲು ತುಂಬಾ ಅಂದವಾಗಿದ್ದು ಇದರ ವರ್ಣನೆ ಸ್ಕಂದ ಪುರಾಣದಲ್ಲಿ ಕೂಡ ಉಕ್ತವಾಗಿದೆ.

ಕುದುರೆಗಳನ್ನು ಕಟ್ಟಲು ಉಪಯೋಗಿಸುತ್ತಿದ್ದ ಕುದುರೆ ಲಾಯ, ಮದ್ದುಗುಂಡುಗಳನ್ನು ಸಂಗ್ರಹಿಸುತ್ತಿದ್ದ ಮದ್ದಿನ ಮಣೆವನ್ನು ಇಲ್ಲಿ ನೋಡಬಹುದು. ಭೀಮನ ಪಾದತೀರ್ಥದ ಬಳಿಯಿರುವ ಭಯಂಕರ ಪ್ರಪಾತಕ್ಕೆ ಜೋಗಿಝುರಿ ಎನ್ನುತ್ತಾರೆ. ಹೀಗೆ ಕೋಟೆಯಲ್ಲಿ ಫಿರಂಗಿ ಕೋಟೆಯ ಬುರುಜುಗಳು ಪಾಳು ಬಿದ್ದ ಮಸೀದಿ, ಕಬ್ಬಿಣದ ಫಿರಂಗಿಗಳು, ಶಿಲಾ ಪ್ರತಿಷ್ಠಾನಗಳು ಮುಂತಾದ ಅನೇಕ ಪ್ರಾಚೀನ ಅವಶೇಷಗಳು ಕಂಡುಬರುತ್ತವೆ.

ಸೌದೆ ಭವಾನಿ ತೀರ್ಥ, ಶಂಕರಲಿಂಗ ಎಂಬ ಎರಡು ಕೊಳಗಳ ಪಕ್ಕದಲ್ಲಿ ಕೆಲವು ಶಾಸನಗಳಿವೆ. ಗುಡ್ಡದ ತುದಿಯಲ್ಲಿ ಚಂದ್ರಮೌಳೇಶ್ವರ ದೇವಾಲಯದ ತಳಪಾಯವಿದ್ದು

ಈ ಚಂದ್ರಮೌಳೇಶ್ವರನಿಂದ ಆ ಊರಿಗೆ ಚಂದ್ರಗುತ್ತಿ ಎಂದು ಹೆಸರು ಬಂದಿರಬಹುದೆಂಬ ಅಭಿಪ್ರಾಯವಿದೆ.

ಚಂದ್ರಗುತ್ತಿ ಊರ ಮುಂದೆ ಜೈನ ಬಸದಿಯಿದೆ. ಹದಿನಾಲ್ಕನೇ ಶತಮಾನದ್ದೆಂದು ಹೇಳಲಾದ ಮೂರು ಅಡಿ ಎತ್ತರದ ತೀರ್ಥಂಕರರ ಮೂರ್ತಿ ದೊರಕಿದೆ. ಊರಿನ ಎಡಗಡೆ ಗದ್ದೆಯಂಚಿನಲ್ಲಿ ಬನಶಂಕರಿಯ ಚಿಕ್ಕ ಗುಡಿಯಿದೆ. ಈ ವಿಗ್ರಹ ಆರು ಅಡಿ ಎತ್ತರವಾಗಿದ್ದು ತುಂಬಾ ಸುಂದರವಾಗಿದೆ. ಬನಶಂಕರಿ ರೇಣುಕೆಯ ತಂಗಿ ಎಂದು ಪ್ರತೀತಿ.

**ನವರಾತ್ರಿ ಉತ್ಸವ**

**ಘಟ ಸ್ಥಾಪನೆ**

ನವರಾತ್ರಿ ಉತ್ಸವ ಆಶ್ವೀಜ ಶುದ್ಧ ಪಾಡ್ಯ (ಪ್ರತಿಪದ) ದಿಂದ ಪ್ರಾರಂಭವಾಗಿ ದಶಮಿಯವರೆಗೆ ಹತ್ತು ದಿವಸಗಳ ಕಾಲ ನಡೆಯುತ್ತದೆ. ಮೊದಲನೆ ದಿವಸ ದೇವಿಯ ಕಲಶ ಸ್ಥಾಪನೆ ಮತ್ತು ನವಧಾನ್ಯಗಳಿಂದ ಕೂಡಿದ ಘಟ ಸ್ಥಾಪನೆ. ಘಟಾ ಸ್ಥಾಪನೆಯ ಹಿಂದಿನ ದಿವಸ ಮಹಾಲಯ ಅಮಾವಾಸ್ಯೆಯಂದು ನಾಥಪಂಥದ ಬಾವಾಜಿಗಳು ವ್ರತವನ್ನು ಕೈಗೊಳ್ಳುತ್ತಾರೆ. ಉದ್ದವಾಗಿ ಬೆಳೆಸಿದ ತಮ್ಮ ಗಡ್ಡವನ್ನು ಬೋಳಿಸಿ ಶುಚಿಯಾಗುವರು. ಮಠದಲ್ಲಿ ಜೀವಂತ ಸಮಾಧಿಯಾಗಿರುವ ಚಂದ್ರನಾಥ ಬಾವಾಜಿಯವರ ಸಮಾಧಿಗೆ ಪೂಜೆ ಸಲ್ಲಿಸಿ ಒಂಬತ್ತು ದಿವಸಗಳ ಕಾಲ ಬೆಳಿಗ್ಗೆ ಸಂಜೆ ಸ್ನಾನ ಮಾಡಿ ಉಪವಾಸವಿದ್ದು (ಒಂದು ಹೊತ್ತು ಮಾತ್ರ ಗೋದಿ ಆಹಾರ ಹಾಲು ಸೇರಿಸುವರು) ಘಟಾ ಸ್ಥಾಪನಾ ಸ್ಥಳದಲ್ಲಿದ್ದು ಪೂಜೆ ಸಲ್ಲಿಸುತ್ತಾರೆ.

ದೇವಸ್ಥಾನದ ಆಡಳಿತ ಮಂಡಳಿಯವರು ನಾಥಪಂಥದ ಬಾವಾಜಿಯವರನ್ನು ಆಹ್ವಾನಿಸಿ, ಮೆರವಣಿಗೆಯೊಂದಿಗೆ ಕರೆದೊಯ್ಯುತ್ತಾರೆ. ಶೂಲದ ಬೀರಪ್ಪನ ಗುಡಿಯ ಎದುರು ಇರುವ ಅಮ್ಮನ ಹೊಂಡದಲ್ಲಿ ಗಂಗೆ ಪೂಜೆ ಮಾಡಿ ಹೊಸ ಮಣ್ಣಿನ ಕುಂಭದಲ್ಲಿ ನೀರನ್ನು ತುಂಬಿ ಬಾವಾಜಿಯವರು ತಲೆಯ ಮೇಲೆ ಹೊತ್ತುಕೊಂಡು ಕಾಲಭೈರವನ ಗುಡಿಗೆ ಬಂದು ಪೂಜೆ ಸಲ್ಲಿಸಿ ರೇಣುಕಾಂಬ ದೇವಸ್ಥಾನಕ್ಕೆ ಬರುತ್ತಾರೆ.

ದೇವಸ್ಥಾನದಲ್ಲಿ ಘಟ ಸ್ಥಾಪನೆಯ ಹಿಂದಿನ ದಿವಸ ನವಧಾನ್ಯಗಳಾದ ಭತ್ತ, ಕಡಲೆ, ಹೆಸರು, ಅಲಸಂದಿ, ಮಡಕೆ ಕಾಳು, ತೊಗರಿ, ಎಳ್ಳು, ಹುರುಳಿ, ಗೋದಿಯ ಕಾಳುಗಳನ್ನು ನೀರಿನಲ್ಲಿ ನೆನೆಸಿಟ್ಟಿರುತ್ತಾರೆ. ನಾಲ್ಕು ಹೆಡಿಗೆ ಗೊಬ್ಬರ ರಾಶಿ ಹಾಕಿ ರಾಶಿಯ ಮೇಲೆ ನೀರು ತುಂಬಿದ ಕುಂಭವನ್ನು ಸ್ಥಾಪಿಸಿ ಕುಂಭದ ಮೇಲೆ ಒಂದು ಚಿಕ್ಕ ಪಿನ್ನಿ (ಹಣತೆ)ಯನ್ನಿಟ್ಟು ಪೂರ್ಣಫಲವನ್ನು (ತೆಂಗಿನಕಾಯಿ) ಇಡುತ್ತಾರೆ. ಪೂರ್ಣಫಲದ ಮೇಲೆ ಹಾಲಿನ ಸಿಂಬೆಯನ್ನಿಟ್ಟು (ಇರಿಕೆ) ಸಿಂಬೆ ಹಿಡಿಯುವಷ್ಟು ಗೊಬ್ಬರ ಮಿಶ್ರಿತ ಧಾನ್ಯ ಹಾಕುತ್ತಾರೆ. ಮೊಳಕೆಯಾದ ನವಧಾನ್ಯಗಳನ್ನು ಗೊಬ್ಬರದ ರಾಶಿಗೆ ಚೆಲ್ಲುತ್ತಾರೆ. ಕಾಲಭೈರವನ

ತ್ರಿಶೂಲ ಮತ್ತು ಖಡ್ಗಗಳನ್ನು ಗೊಬ್ಬರದ ರಾಶಿಯ ಪಕ್ಕದಲ್ಲಿರುವ ಕಂಬಕ್ಕೆ ಚಾಚಿಡುತ್ತಾರೆ. ರಾಶಿಗೆ ಶಾಸ್ತ್ರೋಕ್ತವಾಗಿ ಪೂಜೆ ಮಹಾಮಂಗಳಾರತಿ ನಡೆಯುತ್ತದೆ.

ಬಾವಾಜಿಗಳು ಘಟ ಸ್ಥಾಪನಾ ರಾಶಿಯ ನೇರದಲ್ಲಿ ಎರಡು ಅಥವಾ ಮೂರು ಅಡಿ ದೂರದಲ್ಲಿ ಮರಳು ಹಾಕಿ ಅದರ ಮೇಲೆ ಗಂಧ ಮತ್ತು ಹಲಸಿನ ಕಟ್ಟಿಗೆ ಜೋಡಿಸಿ ಮಹಾಮಂಗಳಾರತಿಯ ಬೆಂಕಿಯಿಂದ ಕಟ್ಟಿಗೆಗೆ ಹಚ್ಚಿ ಅಗ್ನಿ ಸ್ಥಾಪಿಸುತ್ತಾರೆ. ಅಗ್ನಿಯ ಎದುರು ಬಾವಾಜಿಗಳು ಗದ್ದಿಗೆ ತಯಾರಿಸಿ ಹುಲಿ ಅಥವಾ ಜಿಂಕೆ ಚರ್ಮವನ್ನು ಹಾಸಿ ಕುಳಿತುಕೊಳ್ಳುವರು. ಒಂಬತ್ತು ದಿವಸಗಳ ಕಾಲ ಬಾವಾಜಿಗಳು ಬೆಳಿಗ್ಗೆ ಮತ್ತು ಸಂಜೆ ಎರಡೂ ಹೊತ್ತು ಘಟಕ್ಕೆ, ದೂಪ ಹಾಕಿ ಆರತಿ ಮಾಡಿ ಪೂಜೆ ಸಲ್ಲಿಸುತ್ತಾರೆ. ಪ್ರತಿ ದಿವಸ ಘಟದ ರಾಶಿಗೆ ನೀರನ್ನು ಹಾಕುತ್ತಿರುತ್ತಾರೆ. ಘಟ ಸ್ಥಾಪನೆಯ ಎಂಟನೇ ದಿವಸ ದೇವಿಗೆ ಚಂಡಿ ಹವನ ಮಾಡುವರು. ನಂತರ ಕಲಶ ವಿಸರ್ಜನೆ ಮತ್ತು ಘಟಾ ವಿಸರ್ಜನೆ ಮಾಡಲಾಗುವುದು.

ಒಂಬತ್ತನೇ ದಿವಸ ಘಟದ ರಾಶಿಯ ಮೇಲೆ ಬೆಳೆದ ನವಧಾನ್ಯಗಳ ಬೆಳೆಯನ್ನು ಕಟಾವು ಮಾಡುವರು. ಘಟದ ರಾಶಿಯ ಯಾವ ದಿಕ್ಕಿನಲ್ಲಿ ಯಾವ ಧಾನ್ಯದ ಬೆಳೆ ಸಮೃದ್ಧವಾಗಿ ಬೆಳೆದಿದೆಯೊ ಆ ದಿಕ್ಕಿನ ಭಾಗದಲ್ಲಿ ಅಥವಾ ಆ ವರ್ಷ ಆ ಬೆಳೆಯ ಫಸಲು ಉತ್ತಮವಾಗಿ ಬೆಳೆಯುತ್ತದೆ ಎಂಬ ನಂಬಿಕೆಯಿದೆ. ವಿಜಯ ದಶಮಿಯ ದಿವಸ ಬೆಳಿಗ್ಗೆ ಬಾವಾಜಿಗಳು ಘಟದ ರಾಶಿಯಲ್ಲಿ ಕಟಾವು ಮಾಡಿದ ಬೆಳೆಯನ್ನು ಕಾಲಭೈರವನ ದೇವಾಲಯಕ್ಕೆ ತಂದು ಪೂಜೆ ಸಲ್ಲಿಸಿ ಚಂದ್ರಗುತ್ತಿ ಗ್ರಾಮದ ಪ್ರತಿಯೊಂದು ಮನೆಗೂ ಭೇಟಿ ನೀಡಿ ಪ್ರಸಾದ ರೂಪವಾಗಿ ಹಂಚುವರು. ಗ್ರಾಮದ ಜನರು ತಮ್ಮ ಮನೆಗೆ ಬಂದ ಬಾವಾಜಿಗಳಿಗೆ ಕಾಣಿಕೆ ಸಲ್ಲಿಸಿ ನಮಸ್ಕಾರ ಮಾಡಿ ಬೀಳ್ಕೊಡುತ್ತಾರೆ. ಪಡೆದ ಪ್ರಸಾದವನ್ನು ಧಾನ್ಯ ತುಂಬಿದ ಕಣಜಗಳಿಗೆ ಹಾಕುತ್ತಾರೆ.

ಈ ದಿವಸ ಮಧ್ಯಾಹ್ನ ಮೂರು ಗಂಟೆ ಸಮಯಕ್ಕೆ ದೇವಸ್ಥಾನದಿಂದ ರೇಣುಕಾಂಬ ದೇವಿಯ ಪಲ್ಲಕ್ಕಿ ಉತ್ಸವ ಚಂದ್ರಗುತ್ತಿ ಹರೀಶಿ ಮಧ್ಯೆಯಿರುವ ನ್ಯಾರಶಿ ಗ್ರಾಮದ ಸಮೀಪದ ಬನ್ನಿಕಟ್ಟೆಗೆ ಹೋಗುತ್ತದೆ. ಇದೇ ಸಮಯಕ್ಕೆ ಹೊನ್ನಾಳಿಯ ಮಾರಿಕೊಪ್ಪದಿಂದ ಪಾದಯಾತ್ರಿಗಳಾಗಿ ಬನ್ನಿ ತೆಗೆದುಕೊಂಡು ಬರುವ ಚೌಡಿಕೆಯವರನ್ನು ಪ್ರಧಾನ ಅರ್ಚಕರು ಮತ್ತು ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರು, ಮುಜರಾಯಿ ಅಧಿಕಾರಿಗಳು ಸಂಭ್ರಮದಿಂದ ಸ್ವಾಗತಿಸುತ್ತಾರೆ. ದೇವಿಗೆ ಚೌಡಿಕೆಯವರು ತಂದ ಬನ್ನಿಯನ್ನು ಮುಡಿಸಿ ಪೂಜೆ ಮಹಾಮಂಗಳಾರತಿಯನ್ನು ಮಾಡುತ್ತಾರೆ.

ನಂತರ ಅಂಬು ಹೊಡೆಯುವ ಕಾರ್ಯ. ತೆಂಗಿನಕಾಯಿಗೆ ಬಾಣದಿಂದ ಗುರಿ ಹೊಡೆಯುವದು. ಇದು ದೇವಿಯ ವಿಜಯೋತ್ಸವದ ಸಂಕೇತವೆಂದು ಭಾವಿಸಲಾಗುತ್ತದೆ.

ಮುಂದಿನದು ಭಿನ್ನವತ್ತಳೆಯನ್ನು ಓದುವ ಕೆಲಸ ಸಂಸ್ಥಾನಕ್ಕನುಸಾರವಾಗಿ ಆಯಾಯ ಸರ್ಕಾರಿ ಇಲಾಖೆಯ ಅಧಿಕಾರಿಗಳು ಸಹಿ ಹಾಕಿ ಬಿನ್ನವತ್ತಳೆಯನ್ನು ಅರ್ಪಿಸುತ್ತಾರೆ. ನಂತರ ಬನ್ನಿಸೊಪ್ಪನ್ನು ಎಲ್ಲರಿಗೂ ಹಂಚುವರು. ಈ ಬನ್ನಿಯನ್ನು ಪರಸ್ಪರರು ಹಂಚಿಕೊಂಡು ಕಿರಿಯರು ಹಿರಿಯರಿಂದ ಆಶೀರ್ವಾದ ಪಡೆಯುತ್ತಾರೆ. ಬನ್ನಿ ಬಂಗಾರದಷ್ಟೆ ಪವಿತ್ರ ಹಾಗೂ ಮಹತ್ವವೆಂದು ಭಕ್ತರು ಭಾವಿಸುತ್ತಾರೆ.

ಹೊನ್ನಾಳಿಯಿಂದ ಬನ್ನಿ ತರುವ ಬಗ್ಗೆ ಒಂದು ದಂತ ಕಥೆಯ ಪ್ರಕಾರ ಚಂದ್ರಸೇನ ಎಂಬ ರಾಜ ನಗರದ ಕಡೆಯಿಂದ ಹೊನ್ನಾಳಿ ಮಾರ್ಗವಾಗಿ ದಿಗ್ವಿಜಯಕ್ಕಾಗಿ ಹೊರಟ. ಪ್ರಯಾಣದ ಆಯಾಸ ಪರಿಹರಿಸಿಕೊಳ್ಳಲು ಹೊನ್ನಾಳಿಯ ದಟ್ಟ ಅರಣ್ಯದಲ್ಲಿ ಬೀಡುಬಿಟ್ಟ. ರಾತ್ರಿ ಮಲಗಿದಾಗ ಸ್ವಪ್ನದಲ್ಲಿ ಒಬ್ಬಳು ದೇವತೆ ಕಾಣಿಸಿಕೊಂಡು ಈ ಸ್ಥಳದಲ್ಲಿ ಒಂದು ನಾಡನ್ನು ಕಟ್ಟು ಎಂದು ಹೇಳಿದಳು. ದೇವಿಯ ಪ್ರೇರಣೆಯಿಂದ ರಾಜ ಒಂದು ಸುಂದರವಾದ ನಾಡನ್ನು ಕಟ್ಟಿಸಿದ. ನಾಡಿಗೆ ಹೆಸರನ್ನಿಡುವ ಸಮಸ್ಯೆ ಇವನನ್ನು ಕಾಡಿತು. ಕನಸಿನಲ್ಲಿ ಹೊನ್ನರಳೆ (ಬಂಗಾರದ ಜಿಂಕೆ) ಕಾಣಿಸಿಕೊಂಡಿತು. ನಾಡಿಗೆ ಹೊನ್ನರಳೆ ಎಂದು ಹೆಸರಿಟ್ಟ. ಇಲ್ಲಿ ಹಳದಮ್ಮ ಎಂಬ ದೇವಿಯನ್ನು ಪ್ರತಿಷ್ಠಾಪನೆ ಮಾಡಿ ಗುಡಿಯನ್ನು ಕಟ್ಟಿಸಿದ. ಹಿಂದಿನ ಹೊನ್ನರಳೆ ಇಂದು ಹೊನ್ನಾಳಿಯಾಗಿದೆ. ನಂತರ ಬನವಾಸಿ ರಾಜ್ಯವನ್ನು ಗೆದ್ದು ಚಂದ್ರಗುತ್ತಿ ಪ್ರಾಂತ್ಯವನ್ನು ವಶಪಡಿಸಿಕೊಂಡ. ಈ ದಿಗ್ವಿಜಯದ ಸಂಕೇತವಾಗಿ ಚಂದ್ರಗುತ್ತಿಯ ಕೋಟೆಯ ಮೇಲೆ, ಧ್ವಜ ಸ್ಥಾಪನೆ ಮಾಡಿ ಲತಾಗೃಹವನ್ನು ಕಟ್ಟಿಸಿದ. ಈ ಲತಾಗೃಹ ಇಂದು ವಿಠ್ಠಲನ ಗುಡಿ ಎಂದು ಹೆಸರಾಗಿದೆ ಎಂದು ಹೇಳುತ್ತಾರೆ.

ಹೊನ್ನಾಳಿಯ ಮಾರಿಕೊಪ್ಪದಲ್ಲಿ ನೆಲೆಸಿರುವ ಹಳದಮ್ಮ ಮತ್ತು ಗುತ್ಯಮ್ಮ ಸಹೋದರಿಯರು ಎಂಬ ಅಭಿಪ್ರಾಯವಿದೆ. ಈ ಕಾರಣದಿಂದ ನವರಾತ್ರಿಯಲ್ಲಿ ಇಂದಿಗೂ ಮಾರಿಕೊಪ್ಪದಿಂದ ಬನ್ನಿ ತರುವ ಸಂಪ್ರದಾಯವಿದೆ. ನಂತರ ದೇವಿಯ ಪಲ್ಲಕ್ಕಿ ಉತ್ಸವ ನಾಲ್ಕು ಕಾಲು ಮಂಟಪ (ಓಲಗದ ಮಂಟಪ)ದ ವರೆಗೆ ಹೋಗಿ ವಿಶ್ರಾಂತಿ ಪಡೆದು ದೇವಸ್ಥಾನಕ್ಕೆ ಹೋಗುತ್ತದೆ. ಬನ್ನಿ ಉತ್ಸವ ಬರುವಾಗ ದಾರಿಯಲ್ಲಿ ಭಕ್ತಾದಿಗಳು ದೇವಿಗೆ ಪೂಜೆ ಸಲ್ಲಿಸುತ್ತಾರೆ. ದೇವಸ್ಥಾನದಲ್ಲಿ ದೇವಿಗೆ ಅಲಂಕರಿಸಿದ ವಸ್ತುಗಳನ್ನು ತೆಗೆದು ರಕ್ಷಣಾ ಇಲಾಖೆಯವರ ನೆರವಿನೊಂದಿಗೆ ಸೊರಬದ ತಾಲ್ಲೂಕು ಕಛೇರಿಗೆ ಕಳುಹಿಸಿ ಕೊಡಲಾಗುತ್ತದೆ.

### ಚಂದ್ರಗುತ್ತಿ ಜಾತ್ರೆ

ಪ್ರತಿ ವರ್ಷ ಚಂದ್ರಗುತ್ತಿ ರೇಣುಕಾಂಬೆಯ ಜಾತ್ರೆಯು ಮಾರ್ಚ್ ತಿಂಗಳಲ್ಲಿ ನಡೆಯುವದು. ಶಿವರಾತ್ರಿಯ ಅಮಾವಾಸ್ಯೆಯಾದ ನಂತರ ಬರುವ ನವಮಿ ದಿವಸ ಮಹಾ ರಥೋತ್ಸವ ನಡೆಯುತ್ತದೆ. ಫಾಲ್ಗುಣ ಶುದ್ಧ ಶ್ರೇಷ್ಠಿಯಿಂದ ದಶಮಿಯವರೆಗೆ ಪಂಚರಾತ್ರಿ

ಕಾರ್ಯಕ್ರಮಗಳು. ಆರನೇ ದಿವಸ ಏಕಾದಶಿಯಂದು ಭಕ್ತಾದಿಗಳು ಹರಕೆ ಒಪ್ಪಿಸುವ ಕಾರ್ಯಕ್ರಮ.

ಶ್ರೇಷ್ಠಿಯ ದಿವಸ ರೇಣುಕಾಂಬದೇವಿಯ ಕಂಕಣ ಪೂಜೆ, ಕಂಕಣ ಕಟ್ಟಲು ಕೆಳದಿಯಿಂದ ತಾಂತ್ರಿಕರು ಬರುತ್ತಾರೆ. ಅಂಕುರಾರೋಹಣ, ಧ್ವಜಾರೋಹಣ, ಭೇರಿ ಘೋಷಣಾ, ಯಾಗ ಶಾಲಾ ಪ್ರವೇಶ ಹಾಗೂ ವೃಷಭ ಸಿಂಹ ಯಂತ್ರೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ.

ದೇವಿಗೆ ಬಂಗಾರದ ಆಭರಣಗಳೊಂದಿಗೆ ಅಲಂಕಾರ ಮಾಡಿ ಪೂಜೆ, ಬಸರಿ ಸೊಪ್ಪು ಮಿಶ್ರಿತ ಅನ್ನ ಮಾಡಿ ಬಲಿ ತಯಾರಿಸುವರು. ಬಲಿ ಅನ್ನವನ್ನು ವಾದ್ಯ ದೀವಟಿಗೆಯೊಂದಿಗೆ ಓಲಗ ಮಂಟಪಕ್ಕೆ ಬಂದು ಬಲಿ ವಿಸರ್ಜನೆ ಮಾಡುತ್ತಾರೆ. ನಂತರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಅಂದು ಮಧ್ಯಾಹ್ನದಿಂದ ಇಡೀ ರಾತ್ರಿ ಪಲ್ಲಕ್ಕಿ ಉತ್ಸವವನ್ನು ನಡೆಸಲಾಗುವುದು. ಪಲ್ಲಕ್ಕಿ ಉತ್ಸವವು ರೇಣುಕಾಂಬೆಯ ಕುಲದೇವತೆಯಾದ ಕೋಟೆಯೊಳಗೆ ಇರುವ ಮೂಕಾಂಬಿಕೆ (ದುರ್ಗಾಂಬ)ಯ ದರ್ಶನ ಪಡೆದು, ಪುರ ಪ್ರದಕ್ಷಿಣೆ ಮಾಡಿ ಮುಖ್ಯರಸ್ತೆಯಿಂದ ಗುಡ್ಡವನ್ನೇರಿ ದೇವಿಯನ್ನು ಪೂಜಿಸುವರು. ಈ ಕಾರ್ಯಕ್ರಮವು ವೃಷಭ ಲಾಂಛನ ಧ್ವಜ ಪೂಜೋತ್ಸವದೊಂದಿಗೆ ಪ್ರಾರಂಭಗೊಳ್ಳುವುದು.

ಎರಡನೇ ದಿವಸ ಜಪ ಹವನ ಪ್ರಾರಂಭ, ವೃಷಭ ಯಂತ್ರೋತ್ಸವ, ಅಗ್ನಿ ಹೋಮ, ದೇವಾಲಯದ ಆವರಣದಲ್ಲಿ ಹೋಮಕುಂಡವಿದೆ. ಅದರಲ್ಲಿ ಸಪ್ತರ್ಷಿಗಳಿಂದ ಹೋಮ ಹೊತ್ತಿಸಿ, ವೃಷಭ ಯಂತ್ರೋತ್ಸವ ನಡೆಯುವದು. ಏಳು ಜನ ಬ್ರಾಹ್ಮಣರು ಸೇರಿ ಮಂತ್ರೋಚ್ಚಾರಣೆಯನ್ನು ಮಾಡುತ್ತಾ ಅಗ್ನಿಕುಂಡಕ್ಕೆ ತುಪ್ಪ, ಶ್ರೀಗಂಧ, ಧನಧಾನ್ಯಗಳನ್ನು ಸುರುವಿ ಹೋಮ ಮಾಡುವರು. ಇದೇ ದಿವಸ ನವಗ್ರಹ ಸ್ಥಾಪನೆ, ಕಲಶ ಸ್ಥಾಪನೆ, ದೇವಿ ಪಾರಾಯಣಗಳು ನಡೆಯುತ್ತವೆ. ಮಧ್ಯಾಹ್ನ ಮೂರು ಗಂಟೆಗೆ ದೇವಿಯ ಪಲ್ಲಕ್ಕಿ ಉತ್ಸವ, ಊರೊಳಗೆ ನಡೆಯುವದು.

ಮೂರನೇ ದಿವಸ ಸಣ್ಣ ತೇರು, ಹೂವಿನ ಪುಷ್ಪಮಂಜರಿ, ಹೂವಿನ ರಥೋತ್ಸವ, ಅನೇಕ ತರದ ಹೂವುಗಳಿಂದ ರಥವನ್ನು ಅಲಂಕರಿಸಿ ಶ್ರೀ ರೇಣುಕಾಂಬದೇವಿಯ ಉತ್ಸವ ಮೂರ್ತಿಯನ್ನು ರಥದಲ್ಲಿ ಕೂರಿಸಿ, ದೇವಸ್ಥಾನದ ಕೆಳಭಾಗದಲ್ಲಿರುವ ಆರ್ಚ್ ಕಮಾನುವರೆಗೆ ರಥವನ್ನು ಎಳೆದು ತಂದು, ವಾಪಸು ತೆಗೆದುಕೊಂಡು ಹೋಗುವರು. ರಥದ ಮನೆಯಲ್ಲಿ ರಥವನ್ನು ಬಿಟ್ಟು ದೇವಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ದೇವಸ್ಥಾನಕ್ಕೆ ಕರೆದೊಯ್ಯುವರು.

ನಾಲ್ಕನೇ ದಿವಸ ಬ್ರಹ್ಮ ರಥೋತ್ಸವ, ಮಹಾರಥೋತ್ಸವ, ದೊಡ್ಡ ತೇರು ಎಂದೂ ಕರೆಯುವರು. ಬೆಳಿಗ್ಗೆ ದಿನನಿತ್ಯದಂತೆ ದೇವಿಗೆ ಪೂಜೆ, ಮಹಾ ನೈವೇದ್ಯ, ಮಹಾ

ಮಂಗಳಾರತಿಗಳು ನಡೆಯುತ್ತವೆ. ಬೆಳಿಗ್ಗೆ ಹತ್ತು ಗಂಟೆಗೆ ಬಲಿಯ ಜೊತೆಗೆ ಪಲ್ಲಕ್ಕಿ ಉತ್ಸವವು ಓಲಗ ಮಂಟಪದವರೆಗೆ ಬಂದು ರಥದವರೆಗೆ ವಾಪಸು ಹೋಗಿ ದೇವಿಯನ್ನು ಮಧ್ಯಾಹ್ನ ಹನ್ನೆರಡು ಗಂಟೆಗೆ ರಥಾರೋಹಣ ಮಾಡಲಾಗುತ್ತದೆ. ರಾತ್ರಿ ಹನ್ನೆರಡು ಗಂಟೆಯಿಂದ ಎರಡು ಗಂಟೆಯವರೆಗೆ ಆರ್ಚ್ ಕಮಾನುವರೆಗೆ ಮಾತ್ರ ದೊಡ್ಡ ರಥವನ್ನು ಸಾವಿರಾರು ಭಕ್ತರು ಸೇರಿ ಎಳೆಯುತ್ತಾರೆ. ಮರಳಿ ರಥವನ್ನು ರಥದ ಮನೆಯವರೆಗೆ ವಾಪಸು ಎಳೆದೊಯ್ದು ದೇವಿಯನ್ನು ರಥದಿಂದ ಇಳಿಸಿ, ಪಲ್ಲಕ್ಕಿಯಲ್ಲಿ ಕೂರಿಸಿ ಮೃಗ ಬೇಟೆ ಕಾರ್ಯಕ್ರಮ ನಡೆಸುವರು. ನಂತರ ದೇವಿಯ ಪಲ್ಲಕ್ಕಿಯನ್ನು ಗೋಪಾನಹಳ್ಳಿ ಕಟ್ಟೆಯವರೆಗೆ ಒಯ್ದು ಕೂರಿಸುವರು. ಹಿರಿಯ ಮುಜರಾಯಿ ಅಧಿಕಾರಿಗಳು, ಸಾಂಕೇತಿಕವಾಗಿ ಬಿಲ್ಲು ಬಾಣಗಳಿಂದ ತೆಂಗಿನಕಾಯಿಗೆ ಗುರಿಯಿಟ್ಟು ಹೊಡೆಯುವರು. ನಂತರ ದೇವಿಯ ಪಲ್ಲಕ್ಕಿ ಉತ್ಸವ ದೇವಸ್ಥಾನದವರೆಗೆ ಹೋಗಿ ದೇವಿಯ ವಿಸರ್ಜನೆ ನಡೆಯುತ್ತದೆ.

ಈ ರಥೋತ್ಸವ ದಿವಸವನ್ನು ಭಕ್ತರು ತುಂಬಾ ಮಹತ್ವವಾದ ಹಾಗೂ ಪುಣ್ಯ ದಿವಸವೆಂದು ಭಾವಿಸುತ್ತಾರೆ. ಕರ್ನಾಟಕದ ಅನೇಕ ಭಾಗಗಳಿಂದ ಭಕ್ತರು ತಮ್ಮ ಹರಕೆಯನ್ನು ತೀರಿಸಲು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರುತ್ತಾರೆ. ಹಿಂದೆ ಇದೇ ದಿವಸ ಬೆತ್ತಲೆ ಸೇವೆ ನಡೆಯುತ್ತಿತ್ತು. ೧೯೮೬ರಿಂದ ಬೆತ್ತಲೆ ಸೇವೆಯನ್ನು ಸಂಪೂರ್ಣವಾಗಿ ಕರ್ನಾಟಕ ಸರ್ಕಾರದಿಂದ ನಿಷೇಧಿಸಲಾಗಿದೆ.

ಐದನೇ ದಿವಸ ದಶಮಿ ಓಕಳಿಯಾಟ, ದಿವಸದಂತೆ ಪೂಜೆ, ಮಹಾನೈವೇದ್ಯ, ಮಹಾ ಮಂಗಳಾರತಿ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ. ಮಧ್ಯಾಹ್ನ ಎರಡು ಗಂಟೆಗೆ ಕಲಶ ಮತ್ತು ಕಂಕಣ ವಿಸರ್ಜನೆ, ಮೂರು ಗಂಟೆ ಸಮಯಕ್ಕೆ ಪಲ್ಲಕ್ಕಿ ಉತ್ಸವದಲ್ಲಿ ದೇವಿಯನ್ನು ಓಕಳಿ ಕಟ್ಟೆಗೆ ತಂದಿರಿಸಿ, ಓಕಳಿ ಪೂಜೆ ಮಾಡಿ ಭಕ್ತರಿಗೆಲ್ಲ ಓಕಳಿ ಪ್ರಸಾದ ಹಂಚುತ್ತಾರೆ. ನಂತರ ಸುಮಾರು ಆರು ಗಂಟೆಗೆ ಪಲ್ಲಕ್ಕಿ ಉತ್ಸವವು ಊರೊಳಗೆ ಸಾಗುತ್ತದೆ. ಓಲಗ ಮಂಟಪದಲ್ಲಿ ದೇವಿಯನ್ನು ಸಿಂಹಾಸನದಲ್ಲಿ ಕೂರಿಸಿ ಅಲಂಕಾರ ಮಾಡುತ್ತಾರೆ. ಹಿಂದೆ ಬೆಳತನಕ ಕೂರಿಸುತ್ತಿದ್ದರು. ಭಕ್ತಾದಿಗಳು ಹಣ್ಣು ಕಾಯಿ ಪೂಜೆ ಸಲ್ಲಿಸುವರು. ಬೆಳಗಿನ ಝಾವ ಮೂರು ಗಂಟೆಗೆ ದೇವಿಯನ್ನು ದೇವಸ್ಥಾನಕ್ಕೆ ಕರೆದೊಯ್ಯುವರು. ಮಾತಂಗಿ ಕಟ್ಟೆಯ ಮುಂಭಾಗದಲ್ಲಿರುವ ಕಲ್ಲಿನ ಚಿಕ್ಕ ಗುಂಡನ್ನು ಎತ್ತಿ ಭಕ್ತಾದಿಗಳು ತಮ್ಮ ಮನಸ್ಸಿನಲ್ಲಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದುಕೊಳ್ಳುವರು. ದೂರ ದೂರದಿಂದ ಬಂದ ಭಕ್ತಾದಿಗಳು ಗುಡ್ಡದಲ್ಲಿ ಅಲ್ಲಲ್ಲಿ ತಂಗಿ ಊಟೋಪಚಾರಗಳನ್ನು ಪೂರೈಸುವರು.

ಆರನೇ ದಿವಸ ಏಕಾದಶಿ ಇಂದು ಭಕ್ತಾದಿಗಳು ದೇವಿಗೆ ಹೇಳಿಕೊಂಡ ಹರಕೆಗಳನ್ನು ಪೂರೈಸುವರು. ತುಲಾಭಾರ ಕಾರ್ಯಕ್ರಮವಿರುತ್ತದೆ. ತುಲಾಭಾರದಲ್ಲಿ ಅಕ್ಕಿ, ಬಾಳೇಹಣ್ಣು, ತೆಂಗಿನಕಾಯಿ, ಬೆಲ್ಲ, ಸಕ್ಕರೆ ಬೇರೆ ಬೇರೆಯಾಗಿ ಅಥವಾ ಮಿಶ್ರವಾಗಿ ಕೊಡುತ್ತಾರೆ.

ಬಾಳೇಹಣ್ಣು, ಪೇರಲ, ದ್ರಾಕ್ಷಿ, ಮೂಸುಂಬೆ ಇತ್ಯಾದಿ ಹಣ್ಣುಗಳನ್ನು ಸೇರಿಸಿ ಪಂಚಫಲ ತುಲಾಭಾರವನ್ನು ಕೆಲವರು ಮಾಡುತ್ತಾರೆ.

ಮಕ್ಕಳ ಚೌಲ, ತಲೆಕೂದಲು ತೆಗೆಸುವುದು, ದೀಡು ನಮಸ್ಕಾರ, ಉರುಳು ಸೇವೆ, ಬೇವುಡಿಗೆ ಹರಕೆಗಳು ಮತ್ತು ಸೀರೆ ಕಣ, ಬೆಳ್ಳಿ ಬಂಗಾರದ ಸಾಮಾನುಗಳನ್ನು ದೇವಿಗೆ ಹರಕೆ ರೂಪದಲ್ಲಿ ಒಪ್ಪಿಸುವುದು ಹಾಗೂ ಅಕ್ಕಿ, ಕಾಯಿ, ಕಣ, ಎಲೆ ಅಡಿಕೆ, ಬಳೆ, ಬಾಚಣಿಗೆ ಬಿಚ್ಚೋಲೆ, ಅರಿಶಿನ, ಕುಂಕುಮ, ಈ ಸಾಮಾನುಗಳನ್ನು ಸೇರಿಸಿ ಉಡಿ ತುಂಬುವ ಹರಕೆಗಳು ನಡೆಯುತ್ತವೆ. ಹರಕೆ ಒಪ್ಪಿಸುವ ಬೆಳ್ಳಿ ಬಂಗಾರದ ಸಾಮಾನುಗಳಲ್ಲಿ ಚಿಮಕಲು, ಬಾವು, ತ್ರಿಶೂಲ, ತೊಟ್ಟಿಲು, ಕಣ್ಣು, ಕೋರೆ ಮೀಸೆ ಇತ್ಯಾದಿ ವಸ್ತುಗಳಿರುತ್ತವೆ.

ಹಿಂದೆ ಚಂದ್ರಗುತ್ತಿಯ ಜಾತ್ರೆ ಮೂರು ನಾಲ್ಕು ತಿಂಗಳುಗಳು ನಡೆಯುತ್ತಿತ್ತು. ಯುಗಾದಿ ನಂತರ ಒಂಬತ್ತನೇ ದಿವಸ ಜಾತ್ರೆ ಪ್ರಾರಂಭವಾಗಿ ಜುಲೈ ತಿಂಗಳು ಅರಿದ್ರಾಮಳೆ ಪ್ರಾರಂಭವಾಗುವವರೆಗೂ ಜಾತ್ರೆ ನಡೆಯುತ್ತಿತ್ತು. ಮಲೆನಾಡಿನ ಜನರಿಗೆ ಚಂದ್ರಗುತ್ತಿ ಜಾತ್ರೆ ವ್ಯಾಪಾರದ ಕೇಂದ್ರವಾಗಿತ್ತು. ಜಾತ್ರೆ ಪ್ರಾರಂಭವಾಗುವ ಒಂದು ವಾರದ ಮುಂಚೆ, ಅಂಗಡಿಯವರು, ನಾಟಕ ಕಂಪನಿಯವರು ಜಮಾಯಿಸುತ್ತಿದ್ದರು. ಬನವಾಸಿ, ಶಿರಸಿ, ಮೂಡಿ ದೊಡ್ಡಕೊಪ್ಪ, ಸೊರಬ, ಆನವಟ್ಟಿ, ತಿಳವಳ್ಳಿ, ಹುಬ್ಬಳ್ಳಿ, ಧಾರವಾಡ, ರಾಣಿಬೆನ್ನೂರು, ಶಿಕಾರಿಪುರ, ಶಿರಾಳಕೊಪ್ಪ, ತೊಗರ್ಸಿ, ಸಾಗರ ಮುಂತಾದ ಕಡೆಗಳಿಂದ ಜಿನಸಿ, ಬಟ್ಟೆ, ಬಳೆ, ಪಾತ್ರೆ, ಮಣಿ ಅಂಗಡಿಯವರೂ, ಹೋಟೆಲ್, ಖಾನಾವಳಿ, ನಾಟಕ, ಯಕ್ಷಗಾನ, ಸರ್ಕಸ್ ಕಂಪನಿಯವರು, ಬಂದು ಬಿಡಾರ ಹೂಡುತ್ತಿದ್ದರು. ಎರಡೆರಡು ನಾಟಕ ಕಂಪನಿಯವರು ಟೆಂಟ್ ಹಾಕಿ ನಾಟಕಗಳನ್ನು ಪ್ರದರ್ಶನ ನೀಡುತ್ತಿದ್ದರು. ಗರ್ದಿಗಮ್ಮತ್ತಿನವರು, ಸಿದ್ದಾಪುರ ತಾಲ್ಲೂಕು, ಕಾನಗೋಡು ಗ್ರಾಮದ ಗೊಂಬೆ ಬಸವಣ್ಣೆಪ್ಪನವರ ಸೂತ್ರದ ಗೊಂಬೆಯಾಟ, ಬ್ಯಾಡಗಿ ಕಡೆಯ ಹೆಳವರಿಂದ ತೊಗಲುಗೊಂಬೆ ಆಟ, ಜೋಗೇರಾಟ, ಕೇರಳದ ಜಾದುಗಾರರಿಂದ ಕಣ್ಕಟ್ಟಾಟ, ಧರ್ಮಸ್ಥಳ ಮೇಳದವರಿಂದ ಯಕ್ಷಗಾನ ಬಯಲಾಟಗಳು, ಜಾತ್ರೆಯಲ್ಲಿ ಪ್ರದರ್ಶನಗೊಳ್ಳುತ್ತಿದ್ದವು. ಚಂದ್ರಗುತ್ತಿಯ ಸುತ್ತಮುತ್ತಲಿನ ಗ್ರಾಮಗಳ ಜನರು ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಿದ್ದರು.

ಮಲೆನಾಡಿನ ಜನರು ಅಕ್ಕಿ, ಅಡಿಕೆ, ಯಾಲಕ್ಕಿ, ಮೆಣಸು, ಬಾಳೇಹಣ್ಣು, ಮುಂತಾದವುಗಳನ್ನು ವ್ಯಾಪಾರಕ್ಕಾಗಿ ತರುತ್ತಿದ್ದರು. ಪಕ್ಕಾ ಸೇರಿನ ಅಳತೆ ಮಾಪನವಿತ್ತು. ಮೂರು ಪಕ್ಕಾ ಸೇರು ಅಕ್ಕಿಗೆ, ಎರಡು ಪಕ್ಕಾ ಸೇರು ಕಾಳು (ಬೇಳೆ, ಹೆಸರು, ಹಸಿಕಡ್ಲೆ, ಉದ್ದು, ಧನಿಯಾ, ಬೆಳ್ಳುಳ್ಳಿ, ಈರುಳ್ಳಿ ಇತ್ಯಾದಿ) ಚಾಲಿ, ಬೆಟ್ಟೆ, ಗೋಟು ಅಡಿಕೆಯನ್ನು ಮಲೆನಾಡಿನವರು ಇಲ್ಲಿಗೆ ತಂದು ತಮಗೆ ಬೇಕಾದ ಕಾಳು, ಬೇಳೆಗಳನ್ನು ಕೊಂಡೊಯ್ಯುತ್ತಿದ್ದರು. ಒಂದು ಪಕ್ಕಾ ಸೇರು ಅಡಿಕೆಗೆ ಮೂರರಿಂದ ನಾಲ್ಕು ಪಕ್ಕಾ ಸೇರು

ಕಾಳು, ಬೇಳೆಗಳನ್ನು ಪಡೆಯುತ್ತಿದ್ದರು. ಮಲೆನಾಡು ಭಾಗದ ಜನ ಮಳೆಗಾಲಕ್ಕೆ ಬೇಕಾದ ಸಮಸ್ತ ವಸ್ತುಗಳನ್ನು ತಾವು ಬೆಳೆದ ಅಡಿಕೆ, ಅಕ್ಕಿ ಮುಂತಾದ ವಸ್ತುಗಳನ್ನು ಕೊಟ್ಟು ತಮಗೆ ಬೇಕಾದ ಕಾಳು, ಬೇಳೆ, ಬಟ್ಟೆ, ಪಾತ್ರೆಗಳನ್ನು ಕೊಂಡುಕೊಳ್ಳುತ್ತಿದ್ದರು. ಧಾನ್ಯ-ಧಾನ್ಯಗಳ ಕೊಡು ಕೊಳ್ಳುವಿಕೆಯ ವಿನಿಮಯ ಈ ಜಾತ್ರೆಯಲ್ಲಿ ನಡೆಯುತ್ತಿತ್ತು.

ಮಲೆನಾಡಿನ ಬೇರೆ, ಬೇರೆ ಭಾಗಗಳಿಂದ ಎತ್ತಿನ ಗಾಡಿಗಳ ಮೇಲೆ ಜನಗಳು ಜಾತ್ರೆಗೆ ಬರುತ್ತಿದ್ದರು. ಸಾವಿರಾರು ಎತ್ತಿನ ಗಾಡಿಗಳು ಸೇರುತ್ತಿದ್ದವು. ಪ್ರತಿ ವರ್ಷ ಜಾತ್ರೆಗೆ ಐದರಿಂದ ಹತ್ತು ಸಾವಿರ ಜನರು ಭಾಗವಹಿಸುತ್ತಿದ್ದರು.

ಜೂನ್-ಜುಲೈ ತಿಂಗಳುಗಳಲ್ಲಿ ಮಳೆಗಾಲ ಪ್ರಾರಂಭವಾದ ಕೂಡಲೆ ಅಂಗಡಿಯವರು ತಮ್ಮ ತಮ್ಮ ಅಂಗಡಿಗಳಿಗೆ ಜಿಂಕ್ ಶೀಟ್, ತಗಡುಗಳನ್ನು ಹೊದಿಸಿ, ಮಳೆಯ ನೀರು ಜಾರಿ ಹೋಗುವಂತೆ ಅಂಗಡಿಗಳ ಸುತ್ತಲು ಕಾಲುವೆಗಳನ್ನು ಮಾಡುತ್ತಿದ್ದರು. ಕ್ರಮೇಣ ವ್ಯಾಪಾರಸ್ಥರು, ಮಲೆನಾಡಿನ ಮುಗ್ಧ ಜನರಿಗೆ ಪಕ್ಕಾ ಸೇರಿನ ಅಳತೆಯಲ್ಲಿ ಮೋಸ ಮಾಡಲು ಪ್ರಾರಂಭಿಸಿದರು. ಧಾನ್ಯ ಅಥವಾ ಅಡಿಕೆಯನ್ನು ತೆಗೆದುಕೊಳ್ಳುವಾಗ ದೊಡ್ಡ ಸೇರು ಕೊಡುವಾಗ ಚಿಕ್ಕ ಸೇರು ಬಳಸುತ್ತಿದ್ದರು. ಈ ರೀತಿಯ ವ್ಯಾಪಾರಿಗಳ ಮೋಸವನ್ನು ಕಂಡು ಅನೇಕರು ಪ್ರತಿಭಟಿಸಲು ಪ್ರಾರಂಭಿಸಿದರು. ಅವರಲ್ಲಿ ಮಣ್ಣತ್ತಿ ದಿ. ನಾರಾಯಣಭಟ್ಟರು ಪ್ರಮುಖರು. ಇವರು ಜಾತ್ರೆಯಲ್ಲಿ ವ್ಯಾಪಾರಸ್ಥರು ಜನರಿಗೆ ಮೋಸ ಮಾಡುವುದನ್ನು ಕರಪತ್ರಗಳಲ್ಲಿ ಮುದ್ರಿಸಿ ಜನರಿಗೆ ಹಂಚಿದರು. ಲಾವಣಿ ಕಟ್ಟಿ ಹಾಡಿದರು, ಲಾವಣಿಯ ಒಂದು ತುಣುಕು ಹೀಗಿದೆ.

*ಅಂದ ಚೆಂದ ಚಂದ್ರಗುತ್ತಿ*
*ದೊಡ್ಡ ಸಣ್ಣವರೆಲ್ಲ ಕೇಳಿ*
*ಬಾಳಮಜಕೂರ* ||

*ದೇವಿ ಜಾತ್ರೆ ಆದ ಮೇಲೆ*
*ಅಡಿಕೆ ಜಾತ್ರೆ ನಡೆಯೋ ಕಾಲ* |
*ಮಣಕಾಲೂರಿ ಮಂಡಿಯೂರಿ*
*ಅಡ್ಡೆ ಕೊಟ್ಟಾರೆ*

ಕ್ರಮೇಣ ಜನರು ಧಾನ್ಯ, ಧಾನ್ಯಗಳ ಕೊಡುಕೊಳ್ಳುವಿಕೆ ಪದ್ಧತಿಯನ್ನು ನಿಲ್ಲಿಸಿದರು. ಹಣ ಕೊಟ್ಟು ವ್ಯವಹರಿಸುವ ಪದ್ಧತಿ ರೂಢಿಗೆ ಬಂತು. ಚಂದ್ರಗುತ್ತಿ ಜಾತ್ರೆ ಮಲೆನಾಡಿನ ಜನತೆಗೆ ಪ್ರಮುಖ ವ್ಯಾಪಾರ ಕೇಂದ್ರವಾಗುವುದರ ಜೊತೆಗೆ ತಮ್ಮ ಆಸರಿಕೆ, ಬೇಸರಿಕೆಗಳನ್ನು ಕಳೆದುಕೊಳ್ಳುವಂತೆ, ಸಾಂಸ್ಕೃತಿಕ ಕೇಂದ್ರವೂ ಆಗಿತ್ತು. ಜನಪದ ಕಲಾವಿದರಿಗೆ ತಮ್ಮ ಕಲೆಗಳನ್ನು ಪ್ರದರ್ಶನ ನೀಡಿ ಹಣ ಸಂಪಾದಿಸುವ ಆಶ್ರಯ ತಾಣವಾಗಿತ್ತು.

## ಮಲೆನಾಡಿನ ಜನಪದ ಗೀತೆಗಳಲ್ಲಿ ಗುತ್ತಿಸೀಮೆ

ಚಂದ್ರಗುತ್ತಿ ಮಲೆನಾಡಿನ ಜನಪದ ಗೀತೆಗಳಲ್ಲಿ ಗುತ್ತಿಸೀಮೆ ಗುತ್ತಿ ಎಂದೇ ಪ್ರಸಿದ್ಧವಾಗಿದೆ. ಜನಪದರು ರೇಣುಕಾಂಬೆಯನ್ನು ಗುತ್ಯಮ್ಮ, ಗುತ್ತಿಕನ್ನಮ್ಮ ಎಂದು ಕರೆಯುತ್ತಾರೆ. ತಮ್ಮ ಮಕ್ಕಳಿಗೆ ಗಂಡು ಮಕ್ಕಳಾದರೆ ಕನ್ನಪ್ಪ, ಗುತ್ಯಪ್ಪ ಎಂದೂ ಹೆಣ್ಣು ಮಕ್ಕಳಿಗೆ ಕನ್ನಮ್ಮ, ಗುತ್ಯಮ್ಮ ಎಂದು ಹೆಸರಿಡುತ್ತಾರೆ. ಮಲೆನಾಡಿನ ಜನಪದರ ಶುಭಕಾರ್ಯಗಳಿಗೆ ಗುತ್ತೀ ಸೀಮೆಯಿಂದ ವಸ್ತುಗಳು ಬಂದರೆ ಮಾತ್ರ ಇವರಿಗೆ ತೃಪ್ತಿ ಮತ್ತು ಸಮಾಧಾನ. ಗುತ್ತಿ, ಗೋದೆಗಳು ಜನಪದ ಗೀತೆಗಳಲ್ಲಿ ಅನೇಕ ಸಾರಿ ಉಲ್ಲೇಖವಾಗಿವೆ. ಗಂಡು ಮಕ್ಕಳ ಕೂದಲು ತೆಗೆಸಲು, ಹೆಣ್ಣು ಮಕ್ಕಳಿಗೆ ಕಿವಿ, ಮೂಗು, ಚುಚ್ಚಿಸಲು, ಇಲ್ಲಿಯವರು ಚಂದ್ರಗುತ್ತಿಗೆ ಹೋಗಬೇಕು. ಕುಟುಂಬದಲ್ಲಿ ನಡೆಯುವ ಪ್ರತಿಯೊಂದು ಶುಭ ಕಾರ್ಯಗಳಿಗೆ ದೇವಿಯ ಅಪ್ಪಣೆ, ಅನುಗ್ರಹ ಪಡೆಯುತ್ತಾರೆ. ಹಬ್ಬ, ಹರಿದಿನಗಳಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ಹಿತ್ತಾಳೆ ಗಿಂಡಿಯಲ್ಲಿ ಕಲಶ ಸ್ಥಾಪಿಸುವ ಮೂಲಕ ಅಮ್ಮನನ್ನು ತಂದು ಪೂಜಿಸುತ್ತಾರೆ.

ಮಲೆನಾಡಿನ ಮದುವೆ ಹಾಡುಗಳಲ್ಲಿ ಗುತ್ತಿಯ ಪ್ರಸ್ತಾಪ ಅನೇಕ ಬಾರಿ ಬರುತ್ತದೆ. ಮದುವೆಯ ಮೊದಲು ವಧೂವರರಿಗೆ ಎಣ್ಣೆ, ಅರಿಶಿನ ಹಚ್ಚಿ ಸ್ನಾನ ಮಾಡಿಸುವುದು, ಎಣ್ಣೆರಿಶಿನ ಶಾಸ್ತ್ರ. ಈ ಶಾಸ್ತ್ರಕ್ಕೆ ತಮ್ಮ ಹಿತ್ತಲಲ್ಲಿ ಬೆಳೆದ ಅರಿಶಿನ ಶುದ್ಧವಾಗಿಲ್ಲ. ಅಂದವಾಗಿಲ್ಲವೆಂದು ಗುತ್ತಿಗೆ ಓಲೆ ಬರೆದು ಅರಿಶಿನ ತರಿಸುತ್ತಾರೆ.

*ಹಿತ್ಲಾಗಾಲರಸಣ ಅಂದವಿಲ್ಲಂದ್ಹೇಳಿ*
*ಗುತ್ತಿಗೊಂದ್ವಾಲೆ ಬರದಾರೆ । ಸುವ್ವಿ*
*ಗುತ್ತಿಗೊಂದ್ವಾಲೆ ಮತ್ತೇನಂದು ಬರದಾರೆ*
*ಗುತ್ತೀ ಅರಸಣ ಬರಲೆಂದೆ । ಸುವ್ವಿ*
*ಗುತ್ತೀಯ ಅರಸಣ ಬರಲೆಂದವನ್ಹಡದವ್ವಾ*
*ಗುತ್ತೀಗೊಂದ್ವಾಲೆ ಬರದಾದೆ ।।ಸುವ್ವಿ।।*

ಮದುವೆಯಲ್ಲಿ ವಿಶೇಷವಾಗಿ ಬಾಸಿಂಗ-ತೊಂಡಿಲುಗಳು ಬೇಕು. ಗುಡಿಗಾರರು ಬಾಸಿಂಗ ತೊಂಡಿಲುಗಳನ್ನು ತಯಾರಿಸುವುದರಲ್ಲಿ ನಿಪುಣರು. ಬಾಸಿಂಗ-ತೊಂಡಿಲುಗಳನ್ನು ಗುತ್ತಿಯ ಗುಡಿಗಾರನೇ ಕಳುಹಿಸಬೇಕು. ಧಾರೆಯ ದಿವಸ ಬಾಸಿಂಗ ಬರುವುದು, ಸ್ವಲ್ಪ ತಡವಾದಾಗ ಆತಂಕಗೊಂಡು

*ಬಾಸಿಂಗ ಕೇಳಿ ಏಸೊಂದು ದಿನವಾಗಿ*
*ಬಾಸಿಂಗ ನಮ್ಮನಿಗೆ ಬರಲಿಲ್ಲ । ಗುಡಿಗಾರ*

*ಏಸಷ್ಟು ದ್ವರು ಹೊಡಕೋದ್ಲೋ ||*
*ಏಸಮ್ಮೆ ಹೊಡಿಯಾಕೆ ನಾ ಮಾಡಿದ ತಪ್ಪೇನು*
*ಹೆರಳೆದ್ದು ಗೈದ ಬೆಳತಂಕ*
*ಗುತ್ತೀಯ ಗುಡಿಗಾರ ಅಪ್ಪಯ್ಯ ಗೆಣೆಕಾರ*
*ಬಾಸಿಂಗ ನಮ್ಮ ವಿಗೆ ಬರಲಿಲ್ಲ || -ವೆಂದು ಹೇಳುತ್ತಾರೆ.*

ಮದುವೆಯಲ್ಲಿ ವಧೂವರರು ಚೆಂಡುವಾಡುವಾಗ ಗುತ್ತಿಯಿಂದ ಮಣಿಚೆಂಡು ತರಿಸುತ್ತಾರೆ.

*ಗುತ್ತೀಗೊಂದ್ಯಾಲೆ ಮತ್ತೇನಂದು ಬರದಾರೆ*
*ಮುತ್ತೀನ ಮಣಿ ಚೆಂಡು ಛರಲೆಂದೆ ||*

ವಧೂವರರಿಗೆ ದಾರೆ ನಡೆಸುವಾಗ ದಿಬ್ಬಣ ಯಾವುದೇ ಊರಿಂದ ತಂದರೂ, ಗುತ್ತಿಯಿಂದಲೇ ದಿಬ್ಬಣ ಬಂದಿದೆ ಎಂದು ಇವರ ಭಾವನೆ.

*ಗುತ್ತೀಯ ಹೊಳಿಯಾಗ ಬಟ್ಟೆ ಮಡಿ ಮಾಡಾಗ |*
*ಮುತ್ತೀನುಂಗುರವ ಮರತೇನು|| ತಮ್ಮಯ್ಯ*
*ನಿಲ್ಲೀಸೊ ನೀಲ ಕುದುರೆಯ ||*
*ಗುತ್ತೀಯ ದಿಬ್ಬಣ ಘಮ್ಮನೆ ಬರುವಾಗ*
*ಗುತ್ತೀಯ ಸಾಡ ನವಿಲೆ ಬೆದಿರ್ಯಾವೆ | ತಮ್ಮಯ್ಯ*
*ಈ ಹೊತ್ತಿನ ಮೇವ ತೊರದಾವೆ ||*

ಮಲೆನಾಡಿನಲ್ಲಿ ಎತ್ತಿನ ಬಂಡಿಗಳ ಮೇಲೆ ಮದುವೆ ದಿಬ್ಬಣ ಹೋಗುವುದನ್ನು ನೋಡುವುದೇ ಸೊಗಸು. ಮನಸ್ಸಿಗೆ ಆನಂದ. ದಿಬ್ಬಣ ನೇರವಾಗಿ ವಧುವಿನ ಮನೆಗೆ ಹೋಗುವ ಹಾಗಿಲ್ಲ. ಬಿಡಾರದ ಮನೆಯಲ್ಲಿ ಸ್ವಲ್ಪ ಹೊತ್ತು ತಂಗಬೇಕು. ಸಾಮಾನ್ಯವಾಗಿ ಮದುವೆಗಳು ಬೇಸಿಗೆ ಕಾಲದಲ್ಲಿ ನಡೆಯುವುದರಿಂದ ಸೆಖೆಯನ್ನು ತಡೆಯಲಾರದೆ ವರನ ಅಕ್ಕ ತಂಗಿಯರು ವಧುವಿನ ತಾಯಿಗೆ ಬಣ್ಣದ ಬೀಸಣಿಗೆಯನ್ನು ಕಳುಹಿಸು ಎನ್ನುತ್ತಾರೆ.

*ಗುತ್ತೀಯ ಸೀಮಿಂದ ಉತ್ತುಂಬರ ಮಗ ಬಂದ್ರೆ*
*ಮುತ್ತೀನ ರಜವರದಾಗೊರಿಗ್ಯಾರೆ | ಸೋಬನ್ನಿರೆ*
*ಮುತ್ತೀನರಜವರದಾಗೋರಿಗ್ಯಾರೆ ಮದುಮಗ*
*ಸಬೆಯೇ ಬಹಳಂದ ಮದುಮಗ || ಸೋಬನ್ನಿರೆ |*
*ಸಬೆಯೇ ಬಹಳಂದ ಮದುಮ್ಮಗನ ಬಲಕೆ ಕುಂತ*

ಅಕ್ಕಮ್ಮ ಬೆವರ ವರಿಸ್ಯಾಳೆ ।। ಸೋಬಣ್ಣಿರೆ ।।
ಅಕ್ಕಮ್ಮ ಬೆವರ ವರಿಸಿ ಏನಂದಾಳೆ
ಬಣ್ಣದ ಬೀಸಣಿಗೆ ಕಳಾಗತ್ತೆ ।।
ಬಣ್ಣದ ಬೀಸಣಿಗೆ ನಮ್ಮ ನಾಡಾಗಿಲ್ಲ
ಹಾಳೆ ಬೀಸಣಿಗೆ ಕಳುಗೇನೋ ।। ಸೋಬಣ್ಣಿರೆ ।।

ಗುತ್ತೀಯ ಸೀಮಿಗೆ ಉತ್ತುಂಬರ ಮಗಳಂದ್ರೆ
ಮಾತಲಿ ಸಮರಂತರ ಮಗಳಂದ್ರೆ । ಸೋಬಣ್ಣಿರೆ ।
ಮಾತಿಲಿ ಸಮರಂತರ ಮಗಳು ಪಾರುವತಿಗೆ
ಬಣ್ಣದ ಬೀಸಣಿಗೆ ಬರವೇನೋ ।। ಸೋಬಣ್ಣಿರೆ ।।

ಮಲೆನಾಡಿನವರು ಮಕ್ಕಳ ತಲೆಕೂದಲನ್ನು ತೆಗೆಸುವುದು, ಗುತ್ತಿ ಕನ್ನಮ್ಮನ ಸನ್ನಿಧಿಯಲ್ಲಿ. ದೇವರಿಗೆ ಹೋಗುವ ಮುನ್ನ ಮನೆಯ ಗೋಡೆಗಳಿಗೆ ಜೇಡಿ ಕೆಮ್ಮಣ್ಣು ಬಳಿದು ಸುಂದರಗೊಳಿಸಿ, ಮನೆಯಲ್ಲಿರುವ ಹಳೆಯ ವಸ್ತ್ರಗಳನ್ನು ತೊಳೆದು, ಇಡೀ ಮನೆಯನ್ನೇ ಸ್ವಚ್ಛಗೊಳಿಸುವರು. ಶರಣೆ ಕನ್ನಮ್ಮನ ಗುಡಿಗೆ ಎತ್ತಿನ ಬಂಡಿಯಲ್ಲಿ ಹಣ್ಣು, ಕಾಯಿ, ಸಿರಿಗಂಧ ಹೂವು, ಹರಕೆ ದುಡ್ಡು, ತುಪ್ಪದ ಕೊಡಗಳನ್ನೆಲ್ಲಾ ತುಂಬಿಕೊಂಡು ಸಂಭ್ರಮ, ಸಡಗರದಿಂದ ಗುತ್ತೀಗೆ ಹೋಗುತ್ತಾರೆ.

ಶರಣೆ ಕನ್ನಮ್ಮಾಗೆ ಕೈಯಾ
ಮುಗಿದೇವು ನಾವು ನಿಮಗೆ ।।

ಗುತ್ತೀಗೆ ಹೋಗಾ ಆರೇಳು ದಿನದುಳ್ಳೆ
ಜೇಡಿ ಕೆಮ್ಮಣ್ಣು, ಮೊದಾಲ್ಬೊಯ್ದು ।।

ಒಂದಾ ಬಂಡಿಲಿ ಹಣ್ಣು, ಒಂದಾ ಬಂಡಿಲಿ ಕಾಯಿ
ಮುಂದೀನ ಬಂಡ್ಯಾಗೆ ಸಿರಿಗಂಧ ।। ತಕ್ಕೊಂಡು
ಬಾಲನ ತಲೆ ಇಳಸೋಕ್ಹೊರಟಾರೆ ।। ಶರಣೆ ।।

ಒಂದಾ ಬಂಡಿಲಿ ಹೂವು ।। ಒಂದಾ ಬಂಡಿಲಿ ಕಾಯಿ
ಮುಂದೀನ ಬಂಡ್ಯಾಗೆ ಸಿರಿಗಂಧ ।। ತಕ್ಕೊಂಡು
ಈಡಾಡುತಾ ಬಂದ್ರೆ, ಇಡಿಗಾಯ ।। ಶರಣೆ ।।

ಗುತ್ತಿ ಕನ್ನಮ್ಮನ ಬಾಗಿಲ ಮೆಟ್ಲಿಲಮ್ಯಾಲೆ
ಇಪ್ಪತ್ತೊಂದ್ಹಣತೆ ಜಗಜ್ಯೋತಿ । ಹಚ್ಚಿದಾರೆ
ತಾಯಿ ಕನ್ನಮ್ಮನ ಎದುರಿಗೆ ।। ಶರಣೆ ।।

*ಅಪ್ಪನ ಕಾಲದ ಅಜ್ಜಯ್ಯ ಮಾಡಿದ ಹರಕೆ*
*ತುಪ್ಪದ ಕೊಡದಾಗೆ ಉಳದಾವೆ । ಕನ್ನಮ್ಮನ*
*ಹರಕೇಯ ದುಡ್ಡ ಸಲಿಸೇವು ।। ಶರಣೆ ।।*

*ಹರಕೆ ಅನ್ನಾದೊಂದು ಎತ್ತಲ್ಲ ಎಮ್ಮೆಲ್ಲ*
*ಹರಕೆಯ ದುಡ್ಡ ಸಲಿಸೇವು । ಕನ್ನಮ್ಮ*
*ಒಪ್ಪೀಸಿಕೊಳ್ಳೆ ಹರಕೇಯ ।।ಶರಣೆ ।।*

ಮಲೆನಾಡಿನ ಜನರು ಕುಟ್ಟುವಾಗ, ಬೀಸುವಾಗ, ಮದುವೆ-ಮುಂಜಿ, ಹುಟ್ಟು-ಸಾವು, ಸೀಮಂತ, ಮೈನೆರೆದಾಗ ಗುತ್ತಿಯ ಗುತ್ಯಮ್ಮಳನ್ನು ತಮ್ಮ ಜನಪದ ಗೀತೆಗಳಲ್ಲಿ ನೆನೆಸಿದ್ದಾರೆ. ಕನ್ನಮ್ಮಳನ್ನು ತಾಯಿ, ಶರಣೆ, ದೇವಿ, ತಮ್ಮನ್ನೆಲ್ಲಾ ರಕ್ಷಿಸುವ ಮಹಾಮಾತೆ ಎಂದು ನಂಬುತ್ತಾರೆ. ಕನ್ನಮ್ಮ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿ ಅವರ ಬದುಕಿಗೆ ಆಸರೆಯಾಗಿದ್ದಾಳೆ.

ಬೀಸುವಾಗ ಇಲ್ಲಿಯವರು ಹೇಳುವ ಒಂದು ಗೀತೆ ಹೀಗಿದೆ.

*ನಿಲ್ಲೊ ನಿಲ್ಲೊ ಮನವ । ನೀರ ಕುಡಿಯಲು ಮನವೆ ।*
*ಕಲ್ಲಾಗೆ ಮನವೆ ಕಲಿಯಾಗೆ । ಗುತ್ತೀಯ*
*ಕಲ್ಲ ಕ್ವಾಟೀಗೆ ಕದವಾಗೆ ।।*

*ಮಾಯಾಕಾರತಿ ನಿನ್ನ ಮಾಯಾವ ತಿಳೀಲಾರೆ*
*ಹಾವೈತೆ ನಿನ್ನ ಜಡಿಯಾಗೆ ! ನಾಗರದ*
*ಹೆಡಿಯೈತೆ, ನಿನ್ನ ಉಡಿಯಾಗೆ ।।*

*ಗುತ್ತೀಯಾ ಕನ್ನವ್ವಾ ಸಾಕಿ ಬಿಟ್ಟಾಳ ನವಿಲ*
*ಗಂಧಾದ ಸಾಲಾಗೆ ಕೊಳಲಾಡಿ । ಬರುವಾಗ*
*ಸೀತೆ ಮೇವು ಹಾಕಿ ಕರದಾಳೆ ।।*

*ಬಿಚ್ಚಾದ ತಲೆಯೊಳೆ ಬೇವಿನ ಉಡಿಗ್ಯೊಳೆ*
*ಗುತ್ಯಮ್ಮ ನಿನ್ನ ಹರಕೆಯ । ಬಂದಾವೆ*
*ಒಪ್ಪೀಸಿಕೊಳ್ಳೆ ಹರಕೆಯ ।।*

*ಒಪ್ಪೀಸಿಕೊಳ್ಳಾಕೆ ಎತ್ತಲ್ಲ ಎಮ್ಮೆಲ್ಲ*
*ಹತ್ತಿ ಬಾ ಮಗಳೆ ಶಿಖರವಾ । ಬಾಗಿಲ ಮುಂದೆ*
*ಈಡಾಡುತಾ ಬಾರೆ ಇಡಿಗಾಯ ।*

*ಗುತ್ತಿ ಕನ್ನವ್ವಾಳ ಮಜ್ಜನದ ಬಾಂವ್ಯಾಗೆ*
*ಕೆಂಬೇರು ಕಂಚ ಬೆಳಿಗ್ಯಾರೆ । ಏನಂದಾರೆ*
*ಗೆಜ್ಜೆ ಕಾಲ್ಮಗನ ಕೊಡು ನಮಗೆ ॥*

*ನಿಸ್ತ್ರೆ ತಂಗ್ಯವ್ವಾಗ ಮಕ್ಕಳ ಕೊಟ್ಟುದಕ*
*ಒಕ್ಕಳ ಕಡಲಿ ಪನಿವಾರ । ಗುತ್ಯಮ್ಮಗೆ*
*ಹುಟ್ಟುಡಿಗೆ ಸೇವೆ ಸಲಿಸೇನು ॥*

*ಒಳ್ಳೀಗೆ ಮುಕ್ಯಾಗಿ ಯಾರನ್ನ ನೆನೆಯಲಿ*
*ಕಲ್ಲ ಮಾಳೀಗಿ ಶರಣೇಯ । ಗುತ್ಯಮ್ಮಳ*
*ಸಲ್ಲಿಗೊಮ್ಮೊಮ್ಮೆ ನೆನದೇವು ॥*

## ಶಿವಮೊಗ್ಗ ಜಿಲ್ಲೆಯ ಗುತ್ತಿ ಕ್ಷೇತ್ರಗಳು

### ಅಮ್ಮನ ಘಟ್ಟ

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಕೋಡೂರು ಎಂಬ ಹಳ್ಳಿಯ ಸಮೀಪ ಅಮ್ಮನ ಘಟ್ಟವಿದೆ. ಎತ್ತರವಾದ ಗುಡ್ಡದಲ್ಲಿ ಒಂದು ದೊಡ್ಡ ಬಂಡೆಯ ಕೆಳಗಿರುವ ಗುಹೆಯಲ್ಲಿ ರೇಣುಕಾಂಬೆ ನೆಲೆಸಿದ್ದಾಳೆ.

ಪರಶುರಾಮ ತಂದೆಯ ಆಜ್ಞೆಯಂತೆ ತಾಯಿಯ ಶಿರವನ್ನು ಕಡಿದ ನಂತರ ಜಮದಗ್ನಿ ಪರಶುರಾಮ ತನ್ನ ಆಜ್ಞೆಯನ್ನು ಪಾಲಿಸಿದ್ದಕ್ಕಾಗಿ ಸಂತೋಷಗೊಂಡು ನಿನಗೆ ಬೇಕಾದ ವರವನ್ನು ಕೇಳು ಎನ್ನುತ್ತಾನೆ. ಪರಶುರಾಮ ತಾಯಿಗೆ ಪುನರ್ಜನ್ಮ ನೀಡು ಎಂದು ಕೇಳುತ್ತಾನೆ. ರೇಣುಕೆ ಪುನರ್ಜನ್ಮ ಪಡೆದು ನಂತರ ಇಲ್ಲಿ ನೆಲೆಸಿದ್ದಾಳೆ ಎಂದು ಇಲ್ಲಿಯವರ ನಂಬಿಕೆ.

ಗುಹೆಯ ಒಳಗೆ ಎರಡು ಇಂಚು ಎತ್ತರ ಎರಡು ಇಂಚು ಅಗಲವಿರುವ ಶ್ರೀಚಕ್ರದಾಕಾರದಂತೆ ದುಂಡಾಗಿದ್ದು ಚಕ್ರದ ಮಧ್ಯೆ ಒಂದು ಸುವರ್ಣ ರೇಖೆ ಕಾಣಿಸುತ್ತದೆ. ಇದಕ್ಕೆ ಎರಡುವರೆ ಇಂಚು ಎತ್ತರ ನಾಲ್ಕು ಇಂಚು ಅಗಲದ ಬೆಳ್ಳಿಯ ಮುಖವಾಡವನ್ನು ಹಾಕಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಬಂಗಾರದ ಮುಖವಾಡವನ್ನು ಹಾಕುತ್ತಾರೆ. ಇದರ ಎತ್ತರ ಎರಡು ಇಂಚು, ಅಗಲ ಮೂರು ಇಂಚು ಇದೆ. ಜಾತ್ರೆಯಲ್ಲಿ ಮಾತ್ರ ನಾರುಬಟ್ಟೆಯನ್ನು ಹೊದಿಸಿರುತ್ತಾರೆ. ಗುಹೆಗೆ ಹೊಂದಿಕೊಂಡಂತೆ ಒಂದು ಚಿಕ್ಕ ಗರ್ಭಗುಡಿ, ಚಂದ್ರ ಶಾಲೆಗಳಿವೆ.

ಇಲ್ಲಿ ಈ ದೇವತೆಗೆ ಚೆನ್ನಮ್ಮಲ್ಲಮ್ಮ, ರೇಣುಕಾ ದುರ್ಗಾ ಪರಮೇಶ್ವರಿ, ರೇಣುಕಾಂಬ ಎಂದೂ ಕರೆಯುತ್ತಾರೆ. ಗುಹೆಯ ಎಡಭಾಗದಲ್ಲಿ ಜಮದಗ್ನಿಯ ಆಶ್ರಮವಿದೆ. ಗುಹೆಯ ಒಳಗೆ ಬಲಗಡೆ ದೇವಿಯು ಗುಹೆಗೆ ನಡೆದು ಬಂದಿರುವ ಸುರಂಗ ಮಾರ್ಗವಿದೆ. ದೇವಿಯ

ಗುಹೆಯ ಸುತ್ತ ಮುತ್ತ ಉರಿಬೀರ, ಭೂತ, ಚೌಡಿ, ಮಾಸ್ತಿ, ನಾಗರ ಮುಂತಾದ ದೇವತೆಗಳ ಕಲ್ಲುಗಳಿವೆ. ಎದುರುಗಡೆ ಹಳೆ ಅಮ್ಮನ ಘಟ್ಟವೆಂದು ಹೇಳುವ ಗುಡ್ಡವಿದೆ.

ಭಾದ್ರಪದ ಶುದ್ಧ ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗೆ ಹದಿನೈದು ದಿವಸ ಜಾತ್ರೆ ನಡೆಯುತ್ತದೆ. ಜಾತ್ರೆಯ ದಿವಸ ಬೋವಿ (ಗಂಗಾಮತ) ಜನಾಂಗದವರೊಬ್ಬರಿಗೆ ಕಂಕಣ ಕಟ್ಟುತ್ತಾರೆ. ಈತ ಹದಿನೈದು ದಿವಸ ದೇವಸ್ಥಾನದ ಆವರಣದಲ್ಲಿ ನೇಮಿಷ್ಠನಾಗಿರಬೇಕು.

ಜಾತ್ರೆಯಲ್ಲಿ ಮಂಗಳವಾರ ಮತ್ತು ಶುಕ್ರವಾರ ಇಪ್ಪತ್ತೈದು ಸಾವಿರದಷ್ಟು ಜನ ಸೇರುತ್ತಾರೆ. ಬಳೆ ಮತ್ತು ಆಟದ ಸಾಮಾನುಗಳ ಅಂಗಡಿಗಳು ಹೋಟೆಲ್ಲುಗಳು ಸೇರುತ್ತವೆ.

ಇತರೆ ದಿವಸಗಳಲ್ಲಿ ವಾರದಲ್ಲಿ, ಮಂಗಳವಾರ ಮತ್ತು ಶುಕ್ರವಾರ ಮಾತ್ರ ಪೂಜೆ ನಡೆಯುತ್ತದೆ. ನವರಾತ್ರಿಯಲ್ಲಿ ಚಂಡಿಕಾ ದುರ್ಗಾ ಪಾರಾಯಣ, ಕಲ್ಪೋಕ್ತ ಪೂಜೆ, ಅನ್ನ, ಸಾರು, ಪರಮಾನ್ನದ ನೈವೇದ್ಯ ಪೂಜೆ, ಅನ್ನ ಸಂತರ್ಪಣೆ ಮತ್ತು ವಿಜಯದಶಮಿ ದಿವಸ ಚಂಡಿಹೋಮ ನಡೆಯುತ್ತವೆ. ದೀಪಾವಳಿಯಲ್ಲಿ ದೀಪೋತ್ಸವ ನಡೆಯುತ್ತದೆ. ಪ್ರಾಣಿಗಳನ್ನು ಬಲಿ ಕೊಡುವುದಿಲ್ಲ, ಹಾಲು-ಹಣ್ಣು, ಪರಮಾನ್ನ, ಸಿಹಿ ತಿಂಡಿಗಳನ್ನು ಮಾತ್ರ ನೈವೇದ್ಯ ಮಾಡುತ್ತಾರೆ.

ಜಾನುವಾರುಗಳು ಕಳೆದು ಹೋದರೆ ಮತ್ತು ಅವುಗಳಿಗೆ ಬರುವ ಕಾಯಿಲೆಗಳಿಗೆ, ಮಕ್ಕಳಿಗೆ ಕಜ್ಜಿ, ತುರಿ, ಬಾವು, ಕುರು, ಕಣ್ಣು ಬೇನೆಗಳ ನಿವಾರಣೆಗಾಗಿ ಸಂತಾನಕ್ಕಾಗಿ ದೇವಿಗೆ ಭಕ್ತಾದಿಗಳು ಹರಕೆ ಹೊರುತ್ತಾರೆ.

### ಗುತ್ತೀಗುಡಿ

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ನಗರಕ್ಕೆ ಒಂದು ಕಿಲೋಮೀಟರು ದೂರದಲ್ಲಿ ಉತ್ತರ ದಿಕ್ಕಿನಲ್ಲಿ ಒಂದು ದೊಡ್ಡ ಗುಡ್ಡ ಇದೆ. ಗುಡ್ಡದ ಮೇಲಿರುವ ದೊಡ್ಡ ಬಂಡೆ ಕಲ್ಲುಗಳ ಮಧ್ಯೆ ಒಂದು ಗುಹೆಯಿದ್ದು, ಗುಹೆಯ ಒಳಗೆ ಗುತ್ಯಮ್ಮ ನೆಲೆಸಿದ್ದಾಳೆಂದು ಪ್ರತೀತಿ.

ಗುಹೆಯ ನೆಲದ ಮೇಲಿಂದ ಉದ್ಭವಿಸಿದ ಲಿಂಗಾಕೃತಿಯ ಕಲ್ಲಿಗೆ ಬೆಳ್ಳಿಯ ಮುಖವಾಡವನ್ನು ಹಾಕಿರುವರು. ಕಲ್ಲಿನ ಬಂಡೆಗೆ ಹೊಂದಿಕೊಂಡಂತೆ ದೇವಸ್ಥಾನವಿದ್ದು ಇದು ನೆಲದಿಂದ ಮೂವತ್ತು ಅಡಿ ಎತ್ತರದಲ್ಲಿದೆ.

ಗುಡಿಯ ಮುಂಭಾಗದಲ್ಲಿ ಒಂದು ಅಡಿ ಎತ್ತರ ಆರು ಇಂಚು ಅಗಲದ ಸಪ್ತಮುಖಿ ನಾಗರಕಲ್ಲು ಇದೆ. ಈ ನಾಗರ ಕಲ್ಲಿನ ಹಿಂಭಾಗದಲ್ಲಿ ಒಂದೂವರೆ ಅಡಿ ಎತ್ತರ, ಒಂದು ಅಡಿ ಅಗಲದ ಕಲ್ಲಿನ ಪ್ರಭಾವಳಿಯಿದ್ದು, ಇದರ ಮೇಲ್ಭಾಗದಲ್ಲಿ ಸಿಂಹ ಲಲಾಟವಿದೆ. ಎರಡು ಅಡಿ ಉದ್ದ ಎರಡು ಅಡಿ ಅಗಲ ಆರು ಇಂಚು ಎತ್ತರದ ಕಲ್ಲಿನ ಪಾಣಿ ಪೀಠದ ಮೇಲೆ ನಿಲ್ಲಿಸಿದ್ದಾರೆ.

ದೇವಾಲಯದ ಮುಂದೆ ಎಡಭಾಗದಲ್ಲಿ ಕಾಲಭೈರವ ಹಾಗೂ ಹುಲಿದೇವರುಗಳಿವೆ. ಕಾಲಭೈರವ ಮೂರ್ತಿಯ ಎತ್ತರ ಎರಡು ಅಡಿ ಅಗಲ ಒಂದೂವರೆ ಅಡಿ, ನಾಲ್ಕು ಕೈಗಳಿದ್ದು ಮುಂದಿನ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ರುಂಡವಿದ್ದು ಇದರಿಂದ ಸುರಿಯುತ್ತಿರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿರುವ ಚಿತ್ರವಿದೆ. ಹಿಂದಿನ ಬಲಗೈಯಲ್ಲಿ ಡಮರುಗ ಎಡಗೈಯಲ್ಲಿ ತ್ರಿಶೂಲಗಳಿವೆ. ಭೈರವನಿಗೆ ಮುಡಿ ಕಟ್ಟಿದ್ದು, ಇಳಿಬಿಟ್ಟ ಶಲ್ಯ, ಕಂಠಹಾರ, ಸೊಂಟದಲ್ಲಿ ನಡಪಟ್ಟಿ, ಕಸೆ ಉಡಿಗೆ, ಕಾಲು ಬಾಸಿಂಗಗಳಿವೆ. ಪ್ರಭಾವಳಿಯ ಬಲಕ್ಕೆ ಚಂದ್ರ ಎಡಕ್ಕೆ ಸೂರ್ಯರಿದ್ದಾರೆ.

ಹುಲಿ ದೇವರಿಗೆ ರೈತರು, ತಮ್ಮ ದನಕರುಗಳನ್ನು ಹಿಡಿದು ಕೊಲ್ಲದಿರಲಿ ಮತ್ತು ಹಸುಗಳು ಸರಿಯಾಗಿ ಹಾಲು ಕೊಡುವಂತಾಗಲಿ ಎಂದು ಹರಕೆ ಹೊರುತ್ತಾರೆ. ಹರಕೆ ನೆರವೇರಿಸುವಾಗ ಕಲ್ಲಿನ ಹುಲಿಗೆ ಬೆಣ್ಣೆ ಹಚ್ಚುತ್ತಾರೆ.

ದೇವಾಲಯದ ಎದುರು ಸುಮಾರು ಇಪ್ಪತ್ತೈದು ಅಡಿ ದೂರದಲ್ಲಿ ಅಮ್ಮನವರ ಪಾದುಕೆಗಳಿವೆ. ಇವುಗಳಿಂದ ಸ್ವಲ್ಪ ದೂರದಲ್ಲಿ ಹಲಸಿನ ಮರದ ಕೆಳಗೆ ಉರಿಬೀರನಿದ್ದಾನೆ. ಮೈದಾನದಲ್ಲಿ, ತೊಟ್ಟಿಲು ಸಿಡಿಕಂಬವಿದೆ. ಈ ಕಂಬದ ಬುಡದಲ್ಲಿ, ಸಿಡಿಭೂತವಿದೆ. ಬಲಭಾಗಕ್ಕೆ ಶೀಲವಂತ ಚೌಡಿ ನೆಲಸಿದ್ದಾಳೆ.

ಪ್ರತಿ ಮಂಗಳವಾರ ಮತ್ತು ಶುಕ್ರವಾರ ಸಿಡಿ ಆಚರಣೆ ನಡೆಯುತ್ತದೆ. ಹರಕೆ ಹೊತ್ತವರು ಮಕ್ಕಳನ್ನು ಸಿಡಿ ತೊಟ್ಟಿಲಲ್ಲಿ ಕೂರಿಸಿ ತಿರುಗಿಸುತ್ತಾರೆ. ಮಾಘ ಶುದ್ಧ ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗೆ ಹದಿನೈದು ದಿವಸ ಜಾತ್ರೆ ನಡೆಯುತ್ತದೆ.

ಪ್ರತಿ ಮಂಗಳವಾರ, ಶುಕ್ರವಾರ ಬ್ರಾಹ್ಮಣರು ಪೂಜೆ ಮಾಡುತ್ತಾರೆ. ಉಳಿದ ದಿವಸ ಬಳೆಗಾರ ಜೋಗಿ ಜನಾಂಗದವರು ಪೂಜೆ ಮಾಡುತ್ತಾರೆ. ನವರಾತ್ರಿಯಲ್ಲಿ, ಒಂಬತ್ತು ದಿವಸ, ನಿತ್ಯ ಪೂಜೆ ನಡೆಯುತ್ತದೆ. ಯುಗಾದಿ, ಶಿವರಾತ್ರಿಗಳಲ್ಲಿ ನೈವೇದ್ಯ ಪೂಜೆ.

ಹಿಂದೆ ಬೇವುಡುವ ಪದ್ಧತಿಯಿತ್ತು, ಈಗ ನಿಂತಿದೆ. ದೇವಿಗೆ ಹಾಲು ಹಣ್ಣು, ಪರಮಾನ್ನ ನೈವೇದ್ಯ ಮಾತ್ರ. ಕಾಲಭೈರವ ಮತ್ತು ಉರಿಬೀರರಿಗೆ ಕೋಳಿ ಕುರಿ ಬಲಿ ಕೊಡುತ್ತಾರೆ.

ಸಂತಾನ ಅಪೇಕ್ಷಿಸಿ, ಕಾಯಿಲೆ ಮತ್ತು ಸರ್ಪಸುತ್ತು ಆದವರು ಬೇಳು ಕಟ್ಟಿದರೆ ಗುಣಪಡಿಸುವಂತೆ ಹರಕೆ ಹೊರುತ್ತಾರೆ.

**ಬೆನ್ನಟ್ಟೆ ಗುತ್ಯಮ್ಮ**

ಹೊಸನಗರ ತಾಲ್ಲೂಕು ನಿಟ್ಟೂರು ಹತ್ತಿರವಿರುವ ಬೆನ್ನಟ್ಟೆ ಗ್ರಾಮದಲ್ಲಿ ಗುತ್ಯಮ್ಮ ದೇವಿಯ ಕ್ಷೇತ್ರವಿದೆ. ಬೆನ್ನಟ್ಟೆ ಗ್ರಾಮದಿಂದ ಒಂದು ಕಿಲೋಮೀಟರು ದೂರದಲ್ಲಿದ್ದ

ಗುತ್ಯಮ್ಮ ದೇವಿಯ ಮೂಲ ಸ್ಥಳ ಹಿರೇಭಾಸ್ಕರ ಅಣೆಕಟ್ಟಿನಿಂದ ಮುಳುಗಡೆಯಾಗಿರುವುದರಿಂದ ಬೆನ್ನಟ್ಟೆಗೆ ತಂದು ಸ್ಥಾಪಿಸಿದ್ದಾರೆ. ಈ ದೇವತೆಗೆ ದೇವಸ್ಥಾನವಿಲ್ಲ, ಅರ್ಧ ಭಾಗ ಹೆಂಚು, ಅರ್ಧ ಹುಲ್ಲು ಹೊದಿಸಿದ ಒಂದು ಗುಡಿಸಲು.

ಗುಡಿಸಲಿನಲ್ಲಿ ನಾಲ್ಕು ಅಡಿ ಉದ್ದ ಅಗಲದ ಮಣ್ಣಿನ ಗದ್ದುಗೆಯಿದೆ. ಈ ಗದ್ದುಗೆಯ ಮೇಲೆ ಹಿತ್ತಾಳೆ ತಂಬಿಗೆಯ ಮೇಲೆ, ಪೂರ್ಣ ಫಲವನ್ನಿಟ್ಟು ಕಲಶ ಸ್ಥಾಪಿಸಿ ಇದರ ಮುಂದೆ, ಎಂಟು ಇಂಚು ಎತ್ತರ, ನಾಲ್ಕು ಇಂಚು ಅಗಲದ ಪಂಚಲೋಹದ ಮುಖವಾಡವನ್ನಿಟ್ಟಿದ್ದಾರೆ.

ಗುತ್ಯಮ್ಮ ದೇವಿಯ ಬಲಗಡೆ ದುರ್ಗಾ ಪರಮೇಶ್ವರಿಯ ಶಿಲಾವಿಗ್ರಹವಿದೆ. ಮೂರು ಅಡಿ ಎತ್ತರ, ಒಂದೂವರೆ ಅಡಿ ಅಗಲದ ಈ ಮೂರ್ತಿಗೆ ಎಂಟು ಕೈಗಳು. ಬಲದ ಕೈಗಳಲ್ಲಿ, ತ್ರಿಶೂಲ, ಚಕ್ರ, ಬಾಕು, ಡಮರುಗ, ಎಡದ ಕೈಗಳಲ್ಲಿ ಶಂಖ, ಬಿಲ್ಲು, ಪರಶು, ಒಂದು ಕೈಯಲ್ಲಿ ಕೋಣದ ಶಿರವನ್ನು ಹಿಡಿದಿದೆ. ಬಲದ ಕೆಳಗೈಯಲ್ಲಿರುವ ಬಾಕುವಿನಿಂದ ರಕ್ಕಸನ ಎದೆಯನ್ನು ಇರಿದಿದೆ. ಬಲಗಾಲನ್ನು ಪೀಠದ ಮೇಲಿಟ್ಟು ಎಡಗಾಲನ್ನು ಕೋಣದ ಬೆನ್ನಿನ ಮೇಲೆ ಇಟ್ಟಿದೆ. ವಿಗ್ರಹದ ಕೆಳಭಾಗದಲ್ಲಿ ಎರಡು ಕಡೆ ಸಿಂಹಗಳಿವೆ. ಕಿವಿಯಲ್ಲಿ ಕರ್ಣಕುಂಡಲಗಳು, ತಲೆಯಲ್ಲಿ ಕಿರೀಟವಿದೆ. ವಿಗ್ರಹದ ಹಿಂಭಾಗದಲ್ಲಿ ಪ್ರಭಾವಳಿಯಿದ್ದು ಇದರ ಮೇಲುಗಡೆ ಕೀರ್ತಿಮುಖವಿದೆ, ತುಂಬಾ ಸುಂದರವಾದ ಶಿಲಾಮೂರ್ತಿ.

ದುರ್ಗಾ ಪರಮೇಶ್ವರಿಯ ಬಲಗಡೆ ಗಣಪತಿ ಮತ್ತು ಹೊಸದಾಗಿ ಪ್ರತಿಷ್ಠಾಪಿಸಿದ ದುರ್ಗೆಯ ಗುಡಿಯಿದೆ.

ಜನವರಿ, ಫೆಬ್ರುವರಿ ತಿಂಗಳಲ್ಲಿ ಬರುವ ಹುಣ್ಣಿಮೆ ದಿವಸ ಜಾತ್ರೆ ಪ್ರಾರಂಭವಾಗಿ ಹದಿನೈದು ದಿವಸಗಳವರೆಗೆ ನಡೆಯುತ್ತದೆ. ನಿತ್ಯಪೂಜೆ ನಡೆಯುತ್ತದೆ. ಬಳೆಗಾರ ಜೋಗಿ ಜನಾಂಗದವರು ಪೂಜೆ ಮಾಡುತ್ತಾರೆ. ಯುಗಾದಿಯಲ್ಲಿ ವಿಶೇಷ ಪೂಜೆ ನಡೆಯುತ್ತದೆ. ದೇವಿಗೆ ಹಾಲು, ಹಣ್ಣು, ಅನ್ನ ಮಾತ್ರ ನೈವೇದ್ಯ, ದುರ್ಗಾ ಪರಮೇಶ್ವರಿಗೆ ಪ್ರಾಣಿ ಬಲಿ ಕೊಡುತ್ತಾರೆ.

## ಆಧಾರ ಗ್ರಂಥಗಳು

೧. ಶ್ರೀ ರೇಣುಕಾಂಬೆದೇವಿ ಚರಿತ್ರೆ : ಶ್ರೀ ಹಿರೇಣ್ಣೆ ದುಂಡಪ್ಪಾ ಉಮರಜ

೨. ಕರ್ನಾಟಕದ ಇತಿಹಾಸ ಪರಂಪರೆ, ಸಂಪುಟ ೧.

೩. ಎಲ್ಲಮ್ಮನ ಜೋಗತಿಯರು ಹಾಗೂ ದೇವದಾಸಿ ಪದ್ಧತಿ - ಡಾ. ಎಸ್. ಕೆ. ಕಡೆ ತೋಟದ

೪. ರಾಜ್ಯವನುಳಿಸೀತು ರಾಗಿಯ ಕಲ್ಲು - ಬಳ್ಳೆಕೆರೆ ಹನುಮಂತಪ್ಪ

೫. ಸ್ಕಂದ ಪುರಾಣ
೬. ಸೊರಬ ತಾಲ್ಲೂಕು ದರ್ಶನ - ನಾ. ಡಿಸೋಜ
೭. ಜಾನಪದ ವ್ಯಾಸಂಗ - ಅರವಿಂದ ಮಾಲಗತ್ತಿ
೮. ಉದಯಾಸ್ತ (ಕಾದಂಬರಿ) - ಸಫ್ರಾಜ್